ಸೋಮವಾರ, ಜೂನ್ 16, 2025 | ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಉಕ್ಕು ಉತ್ಪಾದನೆ

ಮುಂದಿನ 15 ವರ್ಷಗಳಲ್ಲಿ ಗರಿಷ್ಠ 1.5 ಕೋಟಿ ಟನ್ ಉಕ್ಕನ್ನು ಮರುಬಳಕೆ ವಿಧಾನದ ಮೂಲಕ ಉತ್ಪಾದನೆ ಮಾಡುವ ಗುರಿ ಹೊಂದಲಾಗಿದೆ ಎಂದು ಟಾಟಾ ಸ್ಟೀಲ್‌ನ ಸಿಇಒ ಟಿ.ವಿ.ನರೇಂದ್ರನ್ ಹೇಳಿದ್ದಾರೆ

ಹಾರಾಟ ವಿಳಂಬ

ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನದಲ್ಲಿನ ತಾಂತ್ರಿಕ ದೋಷದಿಂದಾಗಿ, ಗುವಾಹಟಿಯಿಂದ ಕೋಲ್ಕತ್ತಕ್ಕೆ ತೆರಳಬೇಕಿದ್ದ ವಿಮಾನವು 18 ಗಂಟೆ ವಿಳಂಬವಾಗಿ ಹಾರಾಟ ನಡೆಸಿದೆ

46 YEARS OF EXCELLENCE

SRAMAYEVA JAYATHE

NARAYANA®
EDUCATIONAL INSTITUTIONS

MEDICAL MARVELS OF NARAYANA IN NEET 2025

ALL INDIA OPEN CATEGORY RANKS

Somya Sharma
App.No: 250410231562
Classroom Student
AIR 14

K Jeevan Sai Kumar
App.No: 250410773906
Classroom Student
AIR 18

MRINAL KISHORE JHA
Roll. No: 2313103182
nPrep
AIR 4

KESHAV MITTAL
App. No: 250410409767
nPrep
AIR 7

AASHI SINGH
App. No: 250410681718
nPrep
AIR 12

RUPAYAN PAL
App.No: 250410013768
nPrep
AIR 20

ALL INDIA OPEN CATEGORY RANKS IN TOP 100

AIR 35 — Kavish, App. No: 250411147966, nPrep
AIR 47 — Rijul Jain, App. No: 250410000090, nPrep
AIR 49 — Naveen Mittal, App. No: 250410001085, nPrep
AIR 52 — Aditya Yadav, App. No: 250410000964, nPrep
AIR 59 — D Surya Charan, App. No: 250410399051, Classroom Student
AIR 66 — Devyansh Arora, App. No: 250410034438, Classroom Student
AIR 70 — Y Sameer Kumar, App. No: 250410462236, Classroom Student
AIR 71 — B M Khimji Bhai, App. No: 250410161706, nPrep

AIR 73 — Darshan Mule, App. No: 250410008978, nPrep
AIR 75 — Yashashwi Kumar, App. No: 250410007959, nPrep
AIR 77 — Armaan Bery, App. No: 250410305725, nPrep
AIR 80 — Diganth S, App. No: 250410003482, Classroom Student
AIR 87 — Raghav Goyal, App. No: 250410002512, nPrep
AIR 93 — Siddh Vimalbhai Vora, App. No: 250410230256, Classroom Student
AIR 94 — Shah Tejas Twinkle, App. No: 250410552620, nPrep
AIR 95 — Bidisha Majee, App. No: 250410081097, Classroom Student

nPrep: Narayana Digital Learning Programme

Disclaimer: Any inadvertent error published in this advertisement could be brought to our notice

6 Students in Top 20 | 22 Students in Top 100 | 85 Students in Top 1000

nLearn® Online self-learning app

nConnect Tech-enabled performance tracking

ADMISSIONS OPEN

NEET(UG) I JEE(MAIN+ADV.) I JEE (MAIN) I OLYMPIADS I Class 6th TO 12th & 12th PASS

NEW BATCHES FROM 18 JUNE ONWARDS

For test dates, course start dates & direct admission visit website or nearest center.

Scan For Admission

NSAT
NARAYANA SCHOLASTIC APTITUDE TEST
ASPIRE • ASSESS • ACHIEVE
www.nsat.narayanagroup.com

Scholarships worth* ₹ 50+ Crore

Cash Prizes* ₹ 1+ Crore
Online & Offline

*T&C Apply

SCAN to register

Narayana Schools & Colleges in Karnataka

SCHOOLS • BELLANDUR – Ph : 7022293908 • ELECTRONIC CITY (Garvebhavi Palya) Ph : 7892302271. • HSR LAYOUT (HARLUR ROAD) – Ph : 7892294594. • JP NAGAR – Ph : 7022293914. • KORAMANGALA – Ph : 7022294007. •MARATHAHALLI –Ph : 7022293890. • RK LAYOUT (YELACHENAHALLI) – Ph : 7022293884. • BANNERGHATTA ROAD (HULIMAVU) – Ph : 7022293937. • ELECTRONIC CITY (PHASE-II) – Ph: 70220 37240. • BALLARI – Ph: 7022293903. • MARAGONDANAHALLI –Ph : 7022293861. • ADUR – Ph : 7349738563. • KALYAN NAGAR – Ph : 7022293902. • KASTURI NAGAR – Ph : 7022293863. • WHITEFIELD – Ph : 7022960894. • RAMAMURTHY NAGAR – Ph : 7022293867. • MALLASANDRA – Ph : 7899964836. • KR PURAM – Ph: 7022293859. • KAGGADASAPURA – Ph : 7022293844. • TUMKUR – Ph : 73497 38575. • RT NAGAR – Ph : 7022294015. • SAHAKAR NAGAR – Ph : 9591716806. •VIDYARANYAPURA – Ph : 7022293943. • YELAHANKA – Ph: 9632183071. • HOSUR – Ph : 8438653429. • NANDINI LAYOUT – Ph : 7022293870. • NAGARBHAVI – Ph : 7022281466. • UTTARAHALLI – Ph : 7022192738. • MATHIKERE – Ph : 9353845823. • CHANDAPURA – Ph : 7022037238. • GORAVIGERE– Ph: 7022293933.

COLLEGES • BALLARI – Ph: 7022293903 • BANASHANKARI – GIRINAGAR: Ph : 7022293962 • BELLANDUR – Ph: 7022293948 • BYRATHI – Ph: 7022293850. • CHANDAPURA – Ph: 7349738574. • CV RAMAN NAGAR – Ph: 7022293953. • E-CITY PHASE-II – Ph: 7022293930. • HULIMAVU – Ph: 7022293931. • JP NAGAR – Ph: 7022293922. • KADUGODI – Ph: 7022001267. • KASAVANAHALLI – Ph: 7022293858. • KASTURI NAGAR – Ph: 7022224095. • KOLAR – Ph: 7022293962. • MALASANDRA – Ph : 7022001268. • MARATHAHALLI – Ph: 7022293955. • MYSORE – Ph: 7022662586. • NAGARABHAVI – Ph: 7022293879. • RAMAMURTHY NAGAR – Ph: 7022281465. • SAHAKARNAGAR – Ph: 7022293876. • TUMKUR – Ph: 7349738565. • VIDYARANYAPURA – Ph: 7022294002. • KEMPAPURA – DASARAHALLI – Ph: 7022294013. • NELAMANGALA – RESIDENTIAL – Ph: 7022294001. • NELAMANGALA RESIDENTIAL (BOYS/GIRLS) – Ph: 7022294001. • CHEMASANDRA RESIDENTIAL (BOYS) – Ph: 7022001271. • BANDAPURA RESIDENTIAL (GIRLS) – Ph: 7022001271. • SAMETHANAHALLI RESIDENTIAL (BOYS) – Ph: 7337587421.

Toll Free: 1800 102 3344 #YourDreamsAreOurDreams www.narayanagroup.com

ಬಾಪೂಜಿ ವಿದ್ಯಾ ಸಂಸ್ಥೆ (ರಿ.)

ನಾಡಿನ ಹಿರಿಯ ಚೇತನ

95ರ ಅಮೃತ ಪುರುಷರಿಗೆ

ಜನ್ಮದಿನದ ಶುಭಾಶಯಗಳು

ಎಸ್.ಎಸ್. ಮಲ್ಲಿಕಾರ್ಜುನ್

ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಸಚಿವರು
ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ,
ಜಂಟಿ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾ ಸಂಸ್ಥೆ

ಡಾ|| ಪ್ರಭಾ ಮಲ್ಲಿಕಾರ್ಜುನ್

ಸಂಸದರು, ದಾವಣಗೆರೆ ಲೋಕಸಭಾ ಕ್ಷೇತ್ರ
ಸದಸ್ಯರು, ಬಾಪೂಜಿ ವಿದ್ಯಾ ಸಂಸ್ಥೆ

ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರದ ಜನಪ್ರಿಯ ಶಾಸಕರು, ಸತತ 54 ವರ್ಷಗಳ ಕಾಲ ಗೌರವ ಕಾರ್ಯದರ್ಶಿಗಳಾಗಿ ಬಾಪೂಜಿ ವಿದ್ಯಾಸಂಸ್ಥೆಯನ್ನು ಮುನ್ನಡೆಸಿದವರು, ಬಾಪೂಜಿ ವಿದ್ಯಾಸಂಸ್ಥೆಯ ಹೆಸರು ವಿಶ್ವವ್ಯಾಪಿ ಪಸರಿಸಲು ಕಾರಣೀಭೂತರು, ಅದಮ್ಯ ಚೇತನರು, ಸರ್ವ ಜನಾನುರಾಗಿಗಳು, ಧರ್ಮ ಪ್ರವರ್ತರು, ದೀನ ದಲಿತರ ಬಾಳಿಗೆ ಮಿಡಿಯುವ ಅಮೃತ ಪುರುಷರು, ಇಂದಿಗೆ 95ನೇ ಸಂವತ್ಸರಕ್ಕೆ ಕಾಲಿಡುತ್ತಿರುವ

ಡಾ. ಶಾಮನೂರು ಶಿವಶಂಕರಪ್ಪ

ಅವರಿಗೆ ಜನ್ಮದಿನದ ಶುಭಾಶಯಗಳು.

ಶ್ರೀಯುತರು ನೂರ್ಕಾಲ ಬಾಳಲಿ ಎಂದು ಹಾರೈಸುತ್ತೇವೆ.

ಕೆ.ಎ. ಗಿರಿಜಮ್ಮ
ಉಪಾಧ್ಯಕ್ಷರು

ಎ.ಎಸ್. ನಿರಂಜನ್
ಖಜಾಂಚಿ

ಡಾ. ಎ.ಎಸ್. ವೀರಣ್ಣ
ಸದಸ್ಯರು

ಡಾ. ಸಂಪನ್ನ ಮುತಾಲಿಕ್
ಸದಸ್ಯರು

ಬಾಪೂಜಿ ವಿದ್ಯಾಸಂಸ್ಥೆ (ರಿ.), ದಾವಣಗೆರೆ.

ಸೋಮವಾರ, ಜೂನ್ 16, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 166 | ಪುಟ 14
prajavani.net prajavani www.prajavani.net

ಸಭೆ
ನಿತಿನ್ ಗಡ್ಕರಿ ಅವರು ಭಾನುವಾರ ನಾಗ್ಪುರದಲ್ಲಿ ಬಿಜೆಪಿ–ಆರ್‌ಎಸ್‌ಎಸ್ ಸಭೆಯಲ್ಲಿ ಪಾಲ್ಗೊಂಡರು

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಭದ್ರತೆ
ಪಹಲ್ಗಾಮ್‌ನಲ್ಲಿ ಭದ್ರತಾ ಪಡೆಗಳು ಭಾನುವಾರ ಗಸ್ತು ತಿರುಗಿದವು

‘ಪಕ್ಷದ ಬಲವರ್ಧನೆಗಾಗಿ ಪ್ರವಾಸ’ 6
ವಿಮಾನ ಪತನ: 47 ಸಂತ್ರಸ್ತರ ಗುರುತು ಪತ್ತೆ 7

ಇಸ್ರೇಲ್–ಇರಾನ್ ಸಂಘರ್ಷ ತೀವ್ರ

ಜೆರುಸಲೇಂ (ಎಪಿ): ಇರಾನ್‌ನ ರಕ್ಷಣಾ ಕೇಂದ್ರಗಳು, ತೈಲ ಘಟಕಗಳನ್ನು ಗುರಿಯಾಗಿಸಿಕೊಂಡು ಇಸ್ರೇಲ್ ದಾಳಿಯನ್ನು ತೀವ್ರಗೊಳಿಸಿದೆ. ಇದಕ್ಕೆ ಪ್ರತಿಯಾಗಿ ಇರಾನ್ ಕೂಡ ದಾಳಿ ನಡೆಸಿದ್ದು, ಇಸ್ರೇಲ್‌ನ ಹತ್ತು ಮಂದಿ ಮೃತಪಟ್ಟಿದ್ದಾರೆ.

ಟೆಹರಾನ್‌ನಲ್ಲಿರುವ ಇರಾನ್ ರಕ್ಷಣಾ ಸಚಿವಾಲಯದ ಪ್ರಧಾನ ಕಚೇರಿ ಮೇಲೆ ಇಸ್ರೇಲ್ ಭಾನುವಾರ ಕ್ಷಿಪಣಿ ದಾಳಿ ನಡೆಸಿತು. ಇದಕ್ಕೆ ಪ್ರತಿಯಾಗಿ ಇರಾನ್‌ನ ಕ್ಷಿಪಣಿಗಳು, ಇಸ್ರೇಲ್ ವಾಯುರಕ್ಷಣಾ ವ್ಯವಸ್ಥೆಯನ್ನು ಭೇದಿಸಿ, ಅಲ್ಲಿನ ಹಲವು ಕಟ್ಟಡಗಳನ್ನು ನಾಶಗೊಳಿಸಿವೆ.

ಭಾನುವಾರ ಬೆಳಿಗ್ಗೆ ಟೆಹರಾನ್‌ನ ವಿವಿಧೆಡೆ ಸ್ಫೋಟಗಳು ಸಂಭವಿಸಿವೆ.

ಇನ್ನಷ್ಟು ಸುದ್ದಿಗಳು 10

ಚಿನಕುರುಳಿ ಪ್ರಕಾಶ್ ಶೆಟ್ಟಿ

ರಾಜ್ಯದ ಕೆಲವೆಡೆ ವರ್ಷಧಾರೆ

ದ.ಕ, ಉ.ಕ ಜಿಲ್ಲೆಗಳಲ್ಲಿ ಗುಡ್ಡಗಳ ಕುಸಿತ ರೈಲು ಮತ್ತು ವಾಹನ ಸಂಚಾರದಲ್ಲಿ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಮಂಗಳೂರು/ಕಾರವಾರ: ರಾಜ್ಯದ ಕೆಲವು ಭಾಗಗಳಲ್ಲಿ ಭಾನುವಾರ ಮಳೆ ಮುಂದುವರಿದಿದೆ. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಯಾದ್ಯಂತ ನಿರಂತರ ಮಳೆಯಾಗಿದ್ದು, ಅಲ್ಲಲ್ಲಿ ಗುಡ್ಡಗಳು ಕುಸಿದಿವೆ. ಇದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈಲು ಮತ್ತು ವಾಹನ ಸಂಚಾರ ವ್ಯತ್ಯಯವಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಂತರ ಜಿಲ್ಲಾ ಸಂಪರ್ಕ ಕಡಿತಗೊಂಡಿದೆ.

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯ ಸುಂಕದಮಕ್ಕಿ ನೆಮ್ಮಾರು ಸಮೀಪ ಭಾರಿ ಮಳೆಯಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ಪದೇ ಪದೇ ಗುಡ್ಡಕುಸಿತ ಉಂಟಾಗಿದ್ದು, ಶೃಂಗೇರಿಯಿಂದ ಉಡುಪಿ ಮತ್ತು ಮಂಗಳೂರು ಸಂಪರ್ಕಿಸುವ ಮಾರ್ಗ ಕಡಿತಗೊಂಡಿದೆ.

ಮುಂಜಾಗ್ರತಾ ಕ್ರಮವಾಗಿ ತಾತ್ಕಾಲಿಕ ವಾಗಿ ಕೆರೆಕಟ್ಟೆ, ಎಸ್‌.ಕೆ. ಬಾರ್ಡರ್ ಮೂಲಕ ಉಡುಪಿ ಮತ್ತು ಮಂಗಳೂರು ಕಡೆ ಸಾಗುವ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ. ಪರ್ಯಾಯವಾಗಿ ಆಗುಂಬೆ ಮಾರ್ಗದಲ್ಲಿ ಸಂಚರಿಸಲು ಸೂಚಿಸಲಾಗಿದೆ ಎಂದು ಜಿಲ್ಲಾಡಳಿತ ತಿಳಿಸಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಅಗ್ನಿಶಾಮಕ, ಪೊಲೀಸ್ ಸಿಬ್ಬಂದಿ ಮಣ್ಣು ತೆರವು ಕಾರ್ಯಾಚರಣೆಯಲ್ಲಿ ನಿರತರಾಗಿದ್ದಾರೆ. ಸೋಮವಾರ ಬೆಳಿಗ್ಗೆ ವೇಳೆಗೆ ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

ಕೊಡಗಿನಲ್ಲಿ ಸೋಮವಾರ ಶಾಲೆ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಆರು ತಾಲ್ಲೂಕುಗಳ ಶಾಲೆ ಮತ್ತು ಅಂಗನವಾಡಿಗಳಿಗೆ ಸೋಮವಾರ ರಜೆ ಘೋಷಿಸಲಾಗಿದೆ. ಚಿಕ್ಕಮಗಳೂರು, ಮೂಡಿಗೆರೆ, ಕಳಸ, ಶೃಂಗೇರಿ, ಕೊಪ್ಪ, ನರಸಿಂಹರಾಜಪುರ ತಾಲ್ಲೂಕುಗಳ ಶಿಶುಪಾಲನ ಕೇಂದ್ರ, ಅಂಗನವಾಡಿ, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಸೋಮವಾರ ರಜೆ ಘೋಷಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮೀನಾ ನಾಗರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಉಡುಪಿ ಜಿಲ್ಲೆಯಲ್ಲಿ ಬಿಟ್ಟು ಬಿಟ್ಟು ಮಳೆ ಸುರಿದಿದೆ. ಕುಮಟಾ ತಾಲ್ಲೂಕಿನ ದೇವಿಮನೆ ಘಟ್ಟ ಪ್ರದೇಶದಲ್ಲಿ ಪುನಃ ಭೂಕುಸಿತ ಸಂಭವಿಸಿದೆ. ಇದೇ ಘಟ್ಟದಲ್ಲಿ ಶನಿವಾರವೂ ಕುಸಿತ ಉಂಟಾಗಿ ವಾಹನ ಸಂಚಾರ ಸ್ಥಗಿತವಾಗಿತ್ತು.

6

ಮುಖ್ಯಾಂಶಗಳು
- ದೇವಿಮನೆ ಘಟ್ಟದಲ್ಲಿ ಮತ್ತೆ ಭೂಕುಸಿತ
- ಚಿಕ್ಕಮಗಳೂರು: ಶಾಲೆ, ಅಂಗನವಾಡಿಗಳಿಗೆ ರಜೆ
- ಗಾಳಿಯ ರಭಸಕ್ಕೆ ಮರಗಳು ಧರೆಗೆ

ಮಂಗಳೂರು ಸಮೀಪದ ಕೆತ್ತಿಕಲ್‌ನಲ್ಲಿ ಗುಡ್ಡ ಕುಸಿದು ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು ಚಿತ್ರ : ಫಕ್ರುದ್ದೀನ್ ಎಚ್

ಪುದು: ದಾಖಲೆ 18.95 ಸೆಂ.ಮೀ ಮಳೆ

ಭಾನುವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ತಾಸುಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕಿನ ಪುದು ಕೇಂದ್ರದಲ್ಲಿ ರಾಜ್ಯದಲ್ಲೇ ಅತ್ಯಧಿಕ, 18.95 ಸೆಂ.ಮೀ ಮಳೆ ದಾಖಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಜಿಲ್ಲೆಯ 34 ಕೇಂದ್ರಗಳಲ್ಲಿ 10 ಸೆಂ.ಮೀಗಿಂತ ಅಧಿಕ ಮಳೆಯಾಗಿದ್ದು ಪುತ್ತೂರಿನ ಕೆದಂಬಾಡಿಯಲ್ಲಿ ಜಿಲ್ಲೆಯ ಅತಿ ಕಡಿಮೆ, 4.5 ಸೆಂ.ಮೀ ಮಳೆಯಾಗಿದೆ. ಕೊಡಗು ಜಿಲ್ಲೆಯ ಭಾಗಮಂಡಲದಲ್ಲಿ 13 ಸೆಂ.ಮೀನಷ್ಟು ಭಾರಿ ಮಳೆ ಸುರಿದಿದೆ. ಶಾಂತಳ್ಳಿಯಲ್ಲಿ 7 ಸೆಂ.ಮೀ., ಸಂಪಾಜೆ, ವಿರಾಜಪೇಟೆಯಲ್ಲಿ ತಲಾ 6 ಸೆಂ.ಮೀ., ಮಡಿಕೇರಿಯಲ್ಲಿ 5 ಸೆಂ.ಮೀ ಮಳೆಯಾಗಿದೆ.

ಮಹಾರಾಷ್ಟ್ರ, ಕೇರಳದಲ್ಲಿ ಮಳೆ

ಮುಂಬೈ (ಪಿಟಿಐ): ಮಹಾರಾಷ್ಟ್ರದಲ್ಲಿ ಭಾನುವಾರ ಭಾರಿ ಮಳೆ, ಮಿಂಚಿನ ಹೊಡೆತಕ್ಕೆ ಎಂಟು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೇರಳದ ನಾಲ್ಕು ಜಿಲ್ಲೆಗಳಲ್ಲಿ ಮೂರು ಮಂದಿ ಮಳೆಯ ಪರಿಣಾಮಗಳಿಂದಾಗಿ ಹಾಗೂ ಉತ್ತರ ಪ್ರದೇಶದಲ್ಲಿ 11 ಮಂದಿ ಸಿಡಿಲು ಬಡಿದು ಮೃತಪಟ್ಟಿದ್ದಾರೆ ಎಂದು ಅಲ್ಲಿನ ಅಧಿಕಾರಿಗಳು ಹೇಳಿದ್ದಾರೆ.

ಹೆಲಿಕಾಪ್ಟರ್ ಪತನ, ಏಳು ಸಾವು

ಕೇದಾರನಾಥ ಬಳಿಯ ಗೌರಿಕುಂಡ ಅರಣ್ಯದಲ್ಲಿ ಅವಘಡ

ರುದ್ರಪ್ರಯಾಗ (ಉತ್ತರಾಖಂಡ), (ಪಿಟಿಐ): ಕೇದಾರನಾಥದಿಂದ ಗುಪ್ತಕಾಶಿಗೆ ಸಾಗುತ್ತಿದ್ದ ಹೆಲಿಕಾಪ್ಟರ್ ಗೌರಿಕುಂಡ ಅರಣ್ಯ ಪ್ರದೇಶದಲ್ಲಿ ಭಾನುವಾರ ಬೆಳಿಗ್ಗೆ ಪತನಗೊಂಡಿದ್ದು, ಪೈಲಟ್, ಹೆಣ್ಣುಮಗು ಸೇರಿ ಏಳು ಮಂದಿ ಮೃತಪಟ್ಟಿದ್ದಾರೆ.

ಪ್ರತಿಕೂಲ ಹವಾಮಾನ ಅವಘಡಕ್ಕೆ ಕಾರಣವಾಗಿದೆ. ‘ಆರ್ಯನ್ ಏವಿಯೇಷನ್’ ಸಂಸ್ಥೆ ನಿರ್ವಹಣೆ ಮಾಡುತ್ತಿದ್ದ ‘ಬೆಲ್ 407’ ಹೆಲಿಕಾಪ್ಟರ್ ಗೌರಿಕುಂಡ ಮತ್ತು ತ್ರಿಯುಗಿ ನಾರಾಯಣ ನಡುವೆ ಪತನಗೊಂಡಿದೆ. ತಕ್ಷಣವೇ ಬೆಂಕಿ ಹೊತ್ತಿಕೊಂಡಿದ್ದು, ಭಸ್ಮವಾಗಿದೆ.

11

ರುದ್ರಪ್ರಯಾಗ ಜಿಲ್ಲೆಯಲ್ಲಿ ಹೆಲಿಕಾಪ್ಟರ್ ಪತನಗೊಂಡ ಸ್ಥಳದಲ್ಲಿ ಮೃತದೇಹಗಳಿಗಾಗಿ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಸಿಬ್ಬಂದಿ ಶೋಧ ನಡೆಸಿದರು –ಪಿಟಿಐ ಚಿತ್ರ

ಸೇತುವೆ ಕುಸಿತ– ನಾಲ್ವರ ಸಾವು

ಪುಣೆ (ಪಿಟಿಐ): ಪುಣೆಯ ಮಾವಲ್ ತಾಲ್ಲೂಕಿನ ಕುಂದಾಮಲ ಬಳಿ ಇಂದ್ರಾಯಣಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದ್ದ ಕಬ್ಬಿಣದ ಸೇತುವೆ ಭಾನುವಾರ ಮಧ್ಯಾಹ್ನ ಕುಸಿದಿದ್ದು, ನಾಲ್ವರು ಮೃತಪಟ್ಟಿದ್ದಾರೆ.

ಕಳೆದ ಕೆಲ ದಿನಗಳಿಂದ ಇಲ್ಲಿ ಭಾರಿ ಮಳೆ ಆಗಿದ್ದು, ನದಿಯಲ್ಲಿ ನೀರಿನ ಹರಿವು ಹೆಚ್ಚಿತ್ತು. ಆದರೆ, ಸೇತುವೆ ಕುಸಿದ ವೇಳೆ ಮಳೆಯಾಗುತ್ತಿರಲಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪ್ರಾಥಮಿಕ ವರದಿ ಪ್ರಕಾರ, ಇಬ್ಬರು ಸತ್ತಿದ್ದಾರೆ. ಹಲವರು ನೀರಿನಲ್ಲಿ ಕೊಚ್ಚಿ ಕೊಂಡು ಹೋಗಿರುವ ಸಾಧ್ಯತೆ ಇದೆ. ಇದು, ಪ್ರವಾಸಿ ತಾಣವಾಗಿದ್ದು, ವಾರಾಂತ್ಯದಲ್ಲಿ ಹೆಚ್ಚು ಜನ ಇರುತ್ತಾರೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪುಣೆಯ ಜಿಲ್ಲಾಧಿಕಾರಿ ಜಿತೇಂದ್ರ ದುಡಿ ಅವರು, ‘ಒಟ್ಟು 38 ಜನರನ್ನು ರಕ್ಷಿಸಲಾಗಿದೆ. ಗಾಯಗೊಂಡಿರುವ 30 ಜನರನ್ನು ಆಸ್ಪತ್ರೆಗೆ ಸೇರಿಸಲಾಗಿದೆ’ ಎಂದು ತಿಳಿಸಿದ್ದಾರೆ. ‘ಕೊಚ್ಚಿಹೋಗಿರು-ವವರ ಪತ್ತೆಗೆ ಶೋಧ ಕಾರ್ಯ ಕ್ಷಿಪ್ರಗತಿ-ಯಲ್ಲಿ ನಡೆದಿದೆ’ ಎಂದು ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ತಿಳಿಸಿದ್ದಾರೆ.

ಪುಣೆಯ ಮಾವಲ್‌ನಲ್ಲಿ ನಿರ್ಮಿಸಿದ್ದ ಸೇತುವೆ ಭಾನುವಾರ ಕುಸಿಯಿತು –ಪಿಟಿಐಚಿತ್ರ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ

ಕಲಾವಿದರ ಕೈಸೇರದ 'ಮಾಸಾಶನ'

ಮೂರು ತಿಂಗಳಿಂದ ಅಲ್ಪಧನಕ್ಕೆ ನಿರಂತರ ಅಲೆದಾಟ • ಸಂಕಷ್ಟದಲ್ಲಿ ಕಲಾವಿದರು

• ವರುಣ ಹೆಗಡೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡುತ್ತಿದ್ದ 'ಮಾಸಾಶನ' ಮೂರು ತಿಂಗಳಿಂದ ಕಲಾವಿದರ ಕೈಸೇರಿಲ್ಲ. ಇದರಿಂದಾಗಿ ಇಲಾಖೆ ನೀಡುತ್ತಿದ್ದ ಅಲ್ಪ ಧನವನ್ನೇ ಅವಲಂಬಿಸಿದ್ದ ಕಲಾವಿದರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಈ ಆರ್ಥಿಕ ನೆರವು ಬ್ಯಾಂಕ್ ಖಾತೆಗೆ ಜಮಾ ಆಗದ ಕಾರಣ, ಕಲಾವಿದರು–ಸಾಹಿತಿಗಳು ಬ್ಯಾಂಕ್ ಮತ್ತು ಸರ್ಕಾರಿ ಕಚೇರಿಗಳಿಗೆ ಅಲೆದಾಡುತ್ತಿದ್ದಾರೆ.

ರಾಜ್ಯದಲ್ಲಿ ಹತ್ತು ಸಾವಿರಕ್ಕೂ ಅಧಿಕ ಮಂದಿ ಮಾಸಾಶನ ಪಡೆಯುತ್ತಿದ್ದಾರೆ. ಸಂಗೀತ, ನೃತ್ಯ, ನಾಟಕ, ಜಾನಪದ, ಯಕ್ಷಗಾನ, ಬಯಲಾಟ, ಲಲಿತ ಕಲೆ ಸೇರಿ ವಿವಿಧ ಕಲಾ ಪ್ರಕಾರಗಳಲ್ಲಿ ದೀರ್ಘ ಕಾಲ ಸೇವೆ ಸಲ್ಲಿಸಿ, ಕಷ್ಟದ ಸ್ಥಿತಿಯಲ್ಲಿರುವ ಕಲಾವಿದರು ಹಾಗೂ ಸಾಹಿತಿಗಳಿಗೆ ಇಲಾಖೆ ಮಾಸಾಶನ ನೀಡುತ್ತಿದೆ. ಫಲಾನುಭವಿಗಳಿಗೆ 58 ವರ್ಷ ಆಗಿರಬೇಕು. ಆಯ್ಕೆಯಾದ ಕಲಾವಿದರಿಗೆ ಮಾಸಿಕ ₹2 ಸಾವಿರ 'ಮಾಸಾಶನ' ನೀಡಲಾಗುತ್ತಿತ್ತು.

'ಮಾಸಾಶನ'ಕ್ಕೆ ಆಯ್ಕೆಯಾಗಿರುವ ಕಲಾವಿದರು ಹಾಗೂ ಸಾಹಿತಿಗಳಲ್ಲಿ ಕೆಲವರಿಗೆ ಮಾರ್ಚ್ ತಿಂಗಳ ಹಣ ಸಂದಾಯವಾಗಿದ್ದು, ಏಪ್ರಿಲ್ ಮತ್ತು ಮೇ ತಿಂಗಳ ಹಣ ಪಾವತಿಯಾಗಬೇಕಿದೆ. ಇನ್ನೂ ಕೆಲವರಿಗೆ ಮಾರ್ಚ್ ತಿಂಗಳಿಂದಲೇ ಮಾಸಾಶನ ದೊರೆತಿಲ್ಲ. ಜೂನ್ ತಿಂಗಳ ಎರಡನೇ ವಾರ ಕಳೆದರೂ ಮಾಸಾಶನ ಬರದಿರುವುದು ಈಗ ಆತಂಕಕ್ಕೆ ಕಾರಣವಾಗಿದೆ.

ಕನ್ನಡ ಭವನಕ್ಕೆ ಅಲೆದಾಟ

ಮಾಸಾಶನ, ಪ್ರಾಯೋಜಿತ ಕಾರ್ಯಕ್ರಮಗಳ ಹಣ ಪಾವತಿ, ವೈದ್ಯಕೀಯ ಸೌಲಭ್ಯಕ್ಕೆ ಗುರುತಿನ ಚೀಟಿ ಸೇರಿ ವಿವಿಧ ಕಾರ್ಯಗಳ ಸಂಬಂಧ ಕನ್ನಡ ಭವನಕ್ಕೆ ಭೇಟಿ ನೀಡುವ ಕಲಾವಿದರು ಹಾಗೂ ಸಾಹಿತಿಗಳ ಸಂಖ್ಯೆ ಹೆಚ್ಚಲಾರಂಭಿಸಿದೆ. ನಿರ್ದೇಶಕರ ಭೇಟಿಗೆ ಸಂದರ್ಶನ ಸಮಯ ಗೊತ್ತುಪಡಿಸಲಾಗಿದೆ. ಈ ಅವಧಿಯಲ್ಲಿಯೂ ಸಭೆ ಹಾಗೂ ವಿವಿಧ ಕಾರಣ ನೀಡಿ, ಭೇಟಿಗೆ ನಿರಾಕರಿಸಲಾಗುತ್ತಿದೆ ಎಂದು ಕಲಾವಿದರು ದೂರಿದ್ದಾರೆ.

'ಸಂಕಷ್ಟಗಳನ್ನು ಇಲಾಖೆ ನಿರ್ದೇಶಕರಿಗೆ ಮನವರಿಕೆ ಮಾಡಿಸಲು ಅವರ ಭೇಟಿಯೇ ಸಾಧ್ಯವಾಗುತ್ತಿಲ್ಲ. ದೂರದ ಊರುಗಳಿಂದ ಬರುವ ಕಲಾವಿದರು ಸಂಜೆವರೆಗೂ ಕಾಯ್ದು ಮರಳುವ ಸ್ಥಿತಿ ಇದೆ. ಸಮಸ್ಯೆಗಳನ್ನು ನಾವು ಯಾರ ಬಳಿ ಹೇಳಿಕೊಳ್ಳಬೇಕು?' ಎಂದು ಕಲಾವಿದ ಜಯಸಿಂಹ ಎಸ್. ಪ್ರಶ್ನಿಸಿದರು.

ದೊರೆಯದ ಹೆಚ್ಚಳ: ಮಾಸಾಶನವನ್ನು ₹5 ಸಾವಿರಕ್ಕೆ ಹೆಚ್ಚಳ ಮಾಡಬೇಕೆಂದು ಈ ಹಿಂದೆ ಕಲಾವಿದರ ನಿಯೋಗ ಇಲಾಖೆಗೆ ಮನವಿ ಸಲ್ಲಿಸಿ, ಆಗ್ರಹಿಸಿತ್ತು. ಇದಕ್ಕೆ ಮಣಿದ ಇಲಾಖೆ, ಮಾಸಾಶನವನ್ನು ₹3 ಸಾವಿರಕ್ಕೆ ಏರಿಸಲು ನಿರ್ಧರಿಸಿ, ಈ ಬಗ್ಗೆ ಪ್ರಸ್ತಾವವನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿದ್ದರೂ ಅನುಮೋದನೆ ದೊರೆತಿರಲಿಲ್ಲ. ಕಲಾವಿದರ ನಿರಂತರ ಆಗ್ರಹಕ್ಕೆ ಮಣಿದ ಸರ್ಕಾರ, ಮಾರ್ಚ್‌ನಲ್ಲಿ ಮಂಡಿಸಿದ ಬಜೆಟ್‌ನಲ್ಲಿ ₹2,500ಕ್ಕೆ ಹೆಚ್ಚಿಸುವುದಾಗಿ ಘೋಷಿಸಿತ್ತು. ಆದರೆ, ಈ ಹೆಚ್ಚಳವೂ ಕಲಾವಿದರಿಗೆ ಇನ್ನೂ ದೊರೆತಿಲ್ಲ.

'ಎರಡು ತಿಂಗಳಿಂದ ಮಾಸಾಶನ ದೊರೆತಿಲ್ಲ. ಯಾವಾಗ ಬರುತ್ತದೆ ತಿಳಿದಿಲ್ಲ. ಔಷಧ ಖರೀದಿಯಂತಹ ವೆಚ್ಚಗಳನ್ನು ಪಾವತಿಸಲು ಈ ಹಣ ಸಹಕಾರಿಯಾಗಿತ್ತು. ಈಗ ಕುಟುಂಬದ ಸದಸ್ಯರನ್ನು ಅವಲಂಬಿಸಬೇಕಾಗಿದೆ' ಎಂದು ದೇವನಹಳ್ಳಿಯ ಜಾನಪದ ಕಲಾವಿದರೊಬ್ಬರು ಬೇಸರ ವ್ಯಕ್ತಪಡಿಸಿದರು.

> **ಮಾಸಾಶನದ ಅನುದಾನಕ್ಕೆ ಸಂಬಂಧಿಸಿದಂತೆ ಕಳೆದ ವಾರವೇ ಆದೇಶ ಹೊರಡಿಸಿ, ಖಜಾನೆಗೆ ಕಳುಹಿಸಲಾಗಿದೆ. ಶೀಘ್ರದಲ್ಲಿಯೇ ಮಾಸಾಶನ ಬಿಡುಗಡೆಯಾಗಲಿದೆ**
> **ಗಾಯತ್ರಿ ಕೆ.ಎಂ.,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ

> **ಅಲ್ಪ ಧನಕ್ಕೂ ಕಲಾವಿದರು ಅಲೆದಾಟ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಮೂರು ತಿಂಗಳಿಂದ ಮಾಸಾಶನ ಬಂದಿಲ್ಲ. ಯಾವಾಗ ಬರುತ್ತದೆ ಎಂಬ ಖಚಿತತೆಯೂ ಇಲ್ಲ**
> **ವಂದನಾ ಗಂಗಾವತಿ,** ಕಲಾವಿದೆ

ಚಿಟಿಕೆ ಸುದ್ದಿ

ಚಿತ್ರಕಲಾ ಸ್ಪರ್ಧೆ, ಪ್ರಶಸ್ತಿ ಪ್ರದಾನ

ಬೆಂಗಳೂರು: ಕಲಾದರ್ಪಣ ಆರ್ಟ್ ರಿಫ್ಲೆಕ್ಟ್ಸ್ ಸಂಸ್ಥೆಯ 'ಪ್ರತಿಭಾ ವೇದಿಕೆ ಸೀಸನ್ 5' ಸಂಭ್ರಮದ ಅಂಗವಾಗಿ ಇದೇ 21ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆ ಹಾಗೂ ಕಲಾದರ್ಪಣ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಂಡಿದೆ. ಈ ಸ್ಪರ್ಧೆಯು ನಾಲ್ಕು ವಿಭಾಗಗಳಲ್ಲಿ ನಡೆಯಲಿದೆ. 8 ವರ್ಷದೊಳಗಿನವರು, 12 ವರ್ಷದೊಳಗಿನವರು, 18 ವರ್ಷದೊಳಗಿನವರು ಮತ್ತು 18 ವರ್ಷ ಮೇಲ್ಪಟ್ಟವರಿಗೆ ವಿಭಾಗವಾರು ನಡೆಯಲಿದೆ.

ಸಮಾಜ ಸೇವಕರಾದ ಟಿ.ವಿ. ಬಾಬು, ಎಂ. ಶಿವರಾಜು, ಶೈಲಶ್ರೀ ಹುಗ್ಗಿ, ಗಾಯಕರಾದ ಅನನ್ಯ ಪ್ರಸಾದ್ ಹಾಗೂ ಆಯುಷ್ ಮರಾಠ ಅವರು ಕಲಾದರ್ಪಣ ವಾರ್ಷಿಕ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ವಿಶ್ವ ಪರಿಸರ ದಿನಾಚರಣೆ

ಬೆಂಗಳೂರು: ಉಲ್ಲಾಳು ಉಪಕಾರ ಬಡಾವಣೆಯ 'ಉರ್ವ' ಸಂಘದಿಂದ ಭಾನುವಾರ ವಿಶ್ವ ಪರಿಸರ ದಿನ ಆಚರಿಸಲಾಯಿತು.

ಪರಿಸರ ದಿನಾಚರಣೆಯ ಅಂಗವಾಗಿ ನಡೆಸಿದ ಟೆರೇಸ್ ಗಾರ್ಡನ್, ಹೊರಾಂಗಣ ಗಾರ್ಡನ್ ಸ್ಪರ್ಧೆ, ಪರಿಸರದ ಬಗ್ಗೆ ಚಿತ್ರಕಲಾ ಸ್ಪರ್ಧೆ, ರಸಪ್ರಶ್ನೆ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಪೌರಕಾರ್ಮಿಕರನ್ನು ಹಾಗೂ ಹೊಸ ಉದ್ಯಾನಗಳಿಗೆ ಶ್ರಮಿಸಿದವರನ್ನು ಸನ್ಮಾನಿಸಲಾಯಿತು. ಉರ್ವ ಮತ್ತು ರೋಟರಿ ಉಲ್ಲಾಳು ಜಂಟಿ ಸಹಯೋಗದಲ್ಲಿ ನಿರ್ವಹಿಸುವ 'ರಾಷ್ಟ್ರಕವಿ ಕುವೆಂಪು ಉದ್ಯಾನ' ಮತ್ತು 'ಸರ್ ಎಂ. ವಿಶ್ವೇಶ್ವರಯ್ಯ ಉದ್ಯಾನ'ವನ್ನು ಉದ್ಘಾಟಿಸಲಾಯಿತು. ಪರಿಸರ ದಿನದ ಅಂಗವಾಗಿ ಗಿಡ ನೆಡಲಾಯಿತು.

ಶಾಸಕ ಎಸ್.ಟಿ. ಸೋಮಶೇಖರ್, 'ಉರ್ವ' ಅಧ್ಯಕ್ಷ ರವಿಕುಮಾರ್ ಮತ್ತು ಕಾರ್ಯದರ್ಶಿ ವಿಜಯಭಾಸ್ಕರ್, ರೋಟರಿ ಉಲ್ಲಾಳು ಅಧ್ಯಕ್ಷ ಸುಂದರ್, ಕಾರ್ಯಕರ್ತೆ ಸುಮಾ ಜನಾರ್ದ ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

'ಸಹೃದಯಿ ಸಾಹಿತಿ ಎಚ್‌ಎಸ್‌ವಿ'

ಕೆಂಗೇರಿ: 'ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಛಾಪು ಮೂಡಿಸಿದ್ದ ಎಚ್.ಎಸ್. ವೆಂಕಟೇಶಮೂರ್ತಿ ಅವರು, ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡಿದ್ದರು' ಎಂದು ಕವಿ ಬಿ.ಆರ್. ಲಕ್ಷ್ಮಣರಾವ್ ಸ್ಮರಿಸಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಇಲ್ಲಿನ ಶೇಷಾದ್ರಿಪುರಂ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 'ಎಚ್.ಎಸ್.ವೆಂಕಟೇಶಮೂರ್ತಿ ನುಡಿ ನಮನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶದಿಂದ ಬಂದ ಎಚ್‌ಎಸ್‌ವಿ, ಸಾಹಿತ್ಯ ಲೋಕದಲ್ಲಿ ತಮ್ಮ ಅಗಾಧ ಪ್ರತಿಭೆ ಹಾಗೂ ಪರಿಶ್ರಮದಿಂದ ಯಾವುದೇ ಬೆಂಬಲವಿಲ್ಲದೆ ಬೆಳೆದು ಬಂದರು ಎಂದು ಶ್ಲಾಘಿಸಿದರು.

ರಂಗಕರ್ಮಿ ಶ್ರೀನಿವಾಸ್ ಜಿ ಕಪ್ಪಣ್ಣ ಮಾತನಾಡಿ, 'ಸಹಕಾರ ಮನೋಭಾವ ಹೊಂದಿದ್ದ ಎಚ್‌ಎಸ್‌ವಿ, ಕಲಾವಿದನ ಸೃಜನಶೀಲತೆಗೂ ಮನ್ನಣೆ ನೀಡಿ ಬದಲಾವಣೆಗೆ ಮುಕ್ತ ಅವಕಾಶ ನೀಡುತ್ತಿದ್ದರು' ಎಂದರು.

ಬೆಂಗಳೂರು ನಗರ ಜಿಲ್ಲೆ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಪ್ರಕಾಶ್ ಮೂರ್ತಿ ಮಾತನಾಡಿ, 'ಪುತಿನ ಕುರಿತ ನಾಟಕ ಎಚ್‌ಎಸ್‌ವಿ ಅವರ ಕೊನೆಯ ಸಾಹಿತ್ಯಿಕ ಕೃಷಿಯಾಗಿದೆ. ಕೆಲ ಕಾರಣಾಂತರಗಳಿಂದ ನಾಟಕ ಮುದ್ರಣಕ್ಕೆ ಹಿನ್ನಡೆಯಾಗಿದೆ. ಎಲ್ಲ ಆರ್ಥಿಕ ವೆಚ್ಚಗಳನ್ನು ಭರಿಸಿ ಈ ನಾಟಕವನ್ನು ಮುದ್ರಿಸಿ ಲೋಕಾರ್ಪಣೆ ಮಾಡಲು ಸಾಹಿತ್ಯ ಪರಿಷತ್ತು ಸಿದ್ಧವಿದೆ' ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಯಶವಂತಪುರ ಕ್ಷೇತ್ರ ಘಟಕದ ಅಧ್ಯಕ್ಷ ಎಚ್.ಎಸ್.ಸುಧೀಂದ್ರ ಕುಮಾರ್ ಮಾತನಾಡಿದರು. ಗಾಯಕಿ ಸಂಗೀತಾ ಕಟ್ಟಿ ಎಚ್.ಎಸ್.ವಿ ವಿರಚಿತ ಹಾಡುಗಳನ್ನು ಸಾದರಪಡಿಸಿದರು. ಮುಖಂಡರಾದ ವಿ.ವಿ ಸತ್ಯನಾರಾಯಣ, ಶಿವಸ್ವಾಮಿ ಉಪಸ್ಥಿತರಿದ್ದರು.

'ಸಮ ಸಮಾಜ ನಿರ್ಮಾಣಕ್ಕೆ ಯತ್ನಿಸಿ'

ರಾಜರಾಜೇಶ್ವರಿನಗರ: 'ಸರ್ವ ಜನಾಂಗದವರನ್ನು ಸಹೋದರರಂತೆ ಕಾಣುತ್ತಾ, ಸಮ ಸಮಾಜವನ್ನು ಕಟ್ಟುವ ಮೂಲಕ ಭಗವಂತನನ್ನು ಕಾಣಲು ಪ್ರಯತ್ನಿಸಬೇಕಾಗಿದೆ' ಎಂದು ರಾಜಸ್ಥಾನದ ಸೀರ್ವಿ ಸಮಾಜದ ಧರ್ಮಗುರು ಮಾಧವ ಸಿಂಗ್ ಅವರು ಕರೆ ನೀಡಿದರು.

ಸೀರ್ವಿ ಸಮಾಜ ಲಗ್ಗೆರೆಯಲ್ಲಿ ಹಮ್ಮಿಕೊಂಡಿದ್ದ ಆಯಿ ಮಾತಾಜಿ ದೇವಸ್ಥಾನದ ಪ್ರಾಣ ಪ್ರತಿಷ್ಠಾಪನೆ, ಪೀಠ ಸ್ಥಾಪನೆ ಮತ್ತು ಅಖಂಡ ಜ್ಯೋತಿ ಪ್ರಜ್ವಲನ ಮಹೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಜಗತ್ತಿನಲ್ಲಿ ಶಾಂತಿ ವಾತಾವರಣ ನಿರ್ಮಾಣವಾಗಬೇಕು. ಎಳೆ ವಯಸ್ಸಿನಲ್ಲಿಯೆ ಮಕ್ಕಳನ್ನು ಸಂಸ್ಕಾರ, ಮಾನವೀಯತೆ, ಗುರು ಹಿರಿಯರನ್ನು ಗೌರವಿಸುವ, ದುಶ್ಚಟಗಳಿಂದ ದೂರಮಾಡಿ ಉತ್ತಮ ದಾರಿಯಲ್ಲಿ ಬದುಕುವಂತಹ ವಾತಾವರಣದಲ್ಲಿ ಬೆಳೆಸಬೇಕು ಎಂದು ಕಿವಿಮಾತು ಹೇಳಿದರು.

'ಪವನ ವಿದ್ಯುತ್ ಉತ್ಪಾದನೆಗೆ ಹೆಚ್ಚಿನ ಒತ್ತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: '2030ರ ವೇಳೆಗೆ ದೇಶದ ಒಟ್ಟಾರೆ ವಿದ್ಯುತ್ ಉತ್ಪಾದನೆಯಲ್ಲಿ ನವೀಕರಿಸಬಹುದಾದ ಇಂಧನದ ಪಾಲನ್ನು ಶೇ 50ಕ್ಕೆ ಏರಿಸಲಾಗುತ್ತದೆ. 2070ರ ವೇಳೆಗೆ ಇಂಗಾಲದ ಹೊರಸೂಸುವಿಕೆಯನ್ನು ಶೂನ್ಯಕ್ಕೆ ತರುವ ಗುರಿ ಸಾಧಿಸಬೇಕಿದೆ. ಈ ನಿಟ್ಟಿನಲ್ಲಿ ಪವನ ವಿದ್ಯುತ್ ಉತ್ಪಾದನೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ' ಎಂದು ಕೇಂದ್ರದ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.

'ವಿಶ್ವ ಪವನ ದಿನ–2025' ಅಂಗವಾಗಿ ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ಪವನ್-ಉರ್ಜಾ: ಪವರಿಂಗ್ ದಿ ಫ್ಯೂಚರ್ ಆಫ್ ಇಂಡಿಯಾ' ಸಮಾರಂಭದಲ್ಲಿ ಅವರು ಮಾತನಾಡಿದರು.

'ಪವನ ವಿದ್ಯುತ್‌ನಲ್ಲಿ ಭಾರತ ಜಾಗತಿಕವಾಗಿ 4ನೇ ಸ್ಥಾನದಲ್ಲಿದೆ. 2030ರ ವೇಳೆಗೆ ನವೀಕರಿಸಬಹುದಾದ ಇಂಧನ ಉತ್ಪಾದನೆಯನ್ನು 500 ಗಿಗಾವಾಟ್‌ಗೆ ಹೆಚ್ಚಿಸಲು ಭಾರತ ಬದ್ಧವಾಗಿದೆ. ಪವನ ವಿದ್ಯುತ್ ಕ್ಷೇತ್ರದಿಂದಲೇ 100 ಗಿಗಾವಾಟ್ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಲಾಗಿದೆ' ಎಂದು ವಿವರಿಸಿದರು.

'ವಿಶ್ವ ಪವನ ದಿನ–2025' ಅಂಗವಾಗಿ ಆಯೋಜಿಸಿದ್ದ ಸಮಾರಂಭದಲ್ಲಿ ಪ್ರಲ್ಹಾದ ಜೋಶಿ ಅವರಿಂದ ಕೆ.ಜೆ.ಜಾರ್ಜ್ ಅವರು ಪ್ರಶಸ್ತಿ ಸ್ವೀಕರಿಸಿದರು. ಗೌರವ್ ಗುಪ್ತ ಮತ್ತಿತರರು ಹಾಜರಿದ್ದರು

ಇಂಧನ ಸಚಿವ ಕೆ.ಜೆ.ಜಾರ್ಜ್ ಮಾತನಾಡಿ, '2025ರ ಮೇ ವೇಳೆಗೆ ರಾಜ್ಯದಲ್ಲಿ ಪವನ ವಿದ್ಯುತ್ ಉತ್ಪಾದನೆ ಸಾಮರ್ಥ್ಯ 7,351 ಮೆಗಾವಾಟ್ ಇತ್ತು. ಕಳೆದ ಆರ್ಥಿಕ ವರ್ಷದಲ್ಲಿ 1,331 ಮೆಗಾವಾಟ್ ಸೇರ್ಪಡೆ ಮಾಡುವ ಮೂಲಕ ದೇಶದಲ್ಲೇ ಅಗ್ರ ಸ್ಥಾನದಲ್ಲಿದ್ದೇವೆ' ಎಂದು ತಿಳಿಸಿದರು.

1331.48 ಮೆಗಾವಾಟ್ ಸೇರ್ಪಡೆ ಮಾಡುವ ಮೂಲಕ ಕರ್ನಾಟಕ ಪ್ರಥಮ ಸ್ಥಾನದಲ್ಲಿದ್ದರೆ, ತಮಿಳುನಾಡು (1136.37 ಮೆಗಾವಾಟ್) ಎರಡನೇ ಸ್ಥಾನ, ಗುಜರಾತ್ (954.74 ಮೆಗಾವಾಟ್) ಮೂರನೇ ಸ್ಥಾನದಲ್ಲಿದೆ. ಕಳೆದ ಸಾಲಿನಲ್ಲಿ ಗುಜರಾತ್ ಪ್ರಥಮ, ಕರ್ನಾಟಕ ಎರಡನೇ ಹಾಗೂ ತಮಿಳುನಾಡು ಮೂರನೇ ಸ್ಥಾನದಲ್ಲಿತ್ತು.

ಕಾರ್ಯಕ್ರಮದಲ್ಲಿ ಕೇಂದ್ರದ ನವ ಮತ್ತು ನವೀಕರಿಸಬಹುದಾದ ಇಂಧನ ಖಾತೆ ರಾಜ್ಯ ಸಚಿವ ಶ್ರೀಪಾದ್ ನಾಯ್ಕ್, ಕೇಂದ್ರದ ನವ ಮತ್ತು ನವೀಕರಿಸಬಹುದಾದ ಇಂಧನ ಇಲಾಖೆ ಕಾರ್ಯದರ್ಶಿ ಸಂತೋಷ್ ಕುಮಾರ್ ಸಾರಂಗಿ, ರಾಜ್ಯ ಸರ್ಕಾರದ ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ರಾಜ್ಯ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮದ (ಕ್ರೆಡಲ್) ಅಧ್ಯಕ್ಷ ಟಿ.ಡಿ.ರಾಜೇಗೌಡ, ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪ್ಪಯ್ಯ ಮತ್ತಿತ್ತರರು ಉಪಸ್ಥಿತರಿದ್ದರು.

> ನವೀಕರಿಸಬಹುದಾದ ಇಂಧನ ಕ್ಲಸ್ಟರ್ ಕಾರ್ಯಕ್ರಮದಡಿ, 5 ಗಿಗಾವಾಟ್‌ಗಿಂತ ಹೆಚ್ಚು ಪವನ ವಿದ್ಯುತ್ ಸೇರ್ಪಡೆಗೊಳಿಸಲಿದ್ದೇವೆ. ಇದಕ್ಕಾಗಿ 20ಕ್ಕೂ ಹೆಚ್ಚು ಉಪ ಕೇಂದ್ರಗಳು, 400 ಕೆ.ವಿ. ಕಾರಿಡಾರ್‌ಗಳು ಹಾಗೂ ನವೀಕರಿಸಬಹುದಾದ ಇಂಧನದ ಮೀಸಲು ವಲಯದಂತಹ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸುತ್ತಿದ್ದೇವೆ
> **ಕೆ.ಜೆ.ಜಾರ್ಜ್,** ಇಂಧನ ಸಚಿವ

ಪ್ರೀತಿಯ ನೆನಪಿನಲ್ಲಿ
ಮೂರನೇ ವರ್ಷದ ವಾರ್ಷಿಕ ಪುಣ್ಯಸ್ಮರಣೆ

ಶ್ರೀಮತಿ ಜಿ. ಸ್ವರ್ಣಪ್ರಭ

ನೀವು ನಮ್ಮ ಹೃದಯವನ್ನು ಪ್ರೀತಿ, ಸ್ಫೂರ್ತಿ ಮತ್ತು ಉತ್ತೇಜನದಿಂದ ಸ್ಪರ್ಶಿಸಿದ ಪ್ರತಿ ಬಾರಿಯೂ ನೀವು ಅಮರರಾದಿರಿ. ನೀವು ನಮ್ಮ ನೆನಪುಗಳಲ್ಲಿ, ನಂಬಿಕೆಗಳಲ್ಲಿ ಮತ್ತು ನಮ್ಮ ಕಾರ್ಯಗಳಲ್ಲಿ ಜೀವಂತವಾಗಿದ್ದೀರಿ.

ಶ್ರೀ ಬಿ.ಎನ್. ಗೋಪಾಲ ಗೌಡ ಮತ್ತು ದುಃಖತಪ್ತ ಕುಟುಂಬ ವರ್ಗ

ಸೋನಿಯಾ ಗಾಂಧಿ ಆಸ್ಪತ್ರೆಗೆ ದಾಖಲು

ನವದೆಹಲಿ (ಪಿಟಿಐ): ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಹೊಟ್ಟೆಗೆ ಸಂಬಂಧಿಸಿದ ಸಮಸ್ಯೆಯಿಂದಾಗಿ ಭಾನುವಾರ ದೆಹಲಿಯ ಸರ್ ಗಂಗಾ ರಾಮ್ ಆಸ್ಪತ್ರೆಗೆ ದಾಖಲಾದರು.

'ಸೋನಿಯಾ ಅವರು ಭಾನುವಾರ ರಾತ್ರಿ 9 ಗಂಟೆ ಸುಮಾರಿಗೆ ಆಸ್ಪತ್ರೆಗೆ ಬಂದು ತಪಾಸಣೆಗೆ ಒಳಗಾದರು. ಅವರನ್ನು ಗ್ಯಾಸ್ಟ್ರೋಎಂಟರಾಲಜಿ ವಿಭಾಗದಲ್ಲಿ ದಾಖಲು ಮಾಡಿಕೊಳ್ಳಲಾಯಿತು. ಅವರ ಆರೋಗ್ಯ ಸ್ಥಿರವಾಗಿದೆ' ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ಜೂನ್ 9ರಂದು ಸೋನಿಯಾ ಗಾಂಧಿ ಅವರು ಸರ್ ಗಂಗಾ ರಾಮ್ ಆಸ್ಪತ್ರೆಗೆ ತೆರಳಿ ಚಿಕಿತ್ಸೆಗೆ ದಾಖಲಾಗಿದ್ದರು.

ಬೈಕ್ ಟ್ಯಾಕ್ಸಿ ವಿರುದ್ಧ ಇಂದಿನಿಂದ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಕ್ ಟ್ಯಾಕ್ಸಿ ಸೇವೆ ಸ್ಥಗಿತಗೊಳಿಸಬೇಕು ಎಂದು ಏಕಸದಸ್ಯ ನ್ಯಾಯಪೀಠ ನೀಡಿರುವ ಆದೇಶಕ್ಕೆ ತಡೆ ನೀಡಲು ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ನಿರಾಕರಿಸಿದ್ದು, ಸಾರಿಗೆ ಅಧಿಕಾರಿಗಳು ಸೋಮವಾರದಿಂದ ಬೈಕ್ ಟ್ಯಾಕ್ಸಿಗಳ ವಿರುದ್ಧ ಕ್ರಮ ಕೈಗೊಳ್ಳಲಿದ್ದಾರೆ.

'ಮೋಟಾರು ವಾಹನ ಕಾಯ್ದೆ–1988ರ ಕಲಂ 93ರ ಅನುಸಾರ ರಾಜ್ಯ ಸರ್ಕಾರ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವ ತನಕ ಸಂಬಂಧಿತ ಸಂಸ್ಥೆಗಳಾದ ಓಲಾ, ಉಬರ್ ಮತ್ತು ರ್‍ಯಾಪಿಡೊ ಬೈಕ್ ಟ್ಯಾಕ್ಸಿ ಸೇವೆ ಸ್ಥಗಿತಗೊಳಿಸಬೇಕು' ಎಂದು ಏಕಸದಸ್ಯ ನ್ಯಾಯಪೀಠ ಆದೇಶ ನೀಡಿತ್ತು.

ಈ ಆದೇಶದ ವಿರುದ್ಧ ಉಬರ್ ಇಂಡಿಯಾ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್', 'ರೋಪ್ಪೆನ್ ಟ್ರಾನ್ಸ್‌ಪೋರ್ಟೇಶನ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ (ರ್‍ಯಾಪಿಡೊ)' ಮತ್ತು 'ಎಎನ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ (ಓಲಾ)' ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿ 'ಬೈಕ್ ಟ್ಯಾಕ್ಸಿ ಸೇವೆಯನ್ನು ರಾಜ್ಯದಲ್ಲಿ ಮುಂದುವರಿಸಲು ನಿರ್ದೇಶಿಸಬೇಕು' ಎಂದು ಕೋರಿದ್ದವು. ಆದರೆ, ಹೈಕೋರ್ಟ್ ವಿಭಾಗೀಯ ನ್ಯಾಯಪೀಠವು ನಿರಾಕರಿಸಿತ್ತು.

ಜೂನ್ 16ರಿಂದ ಬೈಕ್ ಟ್ಯಾಕ್ಸಿಗಳು ಪ್ರಯಾಣಿಕರನ್ನು ಕರೆದೊಯ್ದರೆ ಮುಟ್ಟುಗೋಲು ಹಾಕಿಕೊಳ್ಳುವ, ₹2,000ದಿಂದ ₹10 ಸಾವಿರದವರೆಗೆ ದಂಡ ಬೀಳುವ ಸಾಧ್ಯತೆ ಇದೆ. ಮೂರು ತಿಂಗಳಿನಿಂದ ಒಂದು ವರ್ಷದವರೆಗೆ ಜೈಲು ಶಿಕ್ಷೆಗೂ ಅವಕಾಶವಿದೆ.

'ಬೈಕ್ ಟ್ಯಾಕ್ಸಿಗಳನ್ನು ಸ್ಥಗಿತಗೊಳಿಸಬೇಕು ಎಂಬ ಹೈಕೋರ್ಟ್ ಆದೇಶವನ್ನು ಜಾರಿಗೊಳಿಸಲು ಸಾರಿಗೆ ಅಧಿಕಾರಿಗಳು ಸಿದ್ಧರಿದ್ದಾರೆ' ಎಂದು ಸಾರಿಗೆ ಇಲಾಖೆಯ ಕಾರ್ಯದರ್ಶಿ ಎನ್.ವಿ. ಪ್ರಸಾದ್ ತಿಳಿಸಿದ್ದಾರೆ.

'ಹೈಕೋರ್ಟ್ ಆದೇಶವನ್ನು ಬೈಕ್ ಟ್ಯಾಕ್ಸಿ ಕಂಪನಿಗಳು ಹೇಗೆ ಪಾಲನೆ ಮಾಡುತ್ತವೆ ಎಂದು ನೋಡಿಕೊಂಡು ಕ್ರಮ ಕೈಗೊಳ್ಳಲಾಗುವುದು' ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ ತಿಳಿಸಿದ್ದಾರೆ.

ಸಿದ್ದರಾಮಯ್ಯ, ರಾಹುಲ್ ಗಾಂಧಿಗೆ ಪತ್ರ

'ವಿದ್ಯಾರ್ಥಿಗಳು, ದಿನಗೂಲಿ ಮಾಡುವವರು, ಸಹಾಯಕರು, ಪೋಷಕರು, ಉದ್ಯೋಗಗಳಿಲ್ಲದವರೆಲ್ಲ ಸೇರಿ ಬೈಕ್ ಟ್ಯಾಕ್ಸಿ ಚಾಲಕರಾಗಿ ಕಾರ್ಯ ನಿರ್ವಹಿಸುತ್ತಿದ್ದೇವೆ. ಕೋವಿಡ್ ನಂತರ ಬೇರೆ ಉದ್ಯೋಗ ಸಿಗಲಿಲ್ಲ. ಒಂದು ಲಕ್ಷಕ್ಕೂ ಅಧಿಕ ಮಂದಿ ಗಿಗ್ ಕಾರ್ಮಿಕರಾಗಿ ಇದರಲ್ಲಿ ಕೆಲಸ ಮಾಡುತ್ತಿದ್ದೇವೆ. ನಮ್ಮ ಕೆಲಸವನ್ನು ರಾತ್ರೋರಾತ್ರಿ ನಿಷೇಧಿಸಬೇಡಿ' ಎಂದು ಬೈಕ್ ಟ್ಯಾಕ್ಸಿ ಅಸೋಸಿಯೇಶನ್ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಗೆ ಪತ್ರ ಬರೆದಿದೆ.

'ಬೈಕ್ ಟ್ಯಾಕ್ಸಿಗೆ ಸಂಬಂಧಿಸಿದಂತೆ ಪರವಾನಗಿ, ತರಬೇತಿ ಮತ್ತು ವಿಮೆಗಾಗಿ ಸ್ಪಷ್ಟ ನಿಯಮಗಳನ್ನು ಸಾರಿಗೆ ಇಲಾಖೆ ರೂಪಿಸಬೇಕಿತ್ತು. ಅದನ್ನು ಬಿಟ್ಟು ನಮ್ಮ ಆದಾಯದ ಮೂಲವನ್ನೇ ನಿಷೇಧಿಸಲು ಇಲಾಖೆ ಹೊರಟಿದೆ' ಎಂದು ಸಂಘದ ಅಧ್ಯಕ್ಷ ಮೊಹಮ್ಮದ್ ಸಲೀಂ ಪತ್ರದಲ್ಲಿ ತಿಳಿಸಿದ್ದಾರೆ.



ಸಿ.ಎಸ್. ತಿಪ್ಪೇಸ್ವಾಮಿ, ಡಿ. ಶಿವಶಂಕರ್, ಮೂಡ್ನಾಕೂಡು ಚಿನ್ನಸ್ವಾಮಿ, ಮಹಾದೇವಯ್ಯ ಕಲ್ಲಾರೆಪುರ, ನ್ಯಾನಲೋಕ ಭಂತೇಜಿ ಅವರು ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಬುದ್ಧ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು – ಪ್ರಜಾವಾಣಿ ಚಿತ್ರ

'ಬೌದ್ಧರಲ್ಲಿ ಆರು ಇಂದ್ರಿಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮನಸ್ಸಿನ ಬಗ್ಗೆ ಬುದ್ಧ ವಿಮರ್ಶೆ ನಡೆಸಿದಷ್ಟು ಮತ್ತ್ಯಾರೂ ನಡೆಸಿಲ್ಲ. ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮ ಎಂಬ ಪಂಚೇಂದ್ರಿಯಗಳಷ್ಟೇ ಅಲ್ಲ. ಮನಸ್ಸು ಸೇರಿ ಆರು ಇಂದ್ರಿಯಗಳು ಎಂಬುದನ್ನು ಬೌದ್ಧ ಧರ್ಮ ಹೇಳುತ್ತದೆ' ಎಂದು ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ತಿಳಿಸಿದರು.

ಭಾರತೀಯ ವಿದ್ಯಾರ್ಥಿ ಸಂಘ (ಬಿವಿಎಸ್) ಭಾನುವಾರ ಹಮ್ಮಿಕೊಂಡಿದ್ದ 'ಬುದ್ಧ ಫೆಸ್ಟ್–2025' ಕಾರ್ಯಕ್ರಮದಲ್ಲಿ ಅವರು ಧಮ್ಮೋಪನ್ಯಾಸ ನೀಡಿದರು.

ಬೇರೆ ಧರ್ಮಗಳಲ್ಲಿ ಮನಸ್ಸಿನ ಬಗ್ಗೆ ಪ್ರಸ್ತಾಪಗಳಾಗಿರುತ್ತವೆ. ಆದರೆ, ದೀರ್ಘ ಮತ್ತು ಆಳವಾದ ಚಿಂತನೆಗಳು ಸಿಗುವುದಿಲ್ಲ. ಎಲ್ಲ ಮನೋವಿಜ್ಞಾನಿಗಳು ಹುಟ್ಟುವ ಮೊದಲೇ ಬುದ್ಧ ಮಾತನಾಡಿದ್ದರು. ಧಮ್ಮಪದದ ಮೊದಲ ಗಾಥೆಯೇ ಮನಸ್ಸಿಗೆ ಸಂಬಂಧಿಸಿದ್ದಾಗಿದೆ. ಪಾಶ್ಚಿಮಾತ್ಯ ಮನೋವಿಜ್ಞಾನಿಗಳು ಬುದ್ಧನ ಚಿಂತನೆಗಳನ್ನು ಇಟ್ಟುಕೊಂಡೇ ಮನೋವಿಜ್ಞಾನವನ್ನು ವಿಸ್ತರಿಸುತ್ತಿದ್ದಾರೆ ಎಂದು ತಿಳಿಸಿದರು.

ಯಾವುದೇ ವಸ್ತು ಹೇಗಿದೆಯೋ ಹಾಗೇ ವಿವರಿಸಬೇಕು. ಕಲ್ಪಿಸಿಕೊಂಡು ಬೇರೆ ಹೇಳಬಾರದು ಎಂದು ಬೌದ್ಧಧರ್ಮ ಹೇಳುತ್ತದೆ. ಅದಕ್ಕಾಗಿಯೇ ಬೌದ್ಧಧರ್ಮ ವೈಜ್ಞಾನಿಕ ಧರ್ಮವಾಗಿದೆ ಎಂದರು.

ನ್ಯಾನಲೋಕ ಭಂತೇಜಿ ಸಾನ್ನಿಧ್ಯ ವಹಿಸಿದ್ದರು. ಬೌದ್ಧ ಉಪಾಸಕ ಶಿವಲಿಂಗ ಬಿ.ಎನ್. ಅಧ್ಯಕ್ಷತೆ ವಹಿಸಿದ್ದರು. ಸ್ಫೂರ್ತಿ ಧಾಮದ ಅಧ್ಯಕ್ಷ ಎಸ್. ಮರಿಸ್ವಾಮಿ, ಬೌದ್ಧತತ್ವ ಮೀಮಾಂಸಕ ಮಹಾದೇವಯ್ಯ ಕಲ್ಲಾರೆಪುರ, ಬಹುಜನ ಚಳವಳಿ ಹೋರಾಟಗಾರ್ತಿ ಸಿ.ವಿ. ಲಕ್ಷ್ಮೀ, ಲೇಖಕ ಸಿ. ಚಂದ್ರಪ್ಪ ಅವರನ್ನು ಸನ್ಮಾನಿಸಲಾಯಿತು.

ಪುಣ್ಯಾನುಮೋದನೆ ಕಾರ್ಯಕ್ರಮದ ಆಹ್ವಾನ ಪತ್ರಿಕೆ

ಜನನ : 15–03–1988 **ಸಂದೀಪ್.ಎಂ** ಮರಣ : 07–06–2025

ನಮ್ಮ ಹಿರಿಯ ಮಗ ಎಂ. ಸಂದೀಪ್‌ರವರು ದಿನಾಂಕ: 07.06.2025 ರಂದು ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಈ ಸಂಬಂಧ ದಿ: 17.06.2025 ಮಂಗಳವಾರದಂದು ಮಹಾಬೋಧಿ ಸೊಸೈಟಿಯ ಭಿಕ್ಕು ಸಂಘದ ನೇತೃತ್ವದಲ್ಲಿ 'ಪುಣ್ಯಾನುಮೋದನೆ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

:: ಈ ಕಾರ್ಯಕ್ರಮದ ದಿವ್ಯ ಸಾನಿದ್ಯ ವಹಿಸುವವರು :

- ಶ್ರೀ. ವಾಲ್ಮೀಕಿ ಪ್ರಸನ್ನಾನಂದ ಮಹಾಸ್ವಾಮಿಗಳು, ಶ್ರೀ ವಾಲ್ಮೀಕಿ ಗುರುಪೀಠ, ರಾಜನಹಳ್ಳಿ, ದಾವಣಗೆರೆ.
- ಶ್ರೀ. ಬಸವಮೂರ್ತಿ ಮಾದಾರ ಚನ್ನಯ್ಯ ಮಹಾಸ್ವಾಮಿಗಳು, ಶ್ರೀ ಬಸವ ಮಾದಾರ ಚನ್ನಯ್ಯ ಗುರುಪೀಠ, ಚಿತ್ರದುರ್ಗ
- ಶ್ರೀ. ಜ್ಞಾನ ಪ್ರಕಾಶ್ ಮಹಾಸ್ವಾಮಿಗಳು, ಶ್ರೀ. ಉರಿಲಿಂಗ ಪೆದ್ದಿಮಠ, ಮೈಸೂರು.
- ಶ್ರೀ. ಇಮ್ಮಡಿ ಸಿದ್ಧರಾಮೇಶ್ವರ ಮಹಾಸ್ವಾಮಿಗಳು, ಶ್ರೀ ಭೋವಿ ಗುರುಪೀಠ, ಚಿತ್ರದುರ್ಗ.
- ಶ್ರೀ. ಸಂತ ಸೇವಾಲಾಲ್ ಮಹಾಸ್ವಾಮಿಗಳು, ಶ್ರೀ ಬಂಜಾರ ಗುರುಪೀಠ, ಚಿತ್ರದುರ್ಗ.
- ಶ್ರೀ. ಬಸವನಾಗಿದೇವ ಮಹಾಸ್ವಾಮಿಗಳು, ಶ್ರೀ ಛಲವಾದಿ ಗುರುಪೀಠ, ಚಿತ್ರದುರ್ಗ.
- ಶ್ರೀ. ಇಮ್ಮಡಿ ಬಸವ ಮೇದಾರ ಕೇತೇಶ್ವರ ಸ್ವಾಮಿಗಳು, ಕೇತೇಶ್ವರ ಮಹಾಮಠ, ಚಿತ್ರದುರ್ಗ.
- ಶ್ರೀ. ಷಡಕ್ಷರಿ ಮುನಿ ಸ್ವಾಮಿಗಳು, ಆದಿಜಾಂಬವ ಬೃಹನ್ಮಠ, ಕೋಡಿಹಳ್ಳಿ, ಚಿತ್ರದುರ್ಗ.
- ಶ್ರೀ. ಬಸವ ಹರಳಯ್ಯ ಸ್ವಾಮಿಗಳು, ಹರಳಯ್ಯ ಗುರುಪೀಠ, ಐಮಂಗಲ, ಚಿತ್ರದುರ್ಗ.

ಈ ಪುಣ್ಯಾನುಮೋದನೆ ಕಾರ್ಯಕ್ರಮಕ್ಕೆ ಬಂಧು ಮಿತ್ರರು ಹಾಗೂ ಅಭಿಮಾನಿಗಳೆಲ್ಲರೂ ಆಗಮಿಸಬೇಕಾಗಿ ಕೋರುತ್ತೇವೆ

:: ಕಾರ್ಯಕ್ರಮ ::
ದಿನಾಂಕ: 17.06.2025, ಮಂಗಳವಾರ
ಬೆಳಿಗ್ಗೆ: 10.00 ಗಂಟೆಗೆ
ಸ್ಥಳ: ಡಾ.ಬಿ.ಆರ್.ಅಂಬೇಡ್ಕರ್ ಭವನ, ಕಾಶ್ಮೀರಾಮ್ ನಗರ, ವಿದ್ಯಾರಣ್ಯಪುರ ಪೋಸ್ಟ್ ಯಶವಂತಪುರ ಹೋಬಳಿ, ಬೆಂಗಳೂರು–97.

ಇಂತಿ,
ಮಾರಸಂದ್ರ ಮುನಿಯಪ್ಪ
ಶ್ರೀಮತಿ. ಟೀನಾ ಮಾರಸಂದ್ರ ಮುನಿಯಪ್ಪ
ಪತ್ನಿ: ವಿ. ಶೃತಿ ಸಂದೀಪ್

ಪ್ರಕಟಣೆ: ರಾಜಶೇಖರ ಬಿಲ್ಡರ್ಸ್, ಕುಂಬಾರಹಳ್ಳಿ

ಕೇಂದ್ರೀಯ ವಿದ್ಯಾಲಯ, ಭಾ.ವಿ.ಸಂ. ಬೆಂಗಳೂರು – 560 012.
KENDRIYA VIDYALAYA INDIAN INSTITUTE OF SCIENCE BENGALURU - 560012
E-mail: principal.kviisc@gmail.com
website: https://iiscbangalore.kvs.ac.in Ph: 080-23371316

XI & XII ADMISSION 2025-26

There are some seats vacant for classes XI & XII. Students from other Kendriya Vidyalayas and Non-KVs (incl. Pvt. Schools) may submit registration form along with the documents mentioned on or before **26.06.2025** (Thursday).

Documents to be submitted:

1. Registration form–download from website/ get it from the office
2. Marksheet-Digilockerself-attested
3. TC/Study Certificate

Admission is granted as per admission guidelines of KVS 2025-26
You may contact Mr. Shravan.N (Contact No. 8461094149) for any information

Admission I/C Sd/- Principal

ಶಿವಗಂಗಾ, ಕವಿತಾ ರೈ, ನಂದಿನಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘ ನೀಡುವ 'ಮಾತೋಶ್ರೀ ಶಂಕರಮ್ಮ ಪ. ಬಳಿಗಾರ್' ಪ್ರಶಸ್ತಿಗೆ ಲೇಖಕಿಯರಾದ ಶಿವಗಂಗಾ ರುಮ್ಮಾ, ಕವಿತಾ ರೈ ಹಾಗೂ ರೈತ ನಾಯಕಿ ನಂದಿನಿ ಜಯರಾಮ್ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹10 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಹಾಗೂ ಅವರ ಸಹೋದರ ಎಸ್.ಪಿ. ಬಳಿಗಾರ್ ಅವರು ಸಂಘದಲ್ಲಿ ಈ ದತ್ತಿ ಪ್ರಶಸ್ತಿ ಸ್ಥಾಪಿಸಿದ್ದು, ಗದ್ಯ ಸಾಹಿತ್ಯ, ಕಾವ್ಯ ಪ್ರಕಾರ ಹಾಗೂ ಸಮಾಜ ಸೇವೆ ಕ್ಷೇತ್ರವನ್ನು ಪರಿಗಣಿಸಲಾಗುತ್ತದೆ.

ಶಿವಗಂಗಾ ರುಮ್ಮಾ

ನಂದಿನಿ ಜಯರಾಮ್

ಕವಿತಾ ರೈ

ಇದೇ 22ರಂದು ನಗರದ ಗಾಂಧಿ ಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಮಲ್ಲಿಕಾ ಘಂಟಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಾರತೀಯ ಬುಡಕಟ್ಟು ಸಹಕಾರ ಮಾರುಕಟ್ಟೆ ಅಭಿವೃದ್ಧಿ ಒಕ್ಕೂಟ ನಿಗಮ (ಟ್ರೈಫೆಡ್)
(ಬುಡಕಟ್ಟು ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರ)
ಪ್ರಧಾನ ಕಚೇರಿ: ಎನ್‌ಎಸ್‌ಐಸಿ ಬಿಜನೆಸ್ ಪಾರ್ಕ್, ಎನ್‌ಎಸ್‌ಐಸಿ ಎಸ್ಟೇಟ್, ಓಖ್ಲಾ ಫೇಸ್–3, ಓಖ್ಲಾ ಕೈಗಾರಿಕಾ ಪ್ರದೇಶ, ನವದೆಹಲಿ–110020
ವೆಬ್‌ಸೈಟ್: https://trifed.tribal.gov.in, ಇಮೇಲ್: tfdmktdiv@gmail.com
सत्यमेव जयते
ट्राईफेड TRIFED

ಫ್ರಾಂಚೈಸ್ ಅವಕಾಶ

ಭಾರತ ಸರ್ಕಾರದ ಬುಡಕಟ್ಟು ವ್ಯವಹಾರಗಳ ಸಚಿವಾಲಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾರತೀಯ ಬುಡಕಟ್ಟು ಸಹಕಾರ ಮಾರುಕಟ್ಟೆ ಅಭಿವೃದ್ಧಿ ಒಕ್ಕೂಟ ನಿಗಮ (ಟ್ರೈಫೆಡ್) ಎಂಬ ಸಂಸ್ಥೆಯ ಮೂಲಕ ಬುಡಕಟ್ಟು ಕರಕುಶಲ ವಸ್ತುಗಳ ಉತ್ತೇಜನೆ ಪಡೆದಿರುವ ಟ್ರೈಬ್ಸ್ ಇಂಡಿಯಾ ಎಂಬ ಜನಪ್ರಿಯ ಬ್ರಾಂಡ್ ಆಗಿರುತ್ತದೆ. ನಿಪುಣ ಕರಕುಶಲಿಗರಿಂದ ತಯಾರಿಸಲ್ಪಟ ವಿಶಿಷ್ಠ ಕರಕುಶಲ ವಸ್ತುಗಳನ್ನು ಇಲ್ಲಿ ನೇರವಾಗಿ ಬುಡಕಟ್ಟು ಕಲಾವಿದರಿಂದ ತರಿಸಿಕೊಳ್ಳಲಾಗುತ್ತದೆ ಮತ್ತು ಅವುಗಳನ್ನು ದೇಶಾದ್ಯಂತ ಟ್ರೈಬ್ಸ್ ಇಂಡಿಯಾ ಎಂಬ ಹೆಸರಿನಲ್ಲಿ ವಿವಿಧ ಸ್ಥಳಗಳಲ್ಲಿ ಸ್ಥಿತಗೊಂಡಿರುವ ಮಳಿಗೆಗಳ ಮೂಲಕ ಮಾರಾಟ ಮಾಡಲಾಗುತ್ತದೆ. ಈ ಬುಡಕಟ್ಟು ಕರಕುಶಲ ವಸ್ತುಗಳಲ್ಲಿ ಲೋಹ, ಮಣ್ಣಿನಿಂದ ತಯಾರಿಸಲಾಗಿರುವ ವಸ್ತುಗಳು, ವರ್ಣಚಿತ್ರಗಳು, ಆಭರಣಗಳು, ಸಾಂಪ್ರದಾಯಿಕ ರೇಷ್ಮೆ, ಕಾಟನ್ ವಸ್ತ್ರಗಳು ಮತ್ತು ವೂಲನ್ ಬಟ್ಟೆ ಹಾಗೂ ಬೆತ್ತ, ಬಿದಿರಿನಿಂದ ತಯಾರಿಸಿದ ವಸ್ತುಗಳು ಹಾಗೂ ಇನ್ನಿತರ ನೈಸರ್ಗಿಕ ಉತ್ಪನ್ನಗಳು ಕೂಡ ಇಲ್ಲಿ ಲಭ್ಯವಿರುತ್ತದೆ.

ಟ್ರೈಫೆಡ್, ತನ್ನ ಅಸ್ತಿತ್ವವನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ, ಇದೀಗ ನಮ್ಮ ಬುಡಕಟ್ಟು ಉತ್ಪನ್ನಗಳನ್ನು ಮಾರಾಟ ಮಾಡಲು ನಮ್ಮ ಫ್ರಾಂಚೈಸಿ ಪಡೆದುಕೊಳ್ಳಲು ಆಸಕ್ತಿಯುಳ್ಳ ಪಾಲುದಾರರ ಹುಡುಕಾಟದಲ್ಲಿದೆ. ಆಸಕ್ತಿಯುಳ್ಳ ಪಾಲುದಾರರು, ನಮ್ಮ https://trifed.tribal.gov.in ವೆಬ್‌ಸೈಟ್‌ನಿಂದ ಸಂಬಂಧಿತ ಮಾರ್ಗಸೂಚಿಗಳನ್ನು ಹಾಗೂ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಅಲ್ಲದೆ, ಆಸಕ್ತಿಯುಳ್ಳ ಪಕ್ಷಗಾರರು ಮೇಲ್ಕಂಡ ಇಮೇಲ್ ವಿಳಾಸದಲ್ಲಿ ಕೂಡ ಟ್ರೈಫೆಡ್ ಸಂಸ್ಥೆಯನ್ನು ಸಂಪರ್ಕಿಸಬಹುದು ಅಥವಾ ಯಾವುದೇ ಕೆಲಸದ ದಿನದಂದು ಬೆಳಗ್ಗೆ 10:00 ರಿಂದ ಸಂಜೆ 06:00 ಗಂಟೆಯೊಳಗೆ ನಮ್ಮ ಕಚೇರಿಗೆ ಭೇಟಿ ನೀಡಿ ಅರ್ಜಿ ನಮೂನೆ ಮತ್ತು ಮಾರ್ಗಸೂಚಿಗಳನ್ನು ಪಡೆದುಕೊಳ್ಳಬಹುದು.

CBC 43104/12/0006/2526 **ಮಹಾಪ್ರಬಂಧಕರು** (ಪ್ರಭಾರಿ ಮಾರಾಟ)



ಅಪ್ಪಂದಿರ ದಿನಾಚರಣೆ ಪ್ರಯುಕ್ತ ಭಾನುವಾರ ನಗರದ ಜೆಎಸ್‌ಎಸ್ ಎಜುಕೇಶನ್ ಕ್ಯಾಂಪಸ್‌ನಲ್ಲಿ ನಡೆದ 'ನಿಜ ನಾಯಕ ಅಪ್ಪ' ಕನ್ನಡ ಭಾವ ಚಿತ್ರಗೀತೆ ಬಿಡುಗಡೆ ಕಾರ್ಯಕ್ರಮದಲ್ಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ನಟ ಜಗ್ಗೇಶ್ ಅವರನ್ನು ಸನ್ಮಾನಿಸಿದರು

‘ಕೃಷಿ ಬಿಕ್ಕಟ್ಟಿಗೆ ದೇಸಿ ತಳಿಗಳೇ ಪರಿಹಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹವಾಮಾನ ವೈಪರೀತ್ಯದಿಂದ ಕೃಷಿ ಕ್ಷೇತ್ರ ಸಂಕಷ್ಟಕ್ಕೆ ಸಿಲುಕಿದೆ. ಇಂಥ ಬಿಕ್ಕಟ್ಟಿಗೆ ಪರಿಹಾರವಾಗಿ ದೇಸಿ ತಳಿಗಳನ್ನು ಮತ್ತೆ ಮುಖ್ಯವಾಹಿನಿಗೆ ತರಬೇಕಿದೆ’ ಎಂದು ಕರ್ನಾಟಕ ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಅಶೋಕ ದಳವಾಯಿ ಅಭಿಪ್ರಾಯಪಟ್ಟರು.

ಕೃಷಿ ತಂತ್ರಜ್ಞರ ಸಂಸ್ಥೆ(ಐಎಟಿ), ‘ಸಹಜ ಸಮೃದ್ಧ’ ಸಾವಯವ ಕೃಷಿಕರ ಬಳಗದ ಜತೆಗೂಡಿ ‘ಕ್ರಾಪ್ಸ್4ಎಚ್ಡಿ’ ಹಾಗೂ ‘ಕೀ ಸ್ಟೋನ್’ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ ‘ದೇಸಿ ಬೀಜೋತ್ಸವ’ದ ಸಮಾರೋಪದಲ್ಲಿ ಅವರು ಮಾತನಾಡಿದರು.

‘ಅಧಿಕ ರಾಸಾಯನಿಕ ಹಾಗೂ ನೀರಿನ ಅತಿಯಾದ ಬಳಕೆಯಿಂದ ರಾಜ್ಯದ 24 ಕೋಟಿ ಹೆಕ್ಟೇರ್ ಜಮೀನು ಸವಳಾಗಿದೆ. ಹೈಬ್ರಿಡ್ ತಳಿಗಳಿಂದ ಆಹಾರ ಉತ್ಪಾದನೆ ಹೆಚ್ಚಿದರೂ, ಪೌಷ್ಟಿಕಾಂಶದ ಕೊರತೆ ಕಾಡುತ್ತಿದೆ. ಈ ಕೊರತೆಗೆ ದೇಸಿ ತಳಿಗಳು ಪರಿಹಾರ ಒದಗಿಸುತ್ತವೆ’ ಎಂದು ಅವರು ಪ್ರತಿಪಾದಿಸಿದರು.

‘ಏಕಬೆಳೆ ವಿಧಾನ ಅಕ್ಕಡಿ ಪದ್ಧತಿಯಂಥ ಸಾಂಪ್ರದಾಯಿಕ ಪದ್ಧತಿಗಳು ಕಾಣೆಯಾಗಿವೆ. ಬೇಸಾಯದ 240 ಬೆಳೆಗಳ ಪೈಕಿ ಈಗ ಬಹುತೇಕ ಕಡೆ ಕಾಣುವುದು ಕೇವಲ 20 ಬೆಳೆಗಳು. ಕುಟುಂಬಕ್ಕೆ ಆಹಾರ ಮತ್ತು ಪೋಷಕಾಂಶ ಭದ್ರತೆ ಕೊಡುವ ದೇಸಿ ತಳಿಗಳು ಮತ್ತು ಅದಕ್ಕೆ ಸಂಬಂಧಿಸಿದ ಪಾರಂಪರಿಕ ವಿಧಾನಗಳನ್ನು ಮತ್ತೆ ಮುನ್ನೆಲೆಗೆ ತರಬೇಕು’ ಎಂದರು.

‘ಸ್ವಿಸ್ ಏಡ್’ ಸಂಸ್ಥೆಯ ಪ್ರತಿನಿಧಿ ಕವಿತಾ ಗಾಂಧಿ, ‘ಸಹಜ ಸಮೃದ್ಧ ಸಾವಯವ ರೈತ ಉತ್ಪಾದಕ ಕಂಪನಿ’ಯ ಅಧ್ಯಕ್ಷ ಎನ್.ಆರ್. ಶೆಟ್ಟಿ, ದೇಸಿ ತಳಿಗಳ ಬೀಜ ಸಂರಕ್ಷಕ ಸತ್ಯನಾರಾಯಣ ಬೆಲೇರಿ, ಆರ್.ಆರ್.ಎ. ನೆಟ್ವರ್ಕ್ ಸಂಯೋಜಕಿ ಭಾಗ್ಯಲಕ್ಷ್ಮೀ ಹಾಗೂ ಐಎಟಿ ಕಾರ್ಯಕ್ರಮ ಉಪ ಸಮಿತಿ ಅಧ್ಯಕ್ಷ ಎಸ್.ಬಿ. ಯೋಗಾನಂದ ಇತರರು ಉಪಸ್ಥಿತರಿದ್ದರು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256

‘ರಸ್ತೆ ಗುಂಡಿ ಮುಚ್ಚಿ’

ಎಲ್ಐಸಿ ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿನ ಗುಂಡಿ

ಎಲ್ಐಸಿ ಬಡಾವಣೆಯಿಂದ ವಾಜರಹಳ್ಳಿಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಲ್ಲಿ ಬೃಹತ್ ಗುಂಡಿ ಬಿದ್ದಿದ್ದು, ವಾಹನಗಳ ಸಂಚಾರಕ್ಕೆ ತೊಂದರೆ ಆಗಿದೆ. ಮಳೆಗಾಲ ಪ್ರಾರಂಭವಾಗಿದ್ದು, ರಸ್ತೆ ಗುಂಡಿಗಳಲ್ಲಿ ನೀರು ತುಂಬಿಕೊಂಡು ಅಪಘಾತಗಳು ಸಂಭವಿಸುವ ಸಾಧ್ಯತೆ ಇದೆ. ಈ ರಸ್ತೆಯಲ್ಲಿ ಹೆಚ್ಚು ಶಾಲಾ ವಾಹನಗಳು ಸಂಚರಿಸುತ್ತವೆ. ಬಿಬಿಎಂಪಿ ಕೂಡಲೇ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ವಾಜರಹಳ್ಳಿ ನಿವಾಸಿಗಳು

‘ಬಾಗಿದ ವಿದ್ಯುತ್ ಕಂಬ ತೆರವುಗೊಳಿಸಿ’

ಕೆಂಗೇರಿಯ ಸುಂಕದಪಾಳ್ಯ ಮುನೇಶ್ವರ ದೇವಸ್ಥಾನದ ಮುಖ್ಯರಸ್ತೆಯ ಬದಿಯಲ್ಲಿರುವ ವಿದ್ಯುತ್ ಕಂಬ ಬಾಗಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಏನಾದರೂ ಅನಾಹುತಗಳು ಸಂಭವಿಸುವ ಮುನ್ನ ಈ ವಿದ್ಯುತ್ ಕಂಬವನ್ನು ತೆರವುಗೊಳಿಸಬೇಕಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು.

ಮಂಜುನಾಥ್, ಸುಂಕದಪಾಳ್ಯ

ಸುಂಕದಪಾಳ್ಯದಲ್ಲಿ ಬಾಗಿರುವ ವಿದ್ಯುತ್ ಕಂಬ

‘ರಸ್ತೆ ಸರಿಪಡಿಸಿ’

ಪಟಾಲಮ್ಮ ದೇವಸ್ಥಾನ ಹತ್ತಿರದ ರಸ್ತೆಯಲ್ಲಿನ ಗುಂಡಿ

ಕೆಂಗೇರಿಯಿಂದ ಉತ್ತರಹಳ್ಳಿಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಗೆ ಇತ್ತೀಚೆಗೆ ಡಾಂಬರು ಹಾಕಲಾಗಿತ್ತು. ಕಳಪೆ ಕಾಮಗಾರಿ ಕೈಗೊಂಡ ಪರಿಣಾಮ ಪಟಾಲಮ್ಮ ದೇವಸ್ಥಾನ ಹತ್ತಿರದ ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ. ಇದರಿಂದ ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಅಧಿಕಾರಿಗಳು ಕಳಪೆ ಕಾಮಗಾರಿ ಕೈಗೊಂಡವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಕೂಡಲೇ ಈ ರಸ್ತೆ ದುರಸ್ತಿಗೆ ಆದ್ಯತೆ ನೀಡಬೇಕು.

ಬಸವರಾಜು, ಎಂ.ಎನ್., ರಾಜರಾಜೇಶ್ವರಿನಗರ

‘ದುರಸ್ತಿ ಕಾಣದ ರಸ್ತೆ’

ರಂಗಸ್ವಾಮಿ ಗುಡಿ ಬೀದಿ ರಸ್ತೆಯಲ್ಲಿ ಒಳಚರಂಡಿ ಕಾಮಗಾರಿ ಬಳಿಕ ಸರಿಯಾಗಿ ಮುಚ್ಚದಿರುವುದು

ನಗರದ ಕೇಂದ್ರ ಪ್ರದೇಶಕ್ಕೆ ಹೊಂದಿಕೊಂಡಿರುವ ಬಳೆಪೇಟೆ ಮುಖ್ಯರಸ್ತೆಯ ತಿರುವಿನಲ್ಲಿರುವ ರಂಗಸ್ವಾಮಿ ಗುಡಿ ಬೀದಿ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ಸಂಚರಿಸುವುದು ದುಸ್ತರವಾಗಿದೆ. ಎರಡು ವರ್ಷಗಳ ಹಿಂದೆ ಜಲಮಂಡಳಿಯು ಒಳಚರಂಡಿ ಕೊಳವೆಗಳ ಅಳವಡಿಕೆಗೆ ರಸ್ತೆಯನ್ನು ಅಗೆದು ಹಾಕಿತ್ತು. ಆದರೆ, ಕಾಮಗಾರಿ ಮುಗಿದ ಬಳಿಕ ರಸ್ತೆಯನ್ನು ಸರಿಯಾಗಿ ಮುಚ್ಚಿರಲಿಲ್ಲ. ಇದರಿಂದಾಗಿ ಬಿವಿಕೆ ಅಯ್ಯಂಗಾರ್ ರಸ್ತೆ ತಿರುವಿನಿಂದ ಬಳೆಪೇಟೆ ಮುಖ್ಯರಸ್ತೆವರೆಗೂ ಆರ್.ಟಿ. ಸ್ಟ್ರೀಟ್‌ನಲ್ಲಿ ಗುಂಡಿಗಳ ನಡುವೆ ಸಂಚರಿಸಬೇಕಾಗಿದೆ. ಸ್ಥಳೀಯರು ಮತ್ತು ವಾಹನ ಸವಾರರು ಈ ಬಗ್ಗೆ ಸಂಬಂಧಪಟ್ಟವರಿಗೆ ದೂರು ನೀಡಿದರೂ ಯಾವುದೇ ಕ್ರಮ ಕೈಗೊಳ್ಳದಿರುವುದು ವಿಪರ್ಯಾಸ. ದ್ವಿಚಕ್ರ ವಾಹನ ಸವಾರರು ಗುಂಡಿಗಳನ್ನು ತಪ್ಪಿಸಲು ಹೋಗಿ, ಬಿದ್ದು ಗಾಯಗೊಂಡ ಪ್ರಕರಣಗಳು ವರದಿಯಾಗಿವೆ. ಮಳೆ ಬಂದಲ್ಲಿ ಈ ರಸ್ತೆಯಲ್ಲಿ ನಡೆದಾಡುವುದು ಕಷ್ಟಸಾಧ್ಯ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈಗಲಾದರೂ ಈ ಬಗ್ಗೆ ಕ್ರಮವಹಿಸಿ, ರಸ್ತೆಯನ್ನು ದುರಸ್ತಿ ಮಾಡಬೇಕು.

ಶಿವಪ್ರಸಾದ್, ಸ್ಥಳೀಯ ನಾಗರಿಕ



ಇನ್ನೂ ಜೋಡಣೆಯಾಗದ ತಂತ್ರಾಂಶ

ಸ್ಮಾರ್ಟ್ ಮೀಟರ್: ವಿದ್ಯುತ್ ಗುತ್ತಿಗೆದಾರರ ಆರೋಪ, ಗ್ರಾಹಕರಿಗೂ ಬೇಸರ

• ಸ್ನೇಹಾ ರಮೇಶ್

ಬೆಂಗಳೂರು: ಹೊಸ ವಿದ್ಯುತ್ ಸಂಪರ್ಕಗಳು ಹಾಗೂ ತಾತ್ಕಾಲಿಕ ಸಂಪರ್ಕಕ್ಕಾಗಿ ಅಳವಡಿಸುತ್ತಿರುವ ಸ್ಮಾರ್ಟ್ ಮೀಟರ್‌ಗಳನ್ನು ಸಂಪೂರ್ಣವಾಗಿ ತಂತ್ರಾಂಶದೊಂದಿಗೆ (ಸಾಫ್ಟ್‌ವೇರ್) ಸಮರ್ಪಕವಾಗಿ ಸಂಯೋಜಿಸದ ಕಾರಣ, ಅವು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಗ್ರಾಹಕರು ದೂರುತ್ತಿದ್ದಾರೆ.

ಸ್ಮಾರ್ಟ್ ಮೀಟರ್‌ಗಳನ್ನು ತಂತ್ರಾಂಶಕ್ಕೆ ಸರಿಯಾಗಿ ಜೋಡಣೆ ಮಾಡದಿದ್ದರೆ, ಆ ಮೀಟರ್‌ಗಳು ಸಾಮಾನ್ಯ ಡಿಜಿಟಲ್ ಮೀಟರ್‌ನಂತೆ ಕಾರ್ಯನಿರ್ವಹಿಸುತ್ತವೆ. ಸ್ಮಾರ್ಟ್ ಮೀಟರ್‌ಗೆ ಅಗತ್ಯವಾಗಿ ಬೇಕಾಗಿರುವ ತಂತ್ರಾಂಶವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸದೇ, ಹೊಸ ವಿದ್ಯುತ್ ಸಂಪರ್ಕಗಳಿಗೆ ಅಳವಡಿಸಲಾಗುತ್ತಿದೆ' ಎಂದು ಕರ್ನಾಟಕ ರಾಜ್ಯ ಪರವಾನಗಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದವರು (ಕೆಎಸ್‌ಎಲ್‌ಇಸಿಇ) ಆರೋಪಿಸಿದ್ದಾರೆ.

'ದುಬಾರಿ ಹಣದಲ್ಲಿ ಟಿ.ವಿ ಖರೀದಿಸಿ, ಅದರಲ್ಲಿ ಏನೂ ವೀಕ್ಷಿಸಲು ಸಾಧ್ಯವಾಗುತ್ತಿಲ್ಲ ಎಂಬಂತಾಗಿದೆ, ದುಬಾರಿ ಹಣ ತೆತ್ತು ಸ್ಮಾರ್ಟ್ ಮೀಟರ್ ಖರೀದಿಸಿರುವ ಗ್ರಾಹಕರ ಪರಿಸ್ಥಿತಿ' ಎಂದು ಕೆಎಸ್‌ಎಲ್‌ಇಸಿಎ ಅಧ್ಯಕ್ಷ ಸಿ.ರಮೇಶ್ ಹೇಳಿದರು.

'ಸ್ಮಾರ್ಟ್ ಮೀಟರ್ ಅಳವಡಿಕೆ ಕಡ್ಡಾಯಗೊಳಿಸುವ ಮುನ್ನ ಬೆಸ್ಕಾಂ, ಎಲ್ಲ ರೀತಿಯ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿತ್ತು' ಎಂದು ಸ್ಮಾರ್ಟ್ ಮೀಟರ್ ಅಳವಡಿಕೆಯ ಒತ್ತಡ ಎದುರಿಸಿದ ಹಲವು ಗ್ರಾಹಕರು ಅಭಿಪ್ರಾಯಪಟ್ಟಿದ್ದಾರೆ.

ಮುಖ್ಯಾಂಶಗಳು

- ತಂತ್ರಾಂಶಕ್ಕೆ ಜೋಡಣೆಯಾಗದ ಮೀಟರ್
- ರಿಮೋಟ್ ಮೂಲಕ ಬಳಕೆ ಇನ್ನೂ ಸಾಧ್ಯವಾಗಿಲ್ಲ
- ಹಳೆಯ ಮೀಟರ್ ಮಾದರಿಯಲ್ಲೇ ಮುಂದುವರಿದ ರೀಡಿಂಗ್

'ಸ್ಮಾರ್ಟ್ ಮೀಟರ್ ಹಲವು ವೈಶಿಷ್ಟ್ಯಗಳನ್ನು ಹೊಂದಿದೆ. ಇದರಿಂದ ವಿದ್ಯುತ್ ಬಳಕೆ ಮಾಪನ ಮತ್ತು ಇತರೆ ವಿವರಗಳನ್ನು ಟ್ರ್ಯಾಕ್ ಮಾಡಬಹುದು ಎಂದು ಹೇಳಲಾಗಿತ್ತು. ಆದರೆ, ಈ ಸ್ಮಾರ್ಟ್ ಮೀಟರ್‌ಗಳು ಸಾಮಾನ್ಯ ಡಿಜಿಟಲ್ ಮೀಟರ್‌ನಂತೆ ಕಾರ್ಯನಿರ್ವಹಿಸುತ್ತಿವೆ. ಹಾಗಿದ್ದಲ್ಲಿ ನಾವು ಏಕೆ ಹೆಚ್ಚು ಹಣ ಪಾವತಿಸಬೇಕು' ಎಂದು ಜೆ.ಪಿ ನಗರದ ನಿವಾಸಿಯೊಬ್ಬರು ಪ್ರಶ್ನಿಸಿದರು.

'ಗ್ರಾಹಕರಿಗೆ ನೀಡಿರುವ ಮೀಟರ್‌ಗಳಿಗೆ ತಂತ್ರಾಂಶವನ್ನು ಸಂಯೋಜಿಸಬೇಕಿದೆ ಹಾಗೂ ಬಳಕೆದಾರ ಇಂಟರ್‌ಫೇಸ್ ಅನ್ನು ಒದಗಿಸಿಲ್ಲ' ಎಂಬುದನ್ನು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎನ್.ಶಿವಶಂಕರ್ ಒಪ್ಪಿಕೊಂಡರು.

'ಈಗಾಗಲೇ ಸಂವಹನ ವ್ಯವಸ್ಥೆ ಸಿದ್ಧವಾಗಿದ್ದು, ರಿಮೋಟ್ ಮೂಲಕ ವಿದ್ಯುತ್ ಬಳಕೆಯನ್ನು ಟ್ರ್ಯಾಕ್ ಮಾಡಲು ಸಮರ್ಥರಾಗಿದ್ದೇವೆ. ಈ ಸೌಲಭ್ಯವನ್ನು ಗ್ರಾಹಕರಿಗೆ ತಲುಪಿಸುವುದು ಬಾಕಿ ಇದೆ. ಈ ಪ್ರಕ್ರಿಯೆ ಹಂತ ಹಂತವಾಗಿ ನಡೆಯಲಿದೆ' ಎಂದು ಅವರು ತಿಳಿಸಿದರು.

'ಆದರೆ, ಬೆಸ್ಕಾಂನವರು ರಿಮೋಟ್ ಮೂಲಕ ಮೀಟರ್ ರೀಡಿಂಗ್ ಮಾಡಲು ಇನ್ನೂ ಪೂರ್ಣಪ್ರಮಾಣದಲ್ಲಿ ಸಿದ್ಧರಾಗಿಲ್ಲ' ಎಂದು ವಿದ್ಯುತ್ ಗುತ್ತಿಗೆದಾರರು ಬಲವಾಗಿ ವಾದಿಸುತ್ತಾರೆ.

'ಬೆಸ್ಕಾಂನವರು ರಿಮೋಟ್ ಮೂಲಕ ಮೀಟರ್ ರೀಡಿಂಗ್ ಮಾಡಲು ಸಮರ್ಥರಿದ್ದರೆ, ಮೀಟರ್ ರೀಡರ್‌ಗಳು ಏಕೆ ಸ್ಮಾರ್ಟ್ ಮೀಟರ್ ಅಳವಡಿಸಿರುವ ಮನೆಗಳಿಗೆ ಭೇಟಿ ನೀಡುತ್ತಿದ್ದಾರೆ. ಸ್ಮಾರ್ಟ್ ಮೀಟರ್‌ಗೆ ಸಂಬಂಧಿಸಿದ ಎಲ್ಲ ಕೆಲಸಗಳು ಪೂರ್ಣಗೊಂಡಿರುವ ವಿಶ್ವಾಸವಿದ್ದರೆ, ಅದನ್ನು ಸಾಬೀತು ಪಡಿಸಲಿ. ನಾವು ಸ್ಮಾರ್ಟ್‌ಮೀಟರ್ ಇರುವ ಗ್ರಾಹಕರ ಆರ್.ಆರ್ ನಂಬರ್ ಒದಗಿಸುತ್ತೇವೆ. ಅವರು ಆ ಮೀಟರ್‌ನ ರೀಡಿಂಗ್ ತೋರಿಸಲಿ' ಎಂದು ರಮೇಶ್ ಸವಾಲು ಹಾಕಿದರು.

ಚಿಟಿಕೆ ಸುದ್ದಿ

ಬೈಕ್ ಸವಾರನ ಮೇಲೆ ಬಿದ್ದ ಕೊಂಬೆ

ಬೆಂಗಳೂರು: ಬನಶಂಕರಿ ಎರಡನೇ ಹಂತದ ಶ್ರೀನಿವಾಸ ನಗರದಲ್ಲಿ ಗಾಳಿಗೆ ಮರದ ಕೊಂಬೆ ಬಿದ್ದು ಬೈಕ್ ಸವಾರ ಅಕ್ಷಯ್ ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಖಾಸಗಿ ಕಂಪನಿ ಉದ್ಯೋಗಿ ಅಕ್ಷಯ್ (29) ಗಾಯಗೊಂಡವರು. ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ, ಬ್ರಹ್ಮಚೈತನ್ಯ ಮಂದಿರದ ಬಳಿ ಮರದ ಒಣಗಿದ ಕೊಂಬೆ ತಲೆ ಮೇಲೆ ಬಿದ್ದಿದೆ. ಅವರನ್ನು ಸ್ಥಳೀಯರು ಜಯನಗರದ ಅಪೋಲೊ ಆಸ್ಪತ್ರೆಗೆ ಕರೆದೊಯ್ದರು. ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಚಿಕಿತ್ಸಾ ವೆಚ್ಚ ಭರಿಸುವುದಾಗಿ ಬಿಬಿಎಂಪಿ ತಿಳಿಸಿದೆ.

ಅಂಗಾಂಗ ದಾನದ ಬಗ್ಗೆ ಉಪನ್ಯಾಸ

ಬೆಂಗಳೂರು: ಕೇಂದ್ರೀಯ ಜಿಎಸ್‌ಟಿ ಮತ್ತು ಸೀಮಾಶುಲ್ಕ ಇಲಾಖೆಯ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ 'ಸಂಪ್ರಭಾ' ವತಿಯಿಂದ ಕೇಂದ್ರ ಕಂದಾಯ ಇಲಾಖೆಯ ಕಚೇರಿಯಲ್ಲಿ ರಕ್ತದಾನ ಶಿಬಿರ ಮತ್ತು ಅಂಗಾಂಗ ದಾನದ ಬಗ್ಗೆ ಉಪನ್ಯಾಸ ಆಯೋಜಿಸಲಾಗಿತ್ತು. 50 ಜನ ರಕ್ತದಾನ ಮಾಡಿದರು. ಬೌರಿಂಗ್ ಮತ್ತು ಲೇಡಿ ಕರ್ಜನ್ ವೈದ್ಯಕೀಯ ಸಂಸ್ಥೆಯ ವೈದ್ಯಕೀಯ ತಂಡದವರು ನೆರವು ನೀಡಿದರು. ಅಂಗಾಂಗ ದಾನದ ಬಗ್ಗೆ ಎಸ್‌ಐಎಂಎಸ್‌ನ ವಿಧಿ ವಿಜ್ಞಾನ ವಿಭಾಗದ ಡಾ. ಪಿ.ಕೆ. ದೇವದಾಸ್ ಉಪನ್ಯಾಸ ನೀಡಿದರು. ಸಂಪ್ರಭಾ ಅಧ್ಯಕ್ಷ ಜಿ. ನಾರಾಯಣಸ್ವಾಮಿ ಇದ್ದರು.

72 ಪ್ರಶ್ನೆ ಕೇಳಿರುವ ಪಿ.ಸಿ.ಮೋಹನ್

ಬೆಂಗಳೂರು: ನಗರಕ್ಕೆ ಸಂಬಂಧಿಸಿದಂತೆ 72 ಪ್ರಶ್ನೆಗಳನ್ನು ಬೆಂಗಳೂರು ಕೇಂದ್ರ ಕ್ಷೇತ್ರದ ಸದಸ್ಯ ಪಿ.ಸಿ. ಮೋಹನ್ ಲೋಕಸಭೆಯಲ್ಲಿ ಕೇಳಿದ್ದಾರೆ.

ಪಿ.ಸಿ.ಮೋಹನ್

ಬೆಂಗಳೂರು ನಗರದಿಂದ ಆಯ್ಕೆಯಾಗಿರುವ ನಾಲ್ವರು ಸಂಸದರ ಒಂದು ವರ್ಷದ ಸಾಧನೆ, 32 ಶಾಸಕರ ಎರಡು ವರ್ಷದ ಸಾಧನೆಯ ವರದಿಯಲ್ಲಿ ಪಿ.ಸಿ. ಮೋಹನ್ ಒಂದು ಪ್ರಶ್ನೆ ಕೇಳಿದ್ದಾರೆ ಎಂದು ಭಾನುವಾರದ ಸಂಚಿಕೆಯಲ್ಲಿ ವರದಿಯಾಗಿತ್ತು. ಇದು ತಪ್ಪು ಮಾಹಿತಿ ಎಂದು ಪಿ.ಸಿ. ಮೋಹನ್ ತಿಳಿಸಿದ್ದಾರೆ.

ಬೆಂಗಳೂರಿಗೆ ಸಂಬಂಧಿಸಿದಂತೆ 72 ಪ್ರಶ್ನೆ ಕೇಳಿರುವ ಅವರು, ಚರ್ಚೆಯೊಂದರಲ್ಲಿ ಪಾಲ್ಗೊಂಡಿದ್ದಾರೆ. ಅಧಿವೇಶನದಲ್ಲಿ ಶೇ 98.5 ಹಾಜರಾತಿ ಹೊಂದಿದ್ದಾರೆ.

ಪೊಲೀಸರ ಮೇಲೆ ಹಲ್ಲೆಗೆ ಯತ್ನ: ಇಬ್ಬರು ಆರೋಪಿಗಳ ಕಾಲಿಗೆ ಗುಂಡು

ಜೈಲಿಂದ ಬಿಡುಗಡೆಯಾದ ದಿನವೇ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೈಲಿನಿಂದ ಬಿಡುಗಡೆ ಆದ ವ್ಯಕ್ತಿಯನ್ನು ಮಾತುಕತೆಗೆ ಕರೆಸಿ, ಕೊಲೆ ಮಾಡಿದ್ದ ಇಬ್ಬರು ಆರೋಪಿಗಳ ಕಾಲಿಗೆ ಗುಂಡು ಹಾರಿಸಿ, ಜೆ.ಜೆ. ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜೆ. ಜೆ. ನಗರದ ಜನತಾ ಕಾಲೋನಿಯಲ್ಲಿ ಶನಿವಾರ ರಾತ್ರಿ ವಿಜಯ್ (26) ಎಂಬಾತನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಆರೋಪಿಗಳು ಕೊಲೆ ಮಾಡಿದ್ದರು. ಬಂಧಿಸಲು ತೆರಳಿದ ಪೊಲೀಸ್ ಸಿಬ್ಬಂದಿ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆಗೆ ಯತ್ನಿಸಿದ ದೀಪು (28) ಹಾಗೂ ಅರುಣ್ (27) ಅವರ ಕಾಲಿಗೆ ಗುಂಡು ಹಾರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪರಾಧ ಸುದ್ದಿ

ಕೆಲ ತಿಂಗಳ ಹಿಂದೆ ನಡೆದ ಗಲಾಟೆ ವೇಳೆ ಅರುಣ್‌ಗೆ ವಿಜಯ್ ಚಾಕುವಿನಿಂದ ಇರಿದಿದ್ದ. ಕೊಲೆ ಯತ್ನದ ಆರೋಪದಡಿ ವಿಜಯ್‌ನನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿತ್ತು. ವಿಜಯ್ ಮೇಲೆ ಪ್ರತೀಕಾರ ತೀರಿಸಿಕೊಳ್ಳಲು ಅರುಣ್ ಕಾಯುತ್ತಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಶನಿವಾರವಷ್ಟೇ ಜೈಲಿನಿಂದ ಬಿಡುಗಡೆಯಾಗಿದ್ದ ವಿಜಯ್‌ನನ್ನು ರಾಜಿ ಸಂಧಾನಕ್ಕೆಂದು ಜನತಾ ಕಾಲೋನಿ ಬಳಿ ಅರುಣ್ ಕರೆಸಿದ್ದ. ರಾತ್ರಿ ಮಾತುಕತೆಗೆಂದು

ದೀಪು, ಅರುಣ್

ಬಂದ ವಿಜಯ್‌ನನ್ನು ಅರುಣ್ ಮತ್ತು ದೀಪು ಅಟ್ಟಾಡಿಸಿಕೊಂಡು ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಿ, ಪರಾರಿಯಾಗಿದ್ದರು.

ಪ್ರಕರಣ ದಾಖಲಿಸಿಕೊಂಡಿದ್ದ ಜೆ. ಜೆ. ನಗರ ಠಾಣೆ ಪೊಲೀಸರು, ರಾಜರಾಜೇಶ್ವರಿ ನಗರ ಸಮೀಪದ ಅರಣ್ಯ ಪ್ರದೇಶದಲ್ಲಿ ಬಚ್ಚಿಟ್ಟುಕೊಂಡಿದ್ದ ಆರೋಪಿಗಳನ್ನು ಬಂಧಿಸಲು ತೆರಳಿದ್ದರು. ಈ ವೇಳೆ ಆರೋಪಿಗಳಿಬ್ಬರೂ ಪೊಲೀಸರ ಮೇಲೆಯೇ ಮಾರಕಾಸ್ತ್ರಗಳಿಂದ ಹಲ್ಲೆಗೆ ಯತ್ನಿಸಿದ್ದರು. ಗಾಳಿಯಲ್ಲಿ ಗುಂಡು ಹಾರಿಸಿದ್ದ ಇನ್‌ಸ್ಪೆಕ್ಟರ್ ಕೆಂಪೇಗೌಡ, ಶರಣಾಗುವಂತೆ ಸೂಚಿಸಿದ್ದರು. ಆದರೂ ಆರೋಪಿಗಳು ಮಾರಕಾಸ್ತ್ರಗಳಿಂದ ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದರು.

ಬಳಿಕ ಇಬ್ಬರ ಕಾಲಿಗೂ ಇನ್‌ಸ್ಪೆಕ್ಟರ್ ಕೆಂಪೇಗೌಡ ಗುಂಡು ಹಾರಿಸುವ ಮೂಲಕ ಬಂಧಿಸಿದರು. ಘಟನೆಯಲ್ಲಿ ಗಾಯಗೊಂಡಿರುವ ಪೊಲೀಸ್ ಸಿಬ್ಬಂದಿ ಹಾಗೂ ಗುಂಡೇಟು ತಗುಲಿರುವ ಆರೋಪಿಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮದ್ಯ ಕುಡಿಸಿ ದರೋಡೆಗೆ ಸುಪಾರಿ

ಬೆಂಗಳೂರು: ಯುವಕನಿಗೆ ಮದ್ಯ ಕುಡಿಸಿ ಆತನ ಸ್ನೇಹಿತರೇ ಮತ್ತೊಂದು ಗ್ಯಾಂಗ್‌ನ ಮೂಲಕ ದರೋಡೆ ಮಾಡಿಸಿರುವ ಘಟನೆ ಚಿಕ್ಕಜಾಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.



ಅಚಲ್

ಪ್ರೇಮ್ ಶೆಟ್ಟಿ



ಪವನ್

ಖಾಸಗಿ ಕಂಪನಿಯ ಉದ್ಯೋಗಿ ಚಂದನ್ ಅವರ ಚಿನ್ನದ ಸರ, ಕೈಕಡಗ ಸೇರಿ ₹ 3 ಲಕ್ಷ ಮೌಲ್ಯದ ಆಭರಣ ದರೋಡೆ ಮಾಡಲಾಗಿದೆ. ಚಂದನ್ ದೂರಿನ ಮೇರೆಗೆ ಅವರ ಸ್ನೇಹಿತರಾದ ಪವನ್, ಅಚಲ್ ನಾನಾ ಹಾಗೂ ಇಬ್ಬರು ಅಪರಿಚಿತರ ವಿರುದ್ಧ ಪ್ರಕರಣ ದಾಖಲಾಗಿದೆ. ತನಿಖೆ ವೇಳೆ ಚಂದನ್ ಸ್ನೇಹಿತರೇ ದರೋಡೆಗೆ ಸಂಚು ರೂಪಿಸಿದ್ದರು ಎಂಬುದು ಗೊತ್ತಾಗಿದೆ.

'ಕಳೆದ ತಿಂಗಳು ಚಿಕ್ಕಜಾಲದ ಪಬ್‌ವೊಂದಕ್ಕೆ ಸ್ನೇಹಿತರಾದ ಚಂದನ್, ಪವನ್ ಮತ್ತು ಅಚಲ್ ತೆರಳಿದ್ದರು. ಈ ವೇಳೆ ಚಂದನ್‌ಗೆ ಕಂಠಪೂರ್ತಿ ಮದ್ಯ ಕುಡಿಸಿದ್ದ ಆರೋಪಿಗಳು, ನಂತರ ಆತನ ಕಾರಿನಲ್ಲಿ ಕರೆದೊಯ್ದಿದ್ದರು. ಮಾರ್ಗಮಧ್ಯೆ ಅಚಲ್, ಪ್ರೇಮ್ ಶೆಟ್ಟಿ ಹಾಗೂ ಆತನ ಗ್ಯಾಂಗ್‌ಗೆ ಫೋನ್ ಮಾಡಿ ಕರೆಸಿಕೊಂಡಿದ್ದ. ಸ್ಥಳಕ್ಕೆ ಬಂದಿದ್ದ ಪ್ರೇಮ್ ಶೆಟ್ಟಿ ತಂಡ ಮದ್ಯದ ಅಮಲಿನಲ್ಲಿದ್ದ ಚಂದನ್ ಮೇಲೆ ಹಲ್ಲೆ ನಡೆಸಿ, ಅವರ ಮೈಮೇಲಿದ್ದ ಚಿನ್ನಾಭರಣ ದೋಚಿ ಪರಾರಿಯಾಗಿತ್ತು' ಎಂದು ಪೊಲೀಸರು ತಿಳಿಸಿದ್ದಾರೆ.

ಅಚಲ್‌ನ ಫೋನ್ ಕರೆಯ ವಿವರಗಳನ್ನು ಪರಿಶೀಲಿಸಿದಾಗ, ಆತ ಪ್ರೇಮ್ ಶೆಟ್ಟಿ ಎಂಬಾತನಿಗೆ ಕರೆ ಮಾಡಿರುವುದು ಗೊತ್ತಾಯಿತು. ಪೊಲೀಸರಿಗೆ ಅನುಮಾನ ಬರುತ್ತಿದ್ದಂತೆ ಪವನ್ ಮತ್ತು ಅಚಲ್ ಪರಾರಿಯಾಗಿದ್ದು, ಆರೋಪಿಗಳಿಗಾಗಿ ಶೋಧ ಮುಂದುವರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಶ್ರೀಮಂತ ಕುಟುಂಬದ ಚಂದನ್, ಮೈತುಂಬಾ ಚಿನ್ನಾಭರಣ ಧರಿಸುತ್ತಿದ್ದ. ಆರೋಪಿಗಳ ಪೈಕಿ ಅಚಲ್, ಜೆ. ಪಿ ನಗರದಲ್ಲಿ ನಡೆಸುತ್ತಿದ್ದ ಕೆಫೆ ನಷ್ಟಕ್ಕೀಡಾಗಿತ್ತು. ಆದ್ದರಿಂದ ಈ ಕೃತ್ಯ ಎಸಗಿರಬಹುದು' ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಮದ್ಯ ಕುಡಿದು ಕೆಲಸ: ಬಿಎಂಟಿಸಿಯ 19 ನೌಕರರ ಅಮಾನತು

ಬೆಂಗಳೂರು: ಮದ್ಯ ಸೇವಿಸಿ ಕರ್ತವ್ಯ ನಿರ್ವಹಿಸಿದ ಆರೋಪದಡಿ 19 ನೌಕರರನ್ನು ಕಳೆದ ಆರು ತಿಂಗಳಲ್ಲಿ ಬಿಎಂಟಿಸಿ ಅಮಾನತು ಮಾಡಿದೆ.

ಕುಡಿದು ವಾಹನ ಚಲಾಯಿಸುವುದು ಮತ್ತು ಕರ್ತವ್ಯದಲ್ಲಿರುವಾಗ ಮದ್ಯ ಸೇವಿಸಿರುವುದನ್ನು ಪತ್ತೆ ಹಚ್ಚಲು ಬಿಎಂಟಿಸಿಯ 'ಸಾರಥಿ ಸ್ಕ್ವಾಡ್' ಮತ್ತು 'ಭದ್ರತಾ ತಂಡ' ಕಾರ್ಯನಿರ್ವಹಿಸುತ್ತಿವೆ. ಆರು ತಿಂಗಳಲ್ಲಿ ವಿವಿಧೆಡೆ ಪರಿಶೀಲನೆ ನಡೆಸಿದಾಗ ಇಬ್ಬರು ಚಾಲಕರು ಮದ್ಯ ಕುಡಿದು ಬಸ್ ಚಲಾಯಿಸುತ್ತಿರುವುದು ಕಂಡು ಬಂದಿದೆ. ಇದಲ್ಲದೆ ನಿರ್ವಾಹಕರು, ತಾಂತ್ರಿಕ ಸಿಬ್ಬಂದಿ ಸೇರಿ ಒಟ್ಟು 17 ನೌಕರರು ಕರ್ತವ್ಯದ ವೇಳೆ ಮದ್ಯ ಸೇವಿಸಿರುವುದು ಪತ್ತೆಯಾಗಿದೆ.

'ಕೆಲವು ಪ್ರಕರಣಗಳನ್ನು ಗಂಭೀರ ಎಂದು ಪರಿಗಣಿಸಲಾಗುತ್ತದೆ. ಮದ್ಯ ಸೇವಿಸಿ ಕರ್ತವ್ಯ ನಿರ್ವಹಿಸುವುದು, ಟಿಕೆಟ್ ನೀಡದೇ ₹ 100ಕ್ಕಿಂತ ಅಧಿಕ ವಂಚನೆ ಮಾಡುವುದೆಲ್ಲ ಇದರಲ್ಲಿ ಒಳಗೊಂಡಿದೆ. ಗಂಭೀರ ಸ್ವರೂಪದ ಪ್ರಕರಣ ಪತ್ತೆಯಾದ ತಕ್ಷಣವೇ ಅಂಥವರನ್ನು ಅಮಾನತು ಮಾಡಲಾಗುತ್ತದೆ' ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಅರ್ಧದಲ್ಲೇ ವಾಪಸಾದ ಡ್ರೀಮ್‌ಲೈನರ್ ವಿಮಾನ

ಹೈದರಾಬಾದ್ (ಪಿಟಿಐ): ಫ್ರಾಂಕ್‌ಫರ್ಟ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಟೇಕಾಫ್ ಆಗಿದ್ದ ಲುಫ್ತಾನ್ಸಾ ಏರ್‌ಲೈನ್ಸ್‌ನ ಬೋಯಿಂಗ್ 787-9 ಡ್ರೀಮ್‌ಲೈನರ್ ವಿಮಾನವು, ಹಾರಾಟದ ಆರಂಭಿಸಿದ ಸ್ವಲ್ಪ ಸಮಯದಲ್ಲೇ ಮರಳಿ, ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣದಲ್ಲೇ ಲ್ಯಾಂಡಿಂಗ್ ಆಗಿದೆ ಎಂದು ಮೂಲಗಳು ತಿಳಿಸಿವೆ.

ವಿಮಾನವು ಹಾರಾಟದ ಮಧ್ಯೆ, ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣಕ್ಕೆ ಮರಳಿದ್ದೇಕೆ ಎನ್ನುವುದಕ್ಕೆ ಕಾರಣ ತಿಳಿದು ಬಂದಿಲ್ಲ. ವಿಮಾನವು ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣದಿಂದ ಭಾನುವಾರ ಮಧ್ಯಾಹ್ನ 2.15ಕ್ಕೆ ಟೇಕಾಫ್ ಆಗಿತ್ತು. ಸೋಮವಾರ ಬೆಳಿಗ್ಗೆ 6 ಗಂಟೆಗೆ ಹೈದರಾಬಾದ್‌ನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿಯಬೇಕಿತ್ತು.

ಬ್ರಿಟಿಷ್ ಏರ್‌ವೇಸ್ ವಿಮಾನ ವಾಪಸ್ (ಮುಂಬೈ ವರದಿ): ಲಂಡನ್‌ನಿಂದ ಚೆನ್ನೈಗೆ ಹೊರಟಿದ್ದ ಬ್ರಿಟಿಷ್ ಏರ್‌ವೇಸ್‌ನ ಬೋಯಿಂಗ್ ಡ್ರೀಮ್‌ಲೈನರ್ ವಿಮಾನದಲ್ಲಿ ತಾಂತ್ರಿಕ ತೊಂದರೆ ಕಾಣಿಸಿದ್ದರಿಂದ ಭಾನುವಾರ ಲಂಡನ್‌ಗೆ ವಾಪಸಾಗಿದೆ. 'ವಿಮಾನ ಸುರಕ್ಷಿತವಾಗಿ ಲ್ಯಾಂಡ್ ಆಗಿದೆ' ಎಂದು ಬ್ರಿಟಿಷ್ ಏರ್‌ವೇಸ್ ತಿಳಿಸಿದೆ.

ನೀಟ್: ನಾರಾಯಣ ಸಂಸ್ಥೆ ಉತ್ತಮ ಸಾಧನೆ

ಬೆಂಗಳೂರು: ವೈದ್ಯಕೀಯ ಶಿಕ್ಷಣ ಕೋರ್ಸ್ ಪ್ರವೇಶಕ್ಕೆ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ನಡೆಸಿದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯಲ್ಲಿ (ನೀಟ್-ಯುಜಿ) ನಾರಾಯಣ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಅಖಿಲ ಭಾರತ ಮಟ್ಟದಲ್ಲಿ 4, 7, 12, 14, 18, 20 ಮತ್ತು 35ನೇ ಸ್ಥಾನವನ್ನು ಸಂಸ್ಥೆಯ ವಿದ್ಯಾರ್ಥಿಗಳು ಗಳಿಸಿದ್ದಾರೆ. ನವದೆಹಲಿಯ ಮೃಣಾಲ್ ಕಿಶೋರ್ ಝಾ (4), ಪಂಜಾಬ್‌ನ ಕೇಶವ್ ಮಿತ್ತಲ್ (7), ನವದೆಹಲಿಯ ಆಶಿ ಸಿಂಗ್ (12), ರಾಜಸ್ಥಾನದ ಸೌಮ್ಯಾ ಶರ್ಮಾ (14), ತೆಲಂಗಾಣದ ಕಾಕರ್ಲಾ ಜೀವನ್ ಸಾಯಿ ಕುಮಾರ್ (18) ಮತ್ತು ಪಶ್ಚಿಮ ಬಂಗಾಳದ ರೂಪ್ಯಾನ್ ಪಾಲ್ (20) ಅವರು ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

ಅಖಿಲ ಭಾರತ ಮಟ್ಟದಲ್ಲಿ ಅಗ್ರ 100 ಸ್ಥಾನಗಳಲ್ಲಿ 21 ಸ್ಥಾನಗಳು ಹಾಗೂ ಅಗ್ರ ಸಾವಿರ ಸ್ಥಾನಗಳಲ್ಲಿ 84 ಸ್ಥಾನಗಳನ್ನು ಸಂಸ್ಥೆಯ ವಿದ್ಯಾರ್ಥಿಗಳು ಪಡೆದಿದ್ದಾರೆ.

ಈ ಸಾಧಕರನ್ನು ಅಭಿನಂದಿಸಿರುವ ನಾರಾಯಣ ಶಿಕ್ಷಣ ಸಂಸ್ಥೆಗಳ ನಿರ್ದೇಶಕರಾದ ಡಾ.ಪಿ. ಸಿಂಧೂರ ನಾರಾಯಣ ಮತ್ತು ಪಿ.ಶರಣಿ ನಾರಾಯಣ, 'ರಾಷ್ಟ್ರೀಯ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಂಸ್ಥೆಯು ಉತ್ತಮ ಸಾಧನೆ ಮಾಡುತ್ತಿದೆ. ವ್ಯವಸ್ಥಿತ ಪರೀಕ್ಷೆಗಳು, ತಜ್ಞ ಅಧ್ಯಾಪಕರ ಮಾರ್ಗದರ್ಶನ, ತಂತ್ರಜ್ಞಾನ ಆಧಾರಿತ ಕಲಿಕಾ ಚೌಕಟ್ಟುಗಳು ಮತ್ತು ವಿದ್ಯಾರ್ಥಿ ಕೇಂದ್ರೀಕೃತ ವಿಶೇಷ ಕಾರ್ಯಕ್ರಮಗಳೇ ಇದಕ್ಕೆ ಕಾರಣ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಜಿ ಶಾಸಕ ಎನ್.ರಾಜಣ್ಣ ನಿಧನ

ಬೆಂಗಳೂರು: ನಗರದ ಹಿಂದಿನ ಭಾರತೀನಗರ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸಿದ್ದ, ಮಾಜಿ ಶಾಸಕ ಎನ್.ರಾಜಣ್ಣ (84) ಅವರು ಭಾನುವಾರ ನಿಧನರಾಗಿದ್ದಾರೆ.

1994ರ ಚುನಾವಣೆಯಲ್ಲಿ ಜನತಾದಳದಿಂದ ಸ್ಪರ್ಧಿಸಿ, ವಿಧಾನಸಭೆ ಪ್ರವೇಶಿಸಿದ್ದರು. ಈಚೆಗೆ ಸಕ್ರಿಯ ರಾಜಕೀಯದಿಂದ ದೂರ ಉಳಿದಿದ್ದರು.

ರಾಜಕೀಯದ ಜತೆಗೆ ಸಾವಯವ ಕೃಷಿಯಲ್ಲಿಯೂ ಅವರು ತಮ್ಮನ್ನು ತೊಡಗಿಸಿಕೊಂಡಿದ್ದರು. ಮೃತರು ತಮ್ಮ ಪತ್ನಿ, ಮಕ್ಕಳು ಮತ್ತು ಮೊಮ್ಮಕ್ಕಳನ್ನು ಅಗಲಿದ್ದಾರೆ.

ಎಲ್ಲೆಲ್ಲೂ ರಸ್ತೆ ಗುಂಡಿ

ರಸ್ತೆ ಗುಂಡಿ ಕಂಡರೆ ಫೋಟೊ ಕಳುಹಿಸಿ

ನಾಗರಿಕರು ತಾವು ವಾಸಿಸುವ ಹಾಗೂ ಸಂಚರಿಸುವ ರಸ್ತೆಗಳಲ್ಲಿ ಗುಂಡಿ ಕಂಡರೆ ಅದರ ಚಿತ್ರ ಸಹಿತ ಮಾಹಿತಿಯನ್ನು 'ಪ್ರಜಾವಾಣಿ'ಗೆ ಕಳುಹಿಸಿಕೊಡಬಹುದು. ನಿಮ್ಮ ಹೆಸರು ಹಾಗೂ ವಿಳಾಸವಿರಲಿ.

ವಾಟ್ಸ್ ಆ್ಯಪ್: 9606038256

ರಸ್ತೆ ಗುಂಡಿ ಅಪಾಯಕ್ಕೆ ದಾರಿ

ಕೆಂಗೇರಿ ಉಪನಗರದ ಎಂಟಿಎಸ್ ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

ಶಶಿಧರ್ ಆರಾಧ್ಯ, ಕೆಂಗೇರಿ ಉಪನಗರ

ರಾಷ್ಟ್ರೀಯ ಹೆದ್ದಾರಿ 75ಕ್ಕೆ ಸಂಪರ್ಕ ಕಲ್ಪಿಸುವ ಸರ್ವಿಸ್ ರಸ್ತೆಯ ಬಸ್ ತಂಗುದಾಣದ ಮುಂಭಾಗ ಗುಂಡಿಗಳು ಬಿದ್ದು, ಮಳೆ ನೀರು ಶೇಖರಣೆ ಆಗಿದೆ

ಕಿರಣ್ ಕುಮಾರ್ ಜೆ., ಮೇಡಹಳ್ಳಿ

ಬೇಗೂರಿನ ಕ್ಲಾಸಿಕ್ ಪ್ಯಾರಡೈಸ್ ಬಡಾವಣೆಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ಹದಗೆಟ್ಟಿರುವ ರಸ್ತೆಯಲ್ಲಿ ದ್ವಿಚಕ್ರ ವಾಹನಗಳು ಸಂಚರಿಸಿದವು

ಎಚ್. ಸುರೇಶ್, ಬೇಗೂರು

ಚಾಲಕನಿಗೆ ಚಪ್ಪಲಿ ಹೊಡೆತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿ ಬಸ್ ಚಾಲಕನಿಗೆ ಮಹಿಳೆಯೊಬ್ಬರು ಚಪ್ಪಲಿಯಲ್ಲಿ ಹೊಡೆದ ಘಟನೆ ಬೆಳ್ಳಂದೂರು ಪೊಲೀಸ್ ಠಾಣಾ ವ್ಯಾಪ್ತಿಯ ಸರ್ಜಾಪುರ ರಸ್ತೆಯ ಕೈಕೊಂಡ್ರಹಳ್ಳಿಯಲ್ಲಿ ನಡೆದಿದೆ.

ಬಸ್ ನಿಲ್ದಾಣವಲ್ಲದ ಸ್ಥಳದಲ್ಲಿ ನಿಲುಗಡೆ ಮಾಡಲು ನಿರಾಕರಿಸಿದ ಕಾರಣಕ್ಕೆ ಮಹಿಳೆ ಚಾಲಕನಿಗೆ ಚಪ್ಪಲಿಯಲ್ಲಿ ಹೊಡೆದಿದ್ದಾರೆ ಎನ್ನಲಾಗಿದೆ. ಪೊಲೀಸರು ಮಹಿಳೆಯನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸಿದರು. ಕ್ಷಮೆಯಾಚಿಸಿದ ಕಾರಣ ಬಿಟ್ಟು ಕಳುಹಿಸಲಾಗಿದೆ.

ಸಾಫ್ಟ್‌ವೇರ್ ಎಂಜಿನಿಯರ್ ಕಾವ್ಯಾ ಅವರು ಚಪ್ಪಲಿಯಿಂದ ಹೊಡೆದಿದ್ದಾರೆ ಎಂದು ಬಿಎಂಟಿಸಿಯ 38ನೇ ಡಿಪೊದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹುಸೇನ್ ದೂರು ನೀಡಿದ್ದಾರೆ. ಕಾವ್ಯಾ ವಿರುದ್ಧ ಕರ್ತವ್ಯ ನಿರ್ವಹಣೆಗೆ ಅಡ್ಡಿ, ಹಲ್ಲೆ, ಶಾಂತಿ ಭಂಗ ಹಾಗೂ ಸಾರ್ವಜನಿಕ ಸೇವಕನನ್ನು ಉದ್ದೇಶಪೂರ್ವಕವಾಗಿ ಅವಮಾನಿಸಿದ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಟಿನ್ ಫ್ಯಾಕ್ಟರಿಯಿಂದ ಎಲೆಕ್ಟ್ರಾನಿಕ್ ಸಿಟಿ ಕಡೆಗೆ ಬಸ್ ಹೋಗುತ್ತಿತ್ತು. ಆ ಬಸ್‌ಗೆ ಹತ್ತಿದ್ದ ಕಾವ್ಯಾ, ಕೈಕೊಂಡ್ರಹಳ್ಳಿಗೆ ಟಿಕೆಟ್ ತೆಗೆದುಕೊಂಡಿದ್ದರು. ಬಸ್ ಕೈಕೊಂಡ್ರಹಳ್ಳಿಗೆ ತಲುಪುವ ಮುನ್ನವೇ ಕಾವ್ಯಾ, ತಮ್ಮ ಕಚೇರಿ ಮುಂದೆ ಬಸ್ ನಿಲ್ಲಿಸುವಂತೆ ಚಾಲಕನಿಗೆ ಕೇಳಿದ್ದಾರೆ. ಆದರೆ, ಅಲ್ಲಿ ನಿಲುಗಡೆ ಇಲ್ಲದ ಕಾರಣಕ್ಕೆ ಬಸ್ ನಿಲ್ಲಿಸಿಲ್ಲ. ಇದರಿಂದ ಕೋಪಗೊಂಡ ಕಾವ್ಯಾ, ಚಾಲಕನ ಜತೆ ವಾಗ್ವಾದ ನಡೆಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿ, ಚಪ್ಪಲಿಯಿಂದ ಹೊಡೆದಿದ್ದಾರೆ' ಎಂದು ಪೊಲೀಸರು ಹೇಳಿದ್ದಾರೆ.

ಕಾವ್ಯಾ ಅವರನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದು ವಿಚಾರಣೆ ನಡೆಸಲಾಯಿತು. ಬಳಿಕ ಅವರ ಪತಿಯು ಠಾಣೆಗೆ ಬಂದು ಕ್ಷಮೆ ಯಾಚಿಸಿದರು. ಕಾವ್ಯಾ ಅವರು ಮಾನಸಿಕ ಸ ಮಸ್ಯೆಯಿಂದ ಬಳಲುತ್ತಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅವರ ಪತಿ ತಿಳಿಸಿದರು. ನಂತರ ಕಾವ್ಯಾ ಅವರನ್ನು ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕ್ರಮ ಕೈಗೊಳ್ಳುವಂತೆ ಸಾರಿಗೆ ಸಚಿವರ ಪತ್ರ

ಬಿಎಂಟಿಸಿ ಬಸ್ ಚಾಲಕನಿಗೆ ಚಪ್ಪಲಿಯಲ್ಲಿ ಹೊಡೆದ ಮಹಿಳಾ ಟೆಕಿ ವಿರುದ್ಧ ಕ್ರಮ ಕೈಗೊಳ್ಳಬೇಕು. ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಚಾಲಕರು ಮತ್ತು ನಿರ್ವಾಹಕರಿಗೆ ರಕ್ಷಣೆ ನೀಡಲು ಪೊಲೀಸರು ಕ್ರಮ ಕೈಗೊಳ್ಳಬೇಕು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಗೃಹ ಸಚಿವ ಜಿ. ಪರಮೇಶ್ವರ ಅವರಿಗೆ ಪತ್ರ ಬರೆದಿದ್ದಾರೆ.

ಇತ್ತೀಚೆಗೆ ಬಸ್ ಚಾಲಕರು ಹಾಗೂ ನಿರ್ವಾಹಕರ ಮೇಲೆ ಇಂತಹ ಹಲ್ಲೆ ಮತ್ತು ಅವಮಾನಿಸುವ ಪ್ರಕರಣಗಳು ಹೆಚ್ಚಾಗುತ್ತಿವೆ. ಕೆಲವು ಕಿಡಿಗೇಡಿಗಳು ಪ್ರಾಣಕ್ಕೆ ಸಂಚಕಾರ ತರುವ ಪ್ರಯತ್ನವನ್ನೂ ನಡೆಸಿದ್ದಾರೆ. ಚಾಕುವಿನಿಂದ ಹಲ್ಲೆ ಮಾಡಿದ ಘಟನೆಯೂ ಈ ಹಿಂದೆ ನಡೆದಿತ್ತು. ಹೀಗಾಗಿ, ಇಂತಹ ನಡೆಯನ್ನು ತಪ್ಪಿಸಲು ಪೊಲೀಸ್ ಇಲಾಖೆ ಆರೋಪಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಪತ್ರದಲ್ಲಿ ತಿಳಿಸಿದ್ದಾರೆ.

'ನಮ್ಮ ಸಿಬ್ಬಂದಿಯಿಂದ ತಪ್ಪಾದಾಗ ಮುಲಾಜಿಲ್ಲದೇ ಕ್ರಮ ಕೈಗೊಳ್ಳುತ್ತಿದ್ದೇವೆ. ನಮ್ಮ ಇಲಾಖೆಯ ಸಿಬ್ಬಂದಿ ಮೇಲೆ ನಡೆಯುವ ಹಲ್ಲೆ ಮತ್ತು ಅವಮಾನವನ್ನು ಸಹಿಸಲಾಗದು. ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳುವ ಮೂಲಕ ಈ ರೀತಿಯ ಪ್ರಕರಣಗಳು ಮರುಕಳಿಸದಂತೆ ತಡೆಯಲು ಶಾಶ್ವತ ಪರಿಹಾರ ರೂಪಿಸಬೇಕು' ಎಂದು ಆಗ್ರಹಿಸಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

BUSINESS

Business to Business

Finance

WE DO Mortgage, House Purchase, Site Purchase, Construction, Takeover of Loans from all Banks. Contact: 9353705002.

Business Offers

Finance

MSME LOANS Available for any start up company,any existing Companies avail this opportunity contact-7204995189

PERSONAL

Lost

LOST

I, Sujatha H C, residing at no 94 Sathagalli badavane, Nazar baadh mahalla, Mysore - 570019.Have lost my Original Sale deed, document number: myn-1-08304/2007-2008, CD no mynd 149 date 17/8/2007, Register by name P.Narayanswamy and D.Saroja, while shifting the house. Finders please contact - 9008092097

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

JOB OPPORTUNITIES

Wanted

COMPUTER OPERATOR for Reputed Pharma company, Preferably in and around Magadi-Nelamangala road Contact: 9148006935.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager The Printers (Mysore) Pvt. Ltd. Bengaluru

DH Classifieds More value, more impact

NAME CHANGE

ಪ್ರಜಾವಾಣಿ

@50/-* PER WORDS

Book your Name Change Ad in DH All Karnataka + Prajavani Bengaluru City All Days

www.dhclassifieds.com

BOOK NOW

For more details contact:

+91 7795158424

+91 9731810277 | +91 9900428036

*Conditions apply

ನಗರದಲ್ಲಿ ಇಂದು

ವಿಶ್ವ ರಕ್ತದಾನಿಗಳ ದಿನಾಚರಣೆ-2025: ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ. ಶಿವಕುಮಾರ್, ರಾಮಲಿಂಗಾರೆಡ್ಡಿ, ಕೆ.ಜೆ. ಜಾರ್ಜ್, ಕೃಷ್ಣ ಬೈರೇಗೌಡ, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಆಯೋಜನೆ: ಆರೋಗ್ಯ ಇಲಾಖೆ, ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 11

ಥೆರೆಸಮ್ಮ ಡಿಸೋಜ ಅವರಿಗೆ ನುಡಿ ರಂಗ ನಮನ: ಅತಿಥಿಗಳು: ಉಮಾಶ್ರೀ, ಕೆ.ವಿ. ನಾಗರಾಜಮೂರ್ತಿ, ಮಾಲತಿ ಸುಧೀರ್, ಜೆ. ಲೋಕೇಶ್, ಶ್ರೀನಿವಾಸ್‌ಮೂರ್ತಿ, ಅಧ್ಯಕ್ಷತೆ: ಶ್ರೀನಿವಾಸ್ ಜಿ. ಕಪ್ಪಣ್ಣ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ರಂಗ ಬದುಕು ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 4

'ಶ್ರೀಮದ್ಭಾಗವತ ಸಪ್ತಮ ಸ್ಕಂದ' ಪ್ರವಚನ: ಹರೀಶಾಚಾರ್ಯ ಆರಣಿ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಸಂಜೆ 7

'ಹೆಸರೇ ಇಲ್ಲದವರು' ನಾಟಕ ಪ್ರದರ್ಶನ: ನಿರ್ದೇಶನ: ರಾಜ್‌ಗುರು ಹೊಸಕೋಟೆ, ಆಯೋಜನೆ: ರಂಗಪಯಣ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

ಹಲವು ರಾಜ್ಯಗಳಲ್ಲಿ ಸಕ್ರಿಯವಾಗಿರುವ ಜಾಲ ಪತ್ತೆ ಮಾಡಿದ ನಗರ ಪೊಲೀಸರು

ವಿದೇಶಿ ಕ್ಯಾಸಿನೊ ಏಜೆಂಟರ ಮೇಲೆ ಕಣ್ಗಾವಲು

• ಚೇತನ್ ಬಿ.ಸಿ.

ಬೆಂಗಳೂರು: ಶ್ರೀಲಂಕಾ ಸೇರಿದಂತೆ ವಿದೇಶದ ಕ್ಯಾಸಿನೊಗಳಲ್ಲಿ ಕೆಲಸ ಮಾಡುವ ಏಜೆಂಟರ ಜಾಲ ಪತ್ತೆ ಮಾಡಿರುವ ನಗರ ಪೊಲೀಸರು, ಕ್ಯಾಸಿನೊ ನಡೆಸುವವರು ಸೈಬರ್ ಅಪರಾಧ ಕಿಂಗ್‌ಪಿನ್‌ಗಳ ಜತೆ ನಂಟು ಹೊಂದಿರಬಹುದು ಅಥವಾ ಸೈಬರ್ ಅಪರಾಧದಲ್ಲಿ ತೊಡಗಿಸಿಕೊಂಡಿರಬಹುದು ಎಂದು ಶಂಕೆ ವ್ಯಕ್ತಪಡಿಸಿದ್ದಾರೆ.

ರಾಜ್ಯದಲ್ಲಿ ಅಷ್ಟೇ ಅಲ್ಲದೆ, ವಿಶಾಖಪಟ್ಟಣ, ಚೆನ್ನೈ, ತಿರುವನಂತಪುರ ಮತ್ತು ಹೈದರಾಬಾದ್‌ನಲ್ಲಿ ಈ ಏಜೆಂಟರು ಸಕ್ರಿಯರಾಗಿದ್ದಾರೆ. ಆದರೆ, ಈ ಜಾಲವು ಉತ್ತರ ಭಾರತದ ರಾಜ್ಯಗಳಲ್ಲಿ ಸಕ್ರಿಯವಾಗಿರುವ ಬಗ್ಗೆ ಯಾವುದೇ ಪುರಾವೆಗಳು ಸಿಕ್ಕಿಲ್ಲ.



'ಏಜೆಂಟರು ತಮ್ಮ ಕ್ಯಾಸಿನೊಗಳ ಬಗ್ಗೆ ಇನ್‌ಸ್ಟಾಗ್ರಾಮ್, ಫೇಸ್‌ಬುಕ್, ಟೆಲಿಗ್ರಾಮ್ ಮತ್ತು ಇತರೆ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಪ್ರಚಾರ ಮಾಡುತ್ತಿದ್ದಾರೆ. ಆಸಕ್ತ ಗ್ರಾಹಕರು ಜಾಲತಾಣದಲ್ಲಿನ ಲಿಂಕ್ ಕ್ಲಿಕ್ ಮಾಡಿದಾಗ, ಏಜೆಂಟರು ಅವರನ್ನು ಸಂಪರ್ಕಿಸಿ, ಪ್ಯಾಕೇಜ್‌ಗಳ ಬಗ್ಗೆ ವಿವರಿಸುತ್ತಾರೆ. ಪ್ಯಾಕೇಜ್ ಆಧರಿಸಿ, ಶುಲ್ಕ ಪಡೆದುಕೊಳ್ಳುತ್ತಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಗ್ರಾಹಕರ ವಿದೇಶ ಪ್ರಯಾಣ, ಊಟ ಹಾಗೂ ಹೋಟೆಲ್ ವ್ಯವಸ್ಥೆ ಸೇರಿ ಇತರೆ ಸೌಲಭ್ಯವನ್ನು ಏಜೆಂಟರೇ ಒದಗಿಸುತ್ತಾರೆ. ಕ್ಯಾಸಿನೊಗಳು ಗ್ರಾಹಕರಿಗೆ ಪ್ಯಾಕೇಜ್ ಪ್ರಕಾರ ಪಾವತಿಸಿದ ಮೊತ್ತಕ್ಕೆ ಸಮಾನವಾದ ನಾಣ್ಯಗಳನ್ನು ಒದಗಿಸುತ್ತವೆ' ಎಂದರು.

'ಗೋವಾದಲ್ಲಿ ಕ್ಯಾಸಿನೊ ಇರುವಾಗ ವಿದೇಶದ ಕ್ಯಾಸಿನೊಗಳಿಗೆ ಏಕೆ ಭೇಟಿ ನೀಡುತ್ತಾರೆ ಎಂದು ಆರಂಭದಲ್ಲಿ ಪೊಲೀಸರಿಗೆ ಗೊಂದಲ ಉಂಟಾಗಿತ್ತು. ತನಿಖೆ ನಡೆಸಿದಾಗ, ವಿದೇಶಿ ಕ್ಯಾಸಿನೊಗಳಲ್ಲಿ ಗೆಲುವಿನ ಪ್ರಮಾಣ ಶೇಕಡ 33ರಷ್ಟು ಇದ್ದರೆ, ಗೋವಾದಲ್ಲಿ ಕೇವಲ ಶೇಕಡ 8 ರಷ್ಟಿದೆ. ಈ ಏಜೆಂಟರು ಭಾರತದಲ್ಲಿ ನೋಂದಾಯಿಸಿಕೊಂಡಿಲ್ಲ ಹಾಗೂ ಗ್ರಾಹಕರಿಂದ ಸಂಗ್ರಹಿಸಿದ ಹಣವನ್ನು ವಿದೇಶಿ ಕ್ಯಾಸಿನೊಗಳಿಗೆ ಹೇಗೆ ವರ್ಗಾಯಿಸಲಾಗುತ್ತಿದೆ ಎಂಬುದರ ಬಗ್ಗೆ ಯಾವುದೇ ಸ್ಪಷ್ಟತೆ ಇಲ್ಲ' ಎಂದು ಅಧಿಕಾರಿಗಳು ಹೇಳಿದರು.

'ಹಣವನ್ನು ಕ್ರಿಪ್ಟೋಕರೆನ್ಸಿಯಾಗಿ ಪರಿವರ್ತಿಸಿ ಕ್ಯಾಸಿನೊ ನಡೆಸುವವರಿಗೆ ಕಳುಹಿಸಿರುವ ಸಾಧ್ಯತೆ ಇರಬಹುದು. ಇದು ಹಣ ಅಕ್ರಮ ವರ್ಗಾವಣೆ ವ್ಯಾಪ್ತಿಗೆ ಬರಲಿದೆ. ತನಿಖೆ ಪೂರ್ಣಗೊಂಡ ನಂತರ, ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಪತ್ರ ಬರೆಯಲಾಗುವುದು. ಹಲವು ಏಜೆಂಟರನ್ನು ಪತ್ತೆ ಮಾಡಿದ್ದು, ತನಿಖೆ ನಡೆಯುತ್ತಿದೆ' ಎಂದು ವಿವರಿಸಿದರು.

ಆಗ್ನೇಯ ಸೆನ್ ಪೊಲೀಸ್ ಠಾಣೆಯಲ್ಲಿ ದಾಖಲಾದ ಸೈಬರ್ ಅಪರಾಧ ಪ್ರಕರಣದ ತನಿಖೆ ಸಂದರ್ಭದಲ್ಲಿ ಈ ಜಾಲವು ಬೆಳಕಿಗೆ ಬಂದಿದೆ.

ನಿಧನ ವಾರ್ತೆ

ಅಂತೋಣಿ ಮೇರಿ

ಬೆಂಗಳೂರು: ಫ್ರೇಜರ್ ಟೌನ್‌ನ ಕೋಲ್ಸ್ ಪಾರ್ಕ್ ಬಳಿ ಇರುವ ಸಂತ ಅಂತೋಣಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ಅಂತೋಣಿ ಮೇರಿ (59) ಅವರು ಭಾನುವಾರ ಬೆಳಿಗ್ಗೆ 8.30ಕ್ಕೆ ನಿಧನರಾಗಿದ್ದಾರೆ.

ಹೆಬ್ಬಾಳದ ವಿ.ನಾಗೇನಹಳ್ಳಿ ನಿವಾಸಿಯಾದ ಅವರು, ಕ್ಯಾನ್ಸರ್ ಪೀಡಿತರಾಗಿದ್ದರು. ಮೃತರಿಗೆ ಪತಿ, ಇಬ್ಬರು ಪುತ್ರಿಯರು ಹಾಗೂ ಒಬ್ಬ ಪುತ್ರ ಇದ್ದಾರೆ.

ಮೃತರ ಅಂತ್ಯಕ್ರಿಯೆಯು ಸೋಮವಾರ ಮಧ್ಯಾಹ್ನ 2 ಗಂಟೆಗೆ ನಗರದ ವಿ. ನಾಗೇನಹಳ್ಳಿಯಲ್ಲಿ ನೆರವೇರಲಿದೆ ಎಂದು ಅವರ ಕುಟುಂಬಸ್ಥರು ಮಾಹಿತಿ ನೀಡಿದ್ದಾರೆ.

ಸಂಪರ್ಕಕ್ಕೆ: 94814 23743

27.2 ಕೋಟಿ ಜಾಗತಿಕವಾಗಿ ಶಾಲೆಯಿಂದ ಹೊರಗುಳಿದಿರುವ ಮಕ್ಕಳ ಸಂಖ್ಯೆ

2.1 ಕೋಟಿ ಹಿಂದಿನ ವರ್ಷ ಅಂದಾಜಿಸಿದ್ದಕ್ಕಿಂತ ಹೆಚ್ಚಿನ ಸಂಖ್ಯೆ

2 ಪ್ರಮುಖ ಕಾರಣಗಳು
- ಹೊಸದಾಗಿ ದಾಖಲಾಗುವ ಮಕ್ಕಳ ಪ್ರಮಾಣದಲ್ಲಿ ಇಳಿಕೆ
- ಅಫ್ಗಾನಿಸ್ತಾನದಲ್ಲಿ ಹೆಣ್ಣುಮಕ್ಕಳ ಶಾಲಾ ಕಲಿಕೆಗೆ ನಿಷೇಧ ಹೇರಿರುವುದು

ಯುನೆಸ್ಕೊದ ಜಾಗತಿಕ ಶಿಕ್ಷಣ ಮೇಲ್ವಿಚಾರಣಾ ತಂಡದ (ಜಿಇಎಂ) ವರದಿ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಸಮಾಜ

ಸಮಾಜ ವಿಜ್ಞಾನ : ಇತಿಹಾಸ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

6) ಪ್ಲಾಸಿ ಕದನದ ಪರಿಣಾಮಗಳೇನು? (ಜೂನ್ 2017 ಪರೀಕ್ಷೆ)

ಉತ್ತರ:– ಪ್ಲಾಸಿ ಕದನದ ಪರಿಣಾಮಗಳು

(.......ಹಿಂದಿನ ಸಂಚಿಕೆಯಿಂದ)

ಒಟ್ಟಾರೆ, ಮೀರ್ ಜಾಫರನು ಕಂಪನಿ ಮತ್ತು ನೌಕರರ ಕೈಗೊಂಬೆಯಾಗುವ ಮೂಲಕ ನಿರಂತರ ಶೋಷಣೆಗೆ ಒಳಗಾದನು. ಇದರಿಂದ ನವಾಬನ ಬೊಕ್ಕಸ ಬರಿದಾಯಿತೇ ವಿನಃ ಧನ ಪಿಶಾಚಿಗಳಾದ ಕಂಪನಿಯ ಅಧಿಕಾರಿಗಳ ತೃಷೆ ಮಾತ್ರ ತೀರಲಿಲ್ಲ. ಪರಿಣಾಮವಾಗಿ ಬ್ರಿಟಿಷರು ಮೀರ್ ಜಾಫರ್ ಅಸಮರ್ಥನೆಂದು ಬಿಂಬಿಸಿ ಅವನನ್ನು ನವಾಬ ಸ್ಥಾನದಿಂದ ಪದಚ್ಯುತಗೊಳಿಸಿ ಅವನ ಅಳಿಯನಾದ ಮೀರ್ ಖಾಸಿಂನನ್ನು ಬಂಗಾಳದ ನವಾಬನೆಂದು ನೇಮಿಸಿದರು.

7) 'ದ್ವಿ ಪ್ರಭುತ್ವ' ಪದ್ಧತಿ ಎಂದರೇನು?

ಉತ್ತರ:– ಬ್ರಿಟಿಷರು ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು ಹೊಂದಿದರು ಹಾಗೂ **ನವಾಬನು** ಆಡಳಿತ, ನ್ಯಾಯ ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು. ಇದನ್ನೇ 'ದ್ವಿ ಪ್ರಭುತ್ವ' ಎನ್ನುವರು. (ಏಪ್ರಿಲ್ 2017 ವಾರ್ಷಿಕ ಪರೀಕ್ಷೆ)

****

ಅಧ್ಯಾಯ–2 ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ.

1. ಮೊದಲನೇ ಆಂಗ್ಲೋ–ಮರಾಠ ಯುದ್ಧದ ಅಂತ್ಯದಲ್ಲಿ ಮರಾಠರು ಮತ್ತು ಬ್ರಿಟಿಷರ ಮಧ್ಯ ____________ ಒಪ್ಪಂದ ಆಯಿತು.

2. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವನು ____________.

3. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ____________ ರಲ್ಲಿ ಜಾರಿಗೆ ತರಲಾಯಿತು.

4. ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಯನ್ನು ಜಾರಿಗೆ ತಂದವನು ____________

ಉತ್ತರ:– 1) ಸಾಲ್‌ಬಾಯ್ ಒಪ್ಪಂದವನ್ನು 2) ವೆಲ್ಲೆಸ್ಲಿ 3) 1848 4) ಡಾಲ್‌ಹೌಸಿ

ಹೆಚ್ಚಿನ ಪ್ರಶ್ನೆಗಳು

5) ಬಕ್ಸಾರ್ ಕದನದಲ್ಲಿ ಸೋತು ಬ್ರಿಟಿಷರ ಆಶ್ರಯದಲ್ಲಿದ್ದ ಮೊಗಲ್ ಚಕ್ರವರ್ತಿ ಎರಡನೇ ಷಾ ಆಲಂನನ್ನು ....ರು ಕರೆತಂದು ಮತ್ತೆ ದೆಹಲಿಯ ಸಿಂಹಾಸನದಲ್ಲಿ ಕುಳ್ಳಿರಿಸಿದರು

ಉತ್ತರ:– ಮರಾಠ

6) ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗೆ ಒಳಗಾದ ಮೊದಲ ರಾಜ್ಯ ....

ಉತ್ತರ:– ಹೈದರಾಬಾದ್

7) ಮರಾಠ ಮನೆತನಗಳ ನಾಯಕರ ನಡುವಿನ ಸಂಘರ್ಷವೇ .... ಯುದ್ಧಕ್ಕೆ ಕಾರಣವಾಯಿತು

ಉತ್ತರ:– ಎರಡನೇ ಆಂಗ್ಲೋ–ಮರಾಠ ಯುದ್ಧ

8) ಪೇಶ್ವೆಯು ....ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದನು. ಪೇಶ್ವೆಯು ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದ್ದನು

ಉತ್ತರ:– ಬೆಸ್ಸಿನ್

9) 1839ರಲ್ಲಿ ರಣಜಿತ್ ಸಿಂಗನು ಮರಣ ಹೊಂದಿದ ನಂತರ ಪಂಜಾಬಿನಲ್ಲಿ ರಾಜಕೀಯ ಅರಾಜಕತೆ ತಲೆ ಎತ್ತಿತು. ....ರ 'ನಿರಂತರ ಮೈತ್ರಿ ಒಪ್ಪಂದ'ವನ್ನು ಉಲ್ಲಂಘಿಸಿ ಪಂಜಾಬನ್ನು ಆಕ್ರಮಿಸಲು ಬ್ರಿಟಿಷರು ಸಂಚು ರೂಪಿಸಿದರು.

ಉತ್ತರ:– 1809

10) 1780ರಲ್ಲಿ ಜನಿಸಿದ ರಣಜಿತ್ ಸಿಂಗನು ಸಿಖ್‌ರ 12 ಮಿಸ್ಲ್ (ಒಕ್ಕೂಟ)ಗಳಲ್ಲಿ ಒಂದಾದ ....ಮಿಸ್ಲ್‌ನ ನಾಯಕ ಮಹಾಸಿಂಗ್‌ನ ಮಗ.

ಉತ್ತರ:– ಸುಖರ್ ಚಾಕೀಯಾ

11) ರಣಜಿತ್ ಸಿಂಗನು ....ನಲ್ಲಿ ಫಿರಂಗಿಗಳನ್ನು ತಯಾರಿಸಲು ಎರಕ ಹೊಯ್ಯುವ ಕಾರ್ಖಾನೆಯನ್ನು ತೆರೆದನು.

ಉತ್ತರ:– **ಲಾಹೋರ್**

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಮೊದಲ ಆಂಗ್ಲೋ–ಮರಾಠ ಯುದ್ಧ ಬಗ್ಗೆ ಬರೆಯಿರಿ

ಉತ್ತರ: ಬಕ್ಸಾರ್ ಕದನದಲ್ಲಿ ಸೋತು ಬ್ರಿಟಿಷರ ಆಶ್ರಯದಲ್ಲಿದ್ದ ಮೊಗಲ್ ಚಕ್ರವರ್ತಿ ಎರಡನೇ ಷಾ ಆಲಂನನ್ನು ಮರಾಠರು ಕರೆತಂದು ಮತ್ತೆ ದೆಹಲಿಯ ಸಿಂಹಾಸನದಲ್ಲಿ ಕುಳ್ಳಿರಿಸಿದರು. ಚಕ್ರವರ್ತಿಯು ಮೊದಲು ಬ್ರಿಟಿಷರಿಗೆ ನೀಡಿದ್ದ ಕೋರ ಮತ್ತು ಅಲಹಾಬಾದ್‌ಗಳನ್ನು ಮರಾಠರಿಗೆ ಕೊಟ್ಟನು. ಇದರಿಂದ ಮರಾಠರು ಮತ್ತು ಬ್ರಿಟಿಷರ ನಡುವೆ ವೈರತ್ವವು ಮನೆ ಮಾಡಿತು. ಮರಾಠರ ಬಲಿಷ್ಠ ಪೇಶ್ವೆ ಮಾಧವರಾವ್ ಇದೇ ಸಮಯದಲ್ಲಿ ತೀರಿಕೊಂಡದ್ದು ಮರಾಠರಿಗೆ ತುಂಬಲಾರದ ನಷ್ಟವಾಯಿತು. ಪೇಶ್ವೆಯ ಸ್ಥಾನಕ್ಕೆ ಅವನ ತಮ್ಮ ನಾರಾಯಣ ರಾಯನು ಬಂದನಾದರೂ ಅವನನ್ನು ಅವನ ಚಿಕ್ಕಪ್ಪ ರಘೋಬ(ರಘುನಾಥ ರಾವ್)ನು ಕೊಲೆ ಮಾಡಿದನು. ಇದರಿಂದ ಪೇಶ್ವೆಯ ಸ್ಥಾನಕ್ಕೆ ಕಲಹ ಏರ್ಪಟ್ಟಿತು. ನಾನಾ ಫಡ್ನವೀಸ್ ನೇತೃತ್ವದಲ್ಲಿ ಪೇಶ್ವೆ ಸ್ಥಾನಾಕಾಂಕ್ಷಿಯಾದ ರಘೋಬನ ಬದಲು ನಾರಾಯಣರಾಯನ ಮಗ ಎರಡನೇ ಮಾಧವರಾವ್‌ಗೆ ಮರಾಠ ಒಕ್ಕೂಟವು ಪಟ್ಟ ಕಟ್ಟಿತು. ಮರಾಠ ಮನೆತನಗಳಿಂದ ನಿರೀಕ್ಷಿತ ಬೆಂಬಲ ಸಿಗದ ರಘೋಬನು ಬ್ರಿಟಿಷರ ಬೆಂಬಲ ಕೋರಿದನು. ಬ್ರಿಟಿಷರು ಈ ಸಂದರ್ಭವನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳಲು ಯೋಚಿಸಿದರು. ಬ್ರಿಟಿಷರು ಮತ್ತು ಮರಾಠ ಒಕ್ಕೂಟಗಳ ನಡುವೆ 1775–1782ರವರೆಗೆ ನಡೆದ ದೀರ್ಘ ಯುದ್ಧದಲ್ಲಿ ಮರಾಠರು ಪ್ರಾರಂಭಿಕ ಯಶಸ್ಸನ್ನು ಸಾಧಿಸಿದರೂ, ಅಂತಿಮವಾಗಿ ಅಹಮದಾಬಾದ್ ಅನ್ನು ಕಳೆದುಕೊಂಡರು. ಮರಾಠ ಒಕ್ಕೂಟವು ಯುದ್ಧ ಮುಂದುವರೆಸಲಾಗದೇ ಬ್ರಿಟಿಷರೊಂದಿಗೆ ಸಾಲ್‌ಬಾಯ್ ಒಪ್ಪಂದವನ್ನು ಮಾಡಿಕೊಂಡಿತು. ಎರಡನೇ ಮಾಧವರಾವನನ್ನು ಪೇಶ್ವೆಯಾಗಿ ನೇಮಿಸಲಾಯಿತು

2) ಸಹಾಯಕ ಸೈನ್ಯ ಪದ್ಧತಿ ನಿಬಂಧನೆಗಳು ಯಾವುವು?

ಉತ್ತರ: ಭಾರತೀಯ ರಾಜ್ಯಗಳನ್ನು ನಿಯಂತ್ರಣಕ್ಕೆ ಒಳಪಡಿಸಿಕೊಳ್ಳುವ ಸಲುವಾಗಿ ಸಹಾಯಕ ಸೈನ್ಯ ಪದ್ಧತಿ ಎಂಬ ನೀತಿಯನ್ನು ವೆಲ್ಲೆಸ್ಲಿಯು 1798ರಲ್ಲಿ ಜಾರಿಗೆ ತಂದನು. ಸಹಾಯಕ ಸೈನ್ಯ ಪದ್ಧತಿಯು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಮತ್ತು ಭಾರತೀಯ ರಾಜ್ಯಗಳ ನಡುವಿನ ಒಂದು ಸೈನಿಕ ಒಪ್ಪಂದವಾಗಿದೆ.

ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳು:

1. ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು. (ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

PHYSICS

Chapter – 1

ELECTRIC CHARGES AND FIELDS

7. In the given figure q_A = -256 C, q_B = 299 C and q_C = 81 C. Calculate net electric field along DA.



(.....Contd)

Electric field at D due to q_A,

$$E_1 = \frac{1}{4\pi\epsilon_0}\frac{q_A}{AD^2} = \frac{9\times10^9 \times 256}{(3.2\times10^{-2})^2}$$
$$= 225 \times 10^{13}\ NC^{-1} \text{ along DA}$$



Electric field at D due to q_B,

$$E_2 = \frac{1}{4\pi\epsilon_0}\frac{q_B}{BD^2} = \frac{9\times10^9 \times 299}{(2.4\times10^{-2})^2}$$
$$= 467.2 \times 10^4\ NC^{-1} \text{ along DF}$$

Electric field at D due to q_C,

$$E_3 = \frac{1}{4\pi\epsilon_0}\frac{q_C}{CD^2} = \frac{9\times10^9 \times 81}{(1.8\times10^{-2})^2}$$
$$= 225 \times 10^{13}\ NC^{-1} \text{ along DA}$$

∴ Net electric field along DA = $E_1 + E_3$
$= 2 \times 225 \times 10^{13}\ NC^{-1}$
$= 4.5 \times 10^{15}\ NC^{-1}$

8. A copper ball of density 8.6 g cm^{-3} and 1 cm in diameter is immersed in oil of density 0.8 g cm^{-3}. What is the charge on the ball, if it remains just suspended in oil electric field of intensity 3600 Vm^{-1} acting in the upward direction? *(Electric force on the ball should be equal to the observed weight of the ball for the ball to remain just suspended in oil)*

Soln:- Observed weight of ball = actual weight of ball – weight of oil displaced

$$W_0 = \frac{4}{3}\pi R^3\rho g - \frac{4}{3}\pi R^3\sigma g$$



$$W_0 = \frac{4}{3}\pi R^3(\rho - \sigma)g$$
$$= \frac{4}{3}\pi(5\times10^{-3})^3 \times (8600 - 800) \times 9.8$$
$$= \frac{4}{3}\pi(5\times10^{-3})^3 \times 7800 \times 9.8 \quad ...(i)$$

Electric force on the ball F = qE
= q x 3600 .... (ii)

Equating (i) and (ii),
$qE = W_0$

$$q \times 3600 = \frac{4}{3}\pi(5\times10^{-3})^3 \times 7800 \times 9.8$$
$$\Rightarrow q = 1.1 \times 10^{-5} C.$$

9. Sketch roughly the electric field lines for a thin, circular and uniformly positively charged disc of finite radius.

Ans:- The field lines are uniformly distributed over the surface of the disc. These lines diverge far away from the disc such that when extended backward (shown as dotted lines) they intersect at the centre of the disc.

If the disc is negatively charged the lines are to be shown directed inward toward the disc.

10. Give the tentative values of electric field near a charged plastic comb, at the surface of a uranium nucleus, electric discharge in air, lower layers of atmosphere near earth and on copper wiring of household installation.

Ans:- Charged plastic comb = $10^3\ N C^{-1}$
Surface of uranium nucleus = $10^{21}\ NC^{-1}$
Electric discharge in air = $10^6\ NC^{-1}$
Lower atmosphere = $10^2\ NC^{-1}$
Household copper wiring = $10^{-2}\ NC^{-1}$

Notes:- (1) Gaussian surface is an imaginary closed surface containing electric charges such that the electric field intensity at all points on its surface is same.

(2) Variation of Electric Field Intensity (E) with the distance (r) from the centre (O) of the solid sphere –

(a) Electric field intensity at the centre of the charged solid sphere is zero.

(b) As the distance (r) from the centre of solid sphere increases, electric field intensity also increases along OA and becomes maximum at the surface of the solid sphere.

(c) As the distance (r) further increases beyond the surface of the solid sphere, electric field intensity varies inversely with r^2 and hence decreases.

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ದಿಕ್ಸೂಚಿ ನಿಮಗಿಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಎ.ಐ ಯುಗದಲ್ಲಿ ಎಂತಹ ಶಿಕ್ಷಣ ಬೇಕು?

ತಂತ್ರಜ್ಞಾನ ಕ್ಷೇತ್ರದಲ್ಲಿ ಆಗಿರುವ ಬೆಳವಣಿಗೆಯು ಶಿಕ್ಷಣದ ವಿವಿಧ ವಿಭಾಗಗಳ ನಡುವೆ ಸಂಪರ್ಕ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿದೆ. ಹೊಸ ಬಗೆಯ ಹಲವು ಕೋರ್ಸ್‌ಗಳು ಭಿನ್ನ ಭಿನ್ನ ಶಿಕ್ಷಣ ವಿಭಾಗಗಳನ್ನು ಒಟ್ಟಿಗೆ ತರುತ್ತಿವೆ

• ನಂಜುಂಡ ಪ್ರತಾಪ್ ಪಾಲೆಕಂಡ

ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾವಣೆಗೊಳ್ಳುವ ಶಿಕ್ಷಣವು ಒಂದು ಸಮಾಜದ ಆತ್ಮವಿದ್ದಂತೆ– ಜಿ.ಕೆ. ಚೆಸ್ಟರ್ಟನ್ ಅವರ ಈ ಹೇಳಿಕೆ ನನಗೆ ತುಂಬಾ ಇಷ್ಟವಾದುದು. ಇದು ಹಲವು ವಿಧಗಳಲ್ಲಿ ವಾಸ್ತವವನ್ನು ಬಹಳ ಮಟ್ಟಿಗೆ ಪ್ರತಿಬಿಂಬಿಸುತ್ತದೆ. ನಾವೀಗ ಒಂದು ರೀತಿಯ ಪುನಃಶ್ಚೇತನ ಪ್ರಕ್ರಿಯೆ ನಡೆಯುತ್ತಿರುವ ಸಂದರ್ಭದಲ್ಲಿದ್ದೇವೆ. ನಾವು ಭಾರತೀಯರು ಮಾತ್ರವಲ್ಲ ಇಡೀ ಮನುಕುಲವೇ ಪರಿವರ್ತನೆಗೆ ಒಳಗಾಗುತ್ತಿದೆ.

ಜೀವನದ ಉದ್ದಕ್ಕೂ ಹಲವು ಬದಲಾವಣೆಗಳಿಗೆ ನಾವು ಮುಖಾಮುಖಿಯಾಗಿದ್ದೇವೆ. ಹಾಗೆಯೇ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಸಹ ವಿವಿಧ ಬದಲಾವಣೆಗಳು ಆಗಿವೆ. ಈಗಲೂ ಈ ವ್ಯವಸ್ಥೆ ರೂಪಾಂತರಕ್ಕೆ ಒಳಗಾಗುತ್ತಿದೆ. ಕೃತಕ ಬುದ್ಧಿಮತ್ತೆಯ ಯುಗದಲ್ಲಿ ಇಂದಿನ ಯುವ ಸಮುದಾಯಕ್ಕೆ ಯಾವ ರೀತಿಯ ಶಿಕ್ಷಣ ನೀಡಬೇಕು? ಶಿಕ್ಷಣದ ವಿಚಾರದಲ್ಲಿ ನಾವು ಮುಂದಿನ ಪೀಳಿಗೆಗೆ ಯಾವ ಬಗೆಯ ಆದರ್ಶವನ್ನು ಬಿಟ್ಟು ಹೋಗಬೇಕು? ಈ ಪ್ರಶ್ನೆಗಳಿಗೆ ಉತ್ತರಿಸಲು ನಾನು ಪ್ರಯತ್ನಿಸುವೆ.

ಈ ಜಗತ್ತಿಗೆ ಮತ್ತು ಅಲ್ಲಿನ ಔದ್ಯೋಗಿಕ ಸ್ಥಿತಿಗತಿಗೆ ಹೊಂದಿಕೊಳ್ಳುವಂತಹ ರೀತಿಯಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯು ವಿದ್ಯಾರ್ಥಿಗಳನ್ನು ತಯಾರು ಮಾಡಬೇಕಾಗಿದೆ. ತಂತ್ರಜ್ಞಾನ ಕ್ಷೇತ್ರದಲ್ಲಿ ಆಗಿರುವ ಬೆಳವಣಿಗೆಯು ವಿವಿಧ ಶಿಕ್ಷಣ ವಿಭಾಗಗಳ ನಡುವೆ ಸಂಪರ್ಕ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಎಲ್ಲ ವಿಭಾಗಗಳನ್ನೂ ಒಂದುಗೂಡಿಸುತ್ತಿದೆ. ಉದಾಹರಣೆಗೆ, ಈಗಿನ ವಾಹನ ಉದ್ಯಮವು ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ರೊಬೊಟಿಕ್ಸ್, ರಾಸಾಯನಿಕ, ವಸ್ತುವಿಜ್ಞಾನ, ಕಂಪ್ಯೂಟರ್ ಸೈನ್ಸ್ ಮತ್ತು ವಿನ್ಯಾಸ ಶಿಕ್ಷಣ ವಿಭಾಗಗಳಲ್ಲಿನ ಅಂಶಗಳನ್ನು ಒಳಗೊಂಡಿರುತ್ತದೆ. ಹಿಂದೆ ಈ ಎಲ್ಲ ವಿಭಾಗಗಳನ್ನು ಪ್ರತ್ಯೇಕವಾಗಿ ಪರಿಗಣಿಸಲಾಗುತ್ತಿತ್ತು. ಆದರೆ, ಈಗ ನಾವು ಆ ಕಾಲವನ್ನು ದಾಟಿ ಮುಂದೆ ಸಾಗಿದ್ದೇವೆ. ಈ ಎಲ್ಲ ವಿಭಾಗಗಳನ್ನೂ ಸಂಯೋಜಿಸುವ ದಾರಿಯನ್ನು ತಂತ್ರಜ್ಞಾನೋದ್ಯಮಿಗಳು ಕಂಡುಹಿಡಿದಿದ್ದಾರೆ. ಇಂದು ಉದ್ಯಮವು ಹಲವು ಶಿಕ್ಷಣ ವಿಭಾಗಗಳು ಮತ್ತು ಅಂತರಶಿಸ್ತೀಯ ಶಿಕ್ಷಣ ವಿಭಾಗಗಳ ನಡುವೆ ಉತ್ತಮ ಸಮನ್ವಯ ಇರುವುದನ್ನು ಬಯಸುತ್ತದೆ.

ಈ ಕಾರಣಕ್ಕಾಗಿಯೇ, ಈಗ ಶಿಕ್ಷಣ ಕ್ಷೇತ್ರದಲ್ಲಿ ಅಂತರಶಿಸ್ತೀಯ ಸ್ವರೂಪದ ಹಲವು ಕೋರ್ಸ್‌ಗಳನ್ನು ಕಾಣಬಹುದಾಗಿದೆ. ದಶಕದಷ್ಟು ಹಳೆಯದಾದ ಜೈವಿಕ ತಂತ್ರಜ್ಞಾನ (ಬಯೊಟೆಕ್ನಾಲಜಿ), ರೊಬೊಟಿಕ್ಸ್ ಹಾಗೂ ಈ ಮಾದರಿಯ ಇನ್ನು ಕೆಲವು ಕೋರ್ಸ್‌ಗಳು ಇತ್ತೀಚಿನ ವರ್ಷಗಳಲ್ಲಷ್ಟೇ ಬೇಡಿಕೆಯನ್ನು ಕಂಡವು. ಇಂದು ಬಯೊಮೆಡಿಕಲ್, ಬಯೊಎಂಜಿನಿಯರಿಂಗ್, ಡಿಸೈನ್ ಮತ್ತು ಮ್ಯಾನ್ಯುಫ್ಯಾಕ್ಚರಿಂಗ್, ನ್ಯೂಕ್ಲಿಯರ್ ಮೆಡಿಸಿನ್, ಮೆಡಿಕಲ್ ಇಮೇಜಿಂಗ್, ಎನರ್ಜಿ ಸಿಸ್ಟಮ್ಸ್, ನ್ಯಾನೊ-ಸೈನ್ಸ್ ಹಾಗೂ ಇಂತಹ ಹಲವು ಕೋರ್ಸ್‌ಗಳು ಭಿನ್ನ ಭಿನ್ನ ಶಿಕ್ಷಣ ವಿಭಾಗಗಳನ್ನು ಒಟ್ಟಿಗೆ ತರುತ್ತಿವೆ. ದಶಕದಿಂದೀಚೆಗೆ ಕೆಲವು ಕಾಲೇಜುಗಳಲ್ಲಿ ಮಾತ್ರ ಮೆಕ್ಯಾಟ್ರಾನಿಕ್ಸ್, ರೊಬೊಟಿಕ್ಸ್, ಐಒಟಿ (ಇಂಟರ್‌ನೆಟ್ ಆಫ್ ಥಿಂಗ್ಸ್), ಇಂಡಸ್ಟ್ರಿಯಲ್ ಎಂಜಿನಿಯರಿಂಗ್‌ನಂತಹ ಕೋರ್ಸ್‌ಗಳಿದ್ದವು. ಈಗ ಹೆಚ್ಚು ಕಾಲೇಜುಗಳು ಈ ಕೋರ್ಸ್‌ಗಳನ್ನು ಆರಂಭಿಸಿವೆ.

ಉತ್ತೇಜನಕಾರಿಯಾದ ಸಂಗತಿ ಎಂದರೆ, ಇವುಗಳನ್ನು ಈಗ ಡಿಪ್ಲೊಮಾ ಪ್ರಮಾಣಪತ್ರ ಕೋರ್ಸ್‌ಗಳ ರೂಪದಲ್ಲೂ ನೀಡಲಾಗುತ್ತಿದೆ. ಹಾಗಿದ್ದರೂ ಹೆಚ್ಚು ಮುಂದುವರಿದಿರುವ ಅಥವಾ ಭವಿಷ್ಯದ ಬಗ್ಗೆ ಯೋಚಿಸುವ ನಾಯಕತ್ವ ಹೊಂದಿರುವ ಶಿಕ್ಷಣ ಸಂಸ್ಥೆಗಳು ಮಾತ್ರ ಇಂತಹ ಅಂತರಶಿಸ್ತೀಯ ಕೋರ್ಸ್‌ಗಳ ಬಗ್ಗೆ ಗಮನ ಹರಿಸುತ್ತಿವೆ. ಇವುಗಳ ಜೊತೆಗೆ, ಸಿ-ಕ್ಯಾಂಪ್‌ನಂತಹ ಸರ್ಕಾರಿ ಸಂಸ್ಥೆಗಳು ಮತ್ತು ಫಸ್ಟ್ (ಎಫ್‌ಐಆರ್‌ಎಸ್‌ಟಿ) ಪ್ರತಿಷ್ಠಾನದಂತಹ ಸ್ವಯಂಸೇವಾ ಸಂಸ್ಥೆಗಳು ಕೂಡ ಶಿಕ್ಷಣ ಸಂಸ್ಥೆಗಳ ನಡುವೆ ಅಂತರಶಿಸ್ತೀಯ ಸಹಭಾಗಿತ್ವವನ್ನು ರೂಪಿಸಲು ಪ್ರಯತ್ನಿಸುತ್ತಿವೆ.

ಎಂತಹುದೇ ಸನ್ನಿವೇಶದಲ್ಲಿ ಪುಟಿದೇಳುವ ಸಾಮರ್ಥ್ಯ ಮತ್ತು ಸಮಸ್ಯೆ ಬಗೆಹರಿಸುವುದನ್ನು ಕಲಿಯುವ ಮನಃಸ್ಥಿತಿಯನ್ನು ಹೊಂದಿರುವ ನವಪೀಳಿಗೆಯನ್ನು ನಿರ್ಮಿಸುವ ದಿಸೆಯಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ ಎಂಬ ಆಶಾವಾದ ನನ್ನದು.

ಲೇಖಕ: 'ನಿಜವೆಂಚರ್ ಇಂಪ್ಯಾಕ್ಟ್ಸ್'ಸ್ಥಾಪಕ 'ಟೆಕ್ನೊವೊಸ್ ಮಷೀನರಿ'ಸಂಸ್ಥೆಯ ನಿರ್ದೇಶಕ

ಮೋಹನ್ ಟಿ. ಅಡ್ವಾಣಿ ಶತಮಾನೋತ್ಸವ ವಿದ್ಯಾರ್ಥಿವೇತನ

ವಿದ್ಯಾರ್ಥಿ ವೇತನ ಕೈಪಿಡಿ

ಬ್ಲೂಸ್ಟಾರ್ ಫೌಂಡೇಷನ್‌ನ ಪ್ರಮುಖ ಉಪಕ್ರಮ

- **ಅರ್ಹತೆ:** ಭಾರತದಾದ್ಯಂತ ವಾಸ್ತುಶಿಲ್ಪ ಮತ್ತು ಎಂಜಿನಿಯರಿಂಗ್ ಕೋರ್ಸ್, ಡಿಪ್ಲೊಮಾ ಕೋರ್ಸ್‌ಗೆ ದಾಖಲಾದ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ.

ಸಿವಿಲ್ ಎಂಜಿನಿಯರಿಂಗ್ ಹೊರತುಪಡಿಸಿ, ಎಲೆಕ್ಟ್ರಾನಿಕ್ಸ್, ಮೆಕ್ಯಾನಿಕಲ್, ಐಟಿ, ಸಿಎಸ್... ಎಂಜಿನಿಯರಿಂಗ್ : ಮೊದಲನೇ ವರ್ಷದ ವಿದ್ಯಾರ್ಥಿಗಳಾಗಿದ್ದರೆ 10 ಮತ್ತು 12ನೇ ತರಗತಿಯಲ್ಲಿ ಕನಿಷ್ಠ ಶೇ 80ರಷ್ಟು ಅಂಕ, ದ್ವಿತೀಯ ವರ್ಷದ ವಿದ್ಯಾರ್ಥಿಗಳಾದರೆ 12ನೇ ತರಗತಿಯಲ್ಲಿ ಕನಿಷ್ಠ ಶೇ 80 ಮತ್ತು ಪದವಿಯ ಮೊದಲ ವರ್ಷ ಶೇ 75ರಷ್ಟು ಅಂಕ ಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ₹ 6 ಲಕ್ಷಕ್ಕಿಂತ ಕಡಿಮೆ ಇರಬೇಕು.

- **ಆರ್ಥಿಕ ಸಹಾಯ:** ₹ 1 ಲಕ್ಷ ಅಥವಾ ವಾರ್ಷಿಕ ಶುಲ್ಕದ ಶೇ 75 (ಯಾವುದು ಕಡಿಮೆಯೋ ಅದು) ಡಿಪ್ಲೊಮಾ ವಿದ್ಯಾರ್ಥಿಗಳಿಗೆ
- **ಆರ್ಕಿಟೆಕ್ಚರ್ ಅಥವಾ ಎಂಜಿನಿಯರಿಂಗ್ ಡಿಪ್ಲೊಮಾ:** ಈ ಕೋರ್ಸ್‌ಗಳಿಗೆ ದಾಖಲಾದ ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳು ಅರ್ಹರು. ಸಿವಿಲ್ ಎಂಜಿನಿಯರಿಂಗ್ ಹೊರತುಪಡಿಸಿ ಮೆಕ್ಯಾನಿಕಲ್ ಎಂಜಿನಿಯರಿಂಗ್, ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಮತ್ತು ಪ್ರೊಡಕ್ಷನ್ ಎಂಜಿನಿಯರಿಂಗ್: 10 ಅಥವಾ 12ನೇ ತರಗತಿಯಲ್ಲಿ ಶೇ 70ರಷ್ಟು ಅಂಕ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳಾದರೆ ಮೊದಲ ವರ್ಷ ಶೇ 75ರಷ್ಟು ಅಂಕ ಗಳಿಸಿರಬೇಕು.
- **ಆರ್ಥಿಕ ಸಹಾಯ:** ₹ 40,000 ಅಥವಾ ವಾರ್ಷಿಕ ಶುಲ್ಕದ ಶೇ 90ರಷ್ಟು (ಯಾವುದು ಕಡಿಮೆಯೋ ಅದು) ನೀಡಲಾಗುತ್ತದೆ.
- **ಅರ್ಜಿ ಸಲ್ಲಿಸಲು ಕೊನೇ ದಿನ:** 15.07.2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಮೂಲಕ
- **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/BSFS4

CMR UNIVERSITY
Private University Estd in Karnataka State by Act No. 45 of 2013
BENGALURU | RECOGNISED BY UGC

APPLY NOW!

CREATE THE FUTURE
ADMISSIONS OPEN FOR AY 2025-26

RANKED
• 69 among top engineering institutes in India
• 44 among top private institutes for placement in India
Source: Times All India Engineering Institutes Ranking Survey 2025

SCHOOL OF ARCHITECTURE
B.Arch.

SCHOOL OF ENGINEERING & TECHNOLOGY
B.Tech.
• CSE • CSE (AI & ML) • CSE (Data Science)
• Computer Engg.* (With specialisation in AI & ML/Internet of Things)
• CST* (With specialisation in AI & ML/Internet of Things) • IT • ECE
M.Tech. (For Regular and Professionals)
• CSE • AI
Ph.D. CSE (AI & ML, Networking & Cloud Computing, Analytics, Cyber Security, Data Science & Internet of Things) • ECE • Mechanical Engineering

SCHOOL OF DESIGN
B.Des.
• Communication Design • Product Design
• Fashion Design • Interior Design
B.Sc.
• Sound Engineering
• Visual Effects & Animation

SCHOOL OF LIBERAL STUDIES
B.A. (Major + Minor)
B.Sc. | Psychology
M.Sc. | Psychology
• Clinical • Counselling • Human Resource Development & Management
Ph.D.
• Psychology

SCHOOL OF ECONOMICS & COMMERCE
B.Com.
• International Accounting & Finance (ACCA, UK)
• Professional - CA Integrated • Data Science
• Certified Management Accountant (US CMA)
Ph.D.
• Economics • Commerce

SCHOOL OF LEGAL STUDIES
B.A., LL.B. (Hons)
B.B.A., LL.B. (Hons)
LL.B.
LL.M. | Constitutional Law • Commercial Law • Criminal Law

SCHOOL OF SCIENCE & COMPUTER STUDIES
BCA
• Cloud Computing • Data Science
• Game Development • AI & ML NEW
B.Sc. • IT
M.Sc. • IT in Data Science
MCA
Ph.D. | Computer Application

SCHOOL OF MANAGEMENT
BBA
• Digital Marketing • Business Analytics
• Fintech NEW • Data Science NEW
• Logistics & Supply Chain Management NEW
• Tourism & Hospitality Management NEW
MBA with Dual Specialisation in
• Marketing • HR • Finance• Business Analytics
• Digital Marketing • Supply Chain Management
MBA with Specialisation in Business Analytics & Business Intelligence
MBA | Technology Management NEW
Executive MBA | Product Leadership
Ph.D. | Management

Up to 100% Scholarship
available for eligible candidates*
*T&C apply
LIMITED SEATS AT CONCESSIONAL FEE
• Semester-wise payment option
• Interest-free education loan (EMI option*)
• Hostel facility for boys & girls
*T&C apply

PROVIDING OPPORTUNITIES TO GET SCHOLARSHIPS WORTH ₹12 CRORES*
*T&C apply

We honour JEE, COMEDK, CUET, KCET and other state / national-level tests.
Direct admission for CUET students

93429 00666
admissions@cmr.edu.in
www.cmr.edu.in

Lakeside Campus: Off Hennur-Bagalur Main Road, Chagalahatti, Bengaluru - 562 149
City Campus: #2, 3rd Cross, 6th A Main, HRBR Layout, Bengaluru - 560 043
OMBR Campus: No.5, Bhuvanagiri, OMBR Layout, Bengaluru - 560 043

ಚಿಟಿಕೆ ಸುದ್ದಿ

ವಿದ್ಯುತ್ ತಂತಿ ತುಳಿದು ಆನೆಗಳ ಸಾವು

ಸಕಲೇಶಪುರ ತಾಲ್ಲೂಕಿನ ಗುಡ್ಡಬೆಟ್ಟ ಗ್ರಾಮದ ಬಳಿ ಮೃತಪಟ್ಟಿರುವ ಆನೆ ಹಾಗೂ ಮರಿಯಾನೆ

ಸಕಲೇಶಪುರ (ಹಾಸನ): ತಾಲ್ಲೂಕಿನ ಗುಡ್ಡಬೆಟ್ಟ ಗ್ರಾಮದ ಬಳಿಯ ಎಬಿಸಿ ಕಾಫಿ ಎಸ್ಟೇಟ್‌ನಲ್ಲಿ ಶನಿವಾರ ರಾತ್ರಿ ಆಹಾರ ಅರಸುತ್ತಿದ್ದ ಕಾಡಾನೆ ಹಾಗೂ ಮರಿಯಾನೆ ವಿದ್ಯುತ್ ತಂತಿ ತುಳಿದು ಮೃತಪಟ್ಟಿವೆ. ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಗ್ರಾಮಾಂತರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಕೋರ್ಟ್ ಆದೇಶ: ದರ್ಗಾ ತೆರವು

ಗುಳೇದಗುಡ್ಡ (ಬಾಗಲಕೋಟೆ ಜಿಲ್ಲೆ): ಅನಧಿಕೃತವಾಗಿ ನಿರ್ಮಿಸಿರುವ ದರ್ಗಾ ತೆರವುಗೊಳಿಸುವಂತೆ ಬೆಳಗಾವಿಯ ವಕ್ಫ್ ನ್ಯಾಯಮಂಡಳಿಯು ಜನವರಿಯಲ್ಲಿ ನೀಡಿದ್ದ ತೀರ್ಪು ಆಧರಿಸಿ, ತಾಲ್ಲೂಕಿನ ಖಾಜಿ ಬೂದಿಹಾಳ ಗ್ರಾಮದಲ್ಲಿ ಎಂಟು ವರ್ಷಗಳ ಹಿಂದೆ ನಿರ್ಮಿಸಿದ್ದ ದರ್ಗಾವನ್ನು ಭಾನುವಾರ ಪೊಲೀಸ್ ಬಂದೋಬಸ್ತ್‌ನಲ್ಲಿ ತೆರವುಗೊಳಿಸಲಾಯಿತು.

‘ಅನಧಿಕೃತವಾಗಿ ದರ್ಗಾ ನಿರ್ಮಿಸಿ ಲಾಭದಾಯಕ ಚಟುವಟಿಕೆ ನಡೆಸಲಾಗುತ್ತಿದೆ’ ಎಂದು ಹುಸೇನ್‌ಸಾಬ ಸಯ್ಯದ್‌ಭಾಷಾ ಖಾಜಿ ಅವರು 2019ರಲ್ಲಿ ನ್ಯಾಯಮಂಡಳಿಗೆ ದೂರು ಸಲ್ಲಿಸಿದ್ದರು. ಒಟ್ಟು 1.17 ಎಕರೆ ವಕ್ಫ್ ಜಮೀನಿನಲ್ಲಿ 20 ವರ್ಷಗಳ ಹಿಂದೆ ಮುಸ್ಲಿಂ ಧರ್ಮದ ಹಿರಿಯರೊಬ್ಬರ ಸಮಾಧಿ ನಿರ್ಮಿಸಲಾಗಿತ್ತು.

ಲೋಕಾಯುಕ್ತದ ಹೆಸರಿನಲ್ಲಿ ವಂಚನೆ ವಿಚಾರಣೆ ತೀವ್ರ

ಬೆಂಗಳೂರು: ಲೋಕಾಯುಕ್ತ ಅಧಿಕಾರಿಗಳ ಹೆಸರಿನಲ್ಲಿ ಹಣ ವಸೂಲಿ ಮಾಡಿದ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರು ತನಿಖೆ ತೀವ್ರಗೊಳಿಸಿದ್ದು, ಲಂಚ ನೀಡಿದ್ದ ಅಧಿಕಾರಿಗಳ ವಿವರವನ್ನು ಕಲೆ ಹಾಕಿದ್ದಾರೆ.

‘ನಿಮ್ಮ ವಿರುದ್ಧ ಲೋಕಾಯುಕ್ತದಲ್ಲಿ ಪ್ರಕರಣ ದಾಖಲಾಗಿದ್ದು, ಹಣ ನೀಡಿದರೆ ಮುಚ್ಚಿಹಾಕುತ್ತೇವೆ ಎಂದು ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಆಮಿಷ ಒಡ್ಡಲಾಗುತ್ತಿತ್ತು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ನಿವೃತ್ತ ಹೆಡ್‌ಕಾನ್‌ಸ್ಟೆಬಲ್ ನಿಂಗಪ್ಪ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ’ ಎಂದು ಲೋಕಾಯುಕ್ತ ಪೊಲೀಸ್ ಮೂಲಗಳು ತಿಳಿಸಿವೆ.

‘ಪಕ್ಷದ ಬಲವರ್ಧನೆಗಾಗಿ ಪ್ರವಾಸ’

‘ಜನರೊಂದಿಗೆ ಜನತಾದಳ’ ಕಾರ್ಯಕ್ರಮಕ್ಕೆ ಚಾಲನೆ • ನಿಖಿಲ್ ಪ್ರವಾಸ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಕ್ಷವನ್ನು ತಳಮಟ್ಟದಿಂದ ಬಲಪಡಿಸಲು 58 ದಿನಗಳ ರಾಜ್ಯ ಪ್ರವಾಸ ಮತ್ತು ಸದಸ್ಯತ್ವ ನೋಂದಣಿಗಾಗಿ ‘ಜನರೊಂದಿಗೆ ಜನತಾದಳ’ ಕಾರ್ಯಕ್ರಮ ರೂಪಿಸಲಾಗಿದೆ’ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಪಕ್ಷದ ಕಚೇರಿಯಲ್ಲಿ ಭಾನುವಾರ ಆಯೋಜಿಸಿದ್ದ ‘ಜನರೊಂದಿಗೆ ಜನತಾದಳ’ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಸೋಮವಾರ ತುಮಕೂರಿನಿಂದ ಪ್ರವಾಸ ಆರಂಭವಾಗಲಿದೆ. 58ನೇ ದಿನ ಮೈಸೂರಿನಲ್ಲಿ ಕೊನೆಗೊಳ್ಳಲಿದೆ’ ಎಂದರು.

‘ಜೆಡಿಎಸ್ ಚುನಾವಣೆಯಲ್ಲಿ ಶೇ 22ರಷ್ಟು ಮತ ಪಡೆಯುತ್ತಿತ್ತು. ಈಗ ಆ ಪ್ರಮಾಣ ಕಡಿಮೆಯಾಗುತ್ತಲೇ ಬಂದಿದೆ. ಅದು ಏಕೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಮತ್ತು ಪುನಃ ಅಂತಹ ಶಕ್ತಿ ಗಳಿಸಿಕೊಳ್ಳಲು ಈ ಪ್ರವಾಸ ಕಾರ್ಯಕ್ರಮ ನಡೆಸಲಾಗುತ್ತಿದೆ’ ಎಂದರು.

‘ಪ್ರವಾಸದ ಅವಧಿಯಲ್ಲಿ ರಾಜ್ಯದ ಪ್ರತಿ ಜಿಲ್ಲೆ ಮತ್ತು ಪ್ರತಿ ತಾಲ್ಲೂಕಿನಲ್ಲೂ ಪಕ್ಷದ ನಾಯಕರು, ಕಾರ್ಯಕರ್ತರು ಮತ್ತು ಸಾಮಾನ್ಯ ಜನರನ್ನು ಭೇಟಿ ಮಾಡಲಿದ್ದೇನೆ. ಪಕ್ಷದ ಬಗ್ಗೆ ಜನರು ಹೊಂದಿರುವ ಭಾವನೆಯನ್ನು ಅರ್ಥಮಾಡಿಕೊಳ್ಳಲಿದ್ದೇನೆ. ಪಕ್ಷವನ್ನು ಮತ್ತೆ ಗಟ್ಟಿಗೊಳಿಸಲು ಏನು ಮಾಡಬೇಕೆಂಬುದನ್ನೂ ಜನರಿಂದ ಕೇಳಲಿದ್ದೇನೆ’ ಎಂದರು.

‘ಮಿಸ್ಡ್ ಕಾಲ್ ಅಭಿಯಾನದ ಮೂಲಕ ಕನಿಷ್ಠ 50 ಲಕ್ಷ ಜನರನ್ನು ಪಕ್ಷಕ್ಕೆ ನೋಂದಣಿ ಮಾಡಿಸಬೇಕು ಎಂಬ ಗುರಿ ಹಾಕಿಕೊಳ್ಳಲಾಗಿದೆ. ಪಕ್ಷದ ಕಾರ್ಯಕರ್ತರು ಕನಿಷ್ಠ 5 ಜನರನ್ನು ನೋಂದಣಿ ಮಾಡಿಸಿದರೂ ಈ ಗುರಿ ತಲುಪಬಹುದು’ ಎಂದರು. ‘ಕಾರ್ಯಕರ್ತರು, ಮುಖಂಡರು ಇದನ್ನು ಗಮನದಲ್ಲಿ ಇರಿಸಿಕೊಂಡು ಕೆಲಸ ಮಾಡಬೇಕು’ ಎಂದರು.

‘ರಾಜ್ಯ ಸರ್ಕಾರದ ಸಹಕಾರ ಅಗತ್ಯ’: ‘ಕುಮಾರಸ್ವಾಮಿ ಕೇಂದ್ರದಲ್ಲಿ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವರಾಗಿದ್ದಾರೆ. ರಾಜ್ಯದಲ್ಲಿ ಸ್ಥಗಿತವಾಗಿರುವ ಕೆಲ ಬೃಹತ್ ಕಾರ್ಖಾನೆಗಳನ್ನು ಪುನಶ್ಚೇತನಗೊಳಿಸಲು ರಾಜ್ಯ ಸರ್ಕಾರದ ಸಹಕಾರವೂ ಅಗತ್ಯವಿದೆ. ಇದನ್ನು ಎಲ್ಲರೂ ಮನಗಾಣಬೇಕು’ ಎಂದು ಎಚ್‌.ಡಿ.ದೇವೇಗೌಡ ಹೇಳಿದರು.

ಮನವಿ ನೀಡಲು ಮುಗಿಬಿದ್ದ ಜನರು: ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಲು ಮುಂದಾಗುತ್ತಿದ್ದಂತೆಯೇ ಪಕ್ಷದ ಕೆಲ ಕಾರ್ಯಕರ್ತರು ವೇದಿಕೆಯತ್ತ ನುಗ್ಗಿದರು. ಮನವಿ ಸ್ವೀಕರಿಸುವಂತೆ ಒತ್ತಾಯಿಸಿದರು.

‘ಕಾರ್ಯಕ್ರಮ ಮುಗಿದ ನಂತರ ಮನವಿಗಳನ್ನು ಸ್ವೀಕರಿಸುತ್ತೇನೆ’ ಎಂದು ಕುಮಾರಸ್ವಾಮಿ ಅವರು ಹೇಳಿದರೂ ಕಾರ್ಯಕರ್ತರು ಪಟ್ಟು ಬಿಡಲಿಲ್ಲ. ‘ನೀವು ಸಿಗದೇ ಹೋಗುತ್ತೀರಿ. ಈಗಲೇ ಮನವಿ ಸ್ವೀಕರಿಸಿ’ ಎಂದು ಪಟ್ಟು ಹಿಡಿದರು.

ಆಗ ಕುಮಾರಸ್ವಾಮಿ, ‘ನಿಮ್ಮ ಸಮಸ್ಯೆ ನನಗೆ ಗೊತ್ತಿದೆ. ನಿಮ್ಮನ್ನು ಭೇಟಿ ಮಾಡಿ ಚರ್ಚಿಸಿಯೇ ನಾನು ಇಲ್ಲಿಂದ ಹೋಗುತ್ತೇನೆ. ದಯವಿಟ್ಟು ಕಾಯಿರಿ’ ಎಂದು ಹಲವು ಬಾರಿ ಮನವಿ ಮಾಡಿದ ನಂತರ ಕಾರ್ಯಕರ್ತರು ಹಿಂದೆ ಸರಿದು ಕೂತರು.

ಮುಖ್ಯಾಂಶಗಳು

- 58 ದಿನ ನಡೆಯುವ ಪ್ರವಾಸ, ಸದಸ್ಯರ ನೋಂದಣಿ ಕಾರ್ಯ
- ಪ್ರತಿ ಜಿಲ್ಲೆ, ತಾಲ್ಲೂಕಿನಲ್ಲಿ ಮುಖಂಡರು, ಕಾರ್ಯಕರ್ತರ ಭೇಟಿ
- ರಾಜ್ಯದಲ್ಲಿ 50 ಲಕ್ಷ ಕಾರ್ಯಕರ್ತರ ನೋಂದಣಿ ಗುರಿ

ನಾವೀಗ ಎನ್‌ಡಿಎ ಮೈತ್ರಿಕೂಟದಲ್ಲಿದ್ದೇವೆ. ಪಕ್ಷವನ್ನು ಬಲಪಡಿಸಿದರಷ್ಟೇ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಹೆಚ್ಚಿನ ಸ್ಥಾನಗಳಿಗೆ ಬೇಡಿಕೆ ಸಲ್ಲಿಸಬಹುದು

ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ಅಧ್ಯಕ್ಷ



ಜೆಡಿಎಸ್ ಕೇಂದ್ರ ಕಚೇರಿಯಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಪಕ್ಷದ ವರಿಷ್ಠ ಎಚ್‌.ಡಿ.ದೇವೇಗೌಡ ಅವರು ‘ಜನರೊಂದಿಗೆ ಜನತಾದಳ’ ರಾಜ್ಯ ಪ್ರವಾಸ ಮತ್ತು ಮಿಸ್ಡ್ ಕಾಲ್ ಅಭಿಯಾನದ ಪೋಸ್ಟರ್ ಬಿಡುಗಡೆ ಮಾಡಿದರು. ನಿಖಿಲ್ ಕುಮಾರಸ್ವಾಮಿ, ಎಚ್‌.ಡಿ.ಕುಮಾರಸ್ವಾಮಿ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಪ್ರಾದೇಶಿಕ ಪಕ್ಷಗಳೇ ಪ್ರಜಾಪ್ರಭುತ್ವದ ಜೀವಾಳ: ಎಚ್‌.ಡಿ. ದೇವೇಗೌಡ

‘ಹಲವು ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳೇ ಈಗಲೂ ಆಡಳಿತ ಚುಕ್ಕಾಣಿ ಹಿಡಿದಿವೆ. ಹೀಗಾಗಿ ದೇಶದ ರಾಜಕಾರಣದಲ್ಲಿ ಪ್ರಾದೇಶಿಕ ಪಕ್ಷಗಳು ಈಗಲೂ ಪ್ರಸ್ತುತ. ಅಂತಹ ಸ್ಥಾನವನ್ನು ಜೆಡಿಎಸ್ ಈಗಲೂ ಕಾಯ್ದುಕೊಂಡಿದೆ’ ಎಂದು ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಹೇಳಿದರು.

‘ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸು ಮತ್ತು ಶಕ್ತಿಗೆ ಸರಿಸಮನಾಗಿ ನಿಲ್ಲಬಲ್ಲ ಮತ್ತೊಬ್ಬ ವ್ಯಕ್ತಿ ಈ ದೇಶದ ಯಾವುದೇ ಪಕ್ಷದಲ್ಲಿ ಇಲ್ಲ. ಅದು ಸತ್ಯ ಮತ್ತು ಮೈತ್ರಿ ಅನಿವಾರ್ಯ. ಅಂತಹ ಪ್ರಧಾನಿ ಮೋದಿ ಅವರು ಗುರುತಿಸಿ, ನಾವು ಕೇಳದೇ ಇದ್ದರೂ ಕೇಂದ್ರದಲ್ಲಿ ಸಚಿವ ಸ್ಥಾನ ಕೊಡುವಂತಹ ಶಕ್ತಿಯನ್ನು ಜೆಡಿಎಸ್ ಹೊಂದಿದೆ. ಹೀಗಾಗಿ ಪಕ್ಷವನ್ನು ಇನ್ನಷ್ಟು ಬಲಪಡಿಸಬೇಕು’ ಎಂದು ಅವರು ಹೇಳಿದರು.

‘ಮೂರು ಬಾರಿ ಸೋತಿದ್ದರೂ, ಎದೆಗುಂದದೆ ನಿಖಿಲ್ ಕುಮಾರಸ್ವಾಮಿ ಅವರು ಪಕ್ಷ ಸಂಘಟನೆಗೆ ಮುಂದಾಗಿದ್ದಾರೆ. ಸೋಲೇ ಗೆಲುವಿಗೆ ಸೋಪಾನ. ಅವರಿಗೆ ಎಲ್ಲರೂ ಸಹಕಾರ ನೀಡಿ, ಪಕ್ಷವನ್ನು ಬಲಪಡಿಸಿ’ ಎಂದರು.

ಜನರು ರೋಸಿದ್ದಾರೆ: ಸಚಿವ ಎಚ್‌ಡಿಕೆ

‘ವಿಪರೀತ ತೆರಿಗೆ, ಬೆಲೆ ಏರಿಕೆ, ಅಭಿವೃದ್ಧಿಗೆ ಕೊಕ್, ಸಾಲು ಸಾಲು ದುರಂತಗಳ ಕಾಂಗ್ರೆಸ್ ಆಡಳಿತದಿಂದ ಜನರು ರೋಸಿಹೋಗಿದ್ದಾರೆ. ಈ ಸರ್ಕಾರದ ಎಲ್ಲ ನಾಯಕರು ವೀರಾವೇಶದ ಭಾಷಣವನ್ನಷ್ಟೇ ಮಾಡುತ್ತಾರೆ’ ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ದೂರಿದರು.

‘ಸಿದ್ದರಾಮಯ್ಯ ಅವರು ಕೆಪಿಎಸ್‌ಸಿ ಕೊಳೆಯನ್ನೆಲ್ಲಾ ತೊಳೆಯುತ್ತೇನೆ ಎಂದಿದ್ದರು. ಕೆಪಿಎಸ್‌ಸಿಯಲ್ಲಿ ಈಗ ಬರಿ ಕೊಳೆಯೇ ತುಂಬಿದೆ. ಡಿ.ಕೆ.ಶಿವಕುಮಾರ್ ಅವರು ಬೆಂಗಳೂರನ್ನು ಸಿಂಗಪುರ ಮಾಡುತ್ತೇನೆ ಎಂದಿದ್ದರು. ಒಂದು ಮಳೆಗೇ ಬೆಂಗಳೂರು ಏನಾಯಿತು ಎಂಬುದನ್ನು ಜನ ನೋಡಿದ್ದಾರೆ. ಶಿವಕುಮಾರ, ನೀನು ಹೇಳಿದ್ದನ್ನು ಮಾಡಪ್ಪಾ. ಮಲ್ಲಿಕಾರ್ಜುನ ಖರ್ಗೆ ಅವರು ಕಲ್ಯಾಣ ಕರ್ನಾಟಕದ ಬಗ್ಗೆಯೇ ಮಾತನಾಡುತ್ತಾರೆ. ಇಷ್ಟು ವರ್ಷ ಕಲ್ಯಾಣ ಕರ್ನಾಟಕಕ್ಕೆ ಬಂದ ಅನುದಾನ ಏನಾಯಿತು, ಆ ಪ್ರದೇಶ ಏಕೆ ಅಭಿವೃದ್ಧಿ ಆಗಿಲ್ಲ’ ಎಂದು ಪ್ರಶ್ನಿಸಿದರು.

‘ನನ್ನ ಆರೋಗ್ಯ ಸರಿಯಿಲ್ಲ, ಜೆಡಿಎಸ್ ಹೆಚ್ಚು ದಿನ ಉಳಿಯುವುದಿಲ್ಲ ಎಂದೆಲ್ಲಾ ಸುಳ್ಳುಗಳನ್ನು ಹಬ್ಬಿಸಿದ್ದಾರೆ. ನಾನು ಆರೋಗ್ಯವಾಗಿಯೇ ಇದ್ದೇನೆ. ಇನ್ನೂ 15 ರಿಂದ 20 ವರ್ಷ ಇರುತ್ತೇನೆ. ನಾವು ಯಾರು ಇಲ್ಲದಿದ್ದರೂ ಜೆಡಿಎಸ್ ಪಕ್ಷ ಇರಲಿದೆ’ ಎಂದರು.

ಸುದ್ದಿ 2 ನಿಮಿಷ

ವೈದ್ಯರಿಗೆ ಮೊಬೈಲ್ ಆಧರಿತ ಹಾಜರಾತಿ ವ್ಯವಸ್ಥೆ: ದಿನೇಶ್

ಬೆಂಗಳೂರು: ‘ರಾಜ್ಯದ ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಸೇರಿದಂತೆ ಸಿಬ್ಬಂದಿಗೆ ಮೊಬೈಲ್ ಆಧರಿತ ಹಾಜರಾತಿ ವ್ಯವಸ್ಥೆಯನ್ನು ಜುಲೈ 1ರಿಂದ ಜಾರಿ ಮಾಡಲಾಗುತ್ತಿದೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಈ ಬಗ್ಗೆ ಇಲಾಖೆ ಇದೇ 12ರಂದು ಆದೇಶ ಹೊರಡಿಸಿದೆ. 1,200 ಆರೋಗ್ಯ ಸಂಸ್ಥೆಗಳೂ ಸೇರಿ ಇಲಾಖೆ ವ್ಯಾಪ್ತಿಯ ಕಚೇರಿಗಳಲ್ಲಿ ಈ ವ್ಯವಸ್ಥೆಯನ್ನು ಜಾರಿ ಮಾಡಲಾಗುತ್ತಿದೆ.

‘ಮೊಬೈಲ್ ಆಧರಿತ ಹಾಜರಾತಿ ಕಡ್ಡಾಯದಿಂದ ವೈದ್ಯರ ಗೈರಿನ ಬಗ್ಗೆ ಸಾರ್ವಜನಿಕರ ದೂರುಗಳು ಕಡಿಮೆಯಾಗುವ ನಿರೀಕ್ಷೆಯಿದೆ’ ಎಂದು ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

‘ಸದ್ಯ ಬಯೋಮೆಟ್ರಿಕ್ ಹಾಜರಾತಿ ನಿರ್ವಹಣಾ ವ್ಯವಸ್ಥೆಯಲ್ಲಿ ಆಗಾಗ ಸಮಸ್ಯೆ ಕಂಡುಬರುತ್ತಿದೆ. ಹೊಸ ವ್ಯವಸ್ಥೆಯಡಿ ಯಾವ ಪ್ರದೇಶದಿಂದ ಹಾಜರಾತಿ ಹಾಕಲಾಗುತ್ತಿದೆ ಎಂದೂ ಪತ್ತೆ ಮಾಡಲು ಸಾಧ್ಯ’ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಒಂದೇ ವೇದಿಕೆಯಲ್ಲಿ ಪಂಚಮಸಾಲಿ ಸ್ವಾಮೀಜಿಗಳು

ಕಾರಟಗಿ (ಕೊಪ್ಪಳ ಜಿಲ್ಲೆ): ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಸೇರಿದಂತೆ ವಿವಿಧ ವಿಷಯಗಳಲ್ಲಿ ಮುನಿಸಿಕೊಂಡಿದ್ದ ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹಾಗೂ ಹರಿಹರದ ವಚನಾನಂದ ಸ್ವಾಮೀಜಿ ಮುನಿಸು ಮರೆತು ಭಾನುವಾರ ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡರು.

ಕಾರಟಗಿ ಪಟ್ಟಣದಲ್ಲಿ ತಾಲ್ಲೂಕು ಪಂಚಮಸಾಲಿ ಕ್ಷೇಮಾಭಿವೃದ್ಧಿ ಸಂಘ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸ್ವಾಮೀಜಿಗಳು ಮುಖಾಮುಖಿಯಾದಾಗ ಪಂಚಮಸಾಲಿ ಸಮುದಾಯದ ಜನ ಜಯಘೋಷ ಹಾಕಿದರು. ಜಯ ಮೃತ್ಯುಂಜಯ ಸ್ವಾಮೀಜಿ ಮಾತನಾಡಿ, ‘ಮೀಸಲಾತಿ ಹೋರಾಟ ನಿರಂತರ. ಬೇಡಿಕೆ ಈಡೇರಿಕೆಗಾಗಿ ಮುಖ್ಯಮಂತ್ರಿ ಬಳಿ ಮತ್ತೆ ಹೋಗಲ್ಲ. ಜನರ ಬಳಿ ಹೋಗಿ ಸಂಘಟಿಸಲಾಗುವುದು. ಜೂ. 23, 24ರಂದು ಧಾರವಾಡ ಜಿಲ್ಲೆಯಲ್ಲಿ ಸಂಕಲ್ಪ ಸಭೆ ನಡೆಸಲಾಗುತ್ತಿದೆ’ ಎಂದರು.

ವಚನಾನಂದ ಸ್ವಾಮೀಜಿ ಮಾತನಾಡಿ ‘ಸದೃಢ ಸಮಾಜ ಕಟ್ಟಲು ಇಬ್ಬರೂ ಒಂದಾಗಿದ್ದೇವೆ. ನಮ್ಮ ಬೇಡಿಕೆಯನ್ನು ರಾಜ್ಯ ಸರ್ಕಾರ ಈಡೇರಿಸಬೇಕು’ ಎಂದು ಹೇಳಿದರು.

‘ವಿಶೇಷ ಅಧಿವೇಶನ ಕರೆಯಿರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರ್‌ಸಿಬಿ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತದಲ್ಲಿ 11 ಜನ ಮೃತಪಟ್ಟ ಅವಘಡ ಕುರಿತು ಚರ್ಚಿಸಲು ವಿಧಾನ ಮಂಡಲದ ಮೂರು ದಿನಗಳ ವಿಶೇಷ ಅಧಿವೇಶನ ಕರೆಯಿರಿ’ ಎಂದು ವಿಧಾನ ಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ಭಾನುವಾರ ಪತ್ರ ಬರೆದಿರುವ ಅವರು, ‘ಈ ದುರ್ಘಟನೆಯು ಸಾರ್ವಜನಿಕರ ಸುರಕ್ಷತೆ, ಗುಂಪು ನಿಯಂತ್ರಣ, ಕ್ರೀಡೆ ಮತ್ತು ಇತರೆ ಕಾರ್ಯಕ್ರಮಗಳ ಆಯೋಜನೆಗಳ ಕುರಿತು ಗಂಭೀರವಾದ ಪ್ರಶ್ನೆಗಳನ್ನು ಎತ್ತಿದೆ. ಆಡಳಿತಾಂಗದ ಕಡೆಯಿಂದ ಆಗಿರುವ ಲೋಪಗಳು ಮತ್ತು ಅವಘಡದ ನಂತರ ಸರ್ಕಾರ ತೆಗೆದುಕೊಂಡ ಕ್ರಮಗಳು ಜನರಲ್ಲಿ ಅನೇಕ ಸಂಶಯಗಳನ್ನು ಹುಟ್ಟುಹಾಕಿವೆ’ ಎಂದಿದ್ದಾರೆ.

‘ಕಾಲ್ತುಳಿತಕ್ಕೆ ಕಾರಣರಾದ ಬಲಾಢ್ಯರನ್ನು ರಕ್ಷಿಸಲಾಗುತ್ತಿದೆ. ಸತ್ಯವನ್ನು ಮರೆಮಾಚಲು ಮೂರು–ಮೂರು ತನಿಖೆಗಳನ್ನು ನಡೆಸಿ, ಗೊಂದಲ ಮೂಡಿಸಲಾಗುತ್ತಿದೆ. ಅಸಹಾಯಕ ಅಧಿಕಾರಿಗಳನ್ನು ಬಲಿಪಶು ಮಾಡಲಾಗುತ್ತಿದೆ ಎಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಸ್ಪಷ್ಟನೆ ನೀಡಬೇಕಿದೆ’ ಎಂದಿದ್ದಾರೆ.

ಕಾಲ್ತುಳಿತ ಸಂಭವಿಸಲು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಅವರೇ ಕಾರಣ. ಅವರಿಬ್ಬರ ರಾಜೀನಾಮೆಗೆ ಆಗ್ರಹಿಸಿ ಇದೇ 17ರಂದು ಪ್ರತಿಭಟನೆ ನಡೆಸಲಿದ್ದೇವೆ

ಕೆ.ಗೋಪಾಲಯ್ಯ, ಬಿಜೆಪಿ ಶಾಸಕ

ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಕುಸಮಳಿ ಬಳಿ ಮಲಪ್ರಭಾ ನದಿಗೆ ಅಡ್ಡಲಾಗಿ ನಿರ್ಮಿಸಿದ್ದ ತಾತ್ಕಾಲಿಕ ಸೇತುವೆ ಭಾನುವಾರ ಮಲಪ್ರಭಾ ನದಿಯ ನೀರಿನ ರಭಸಕ್ಕೆ ಕೊಚ್ಚಿಕೊಂಡು ಹೋಗಿದೆ

ರಾಜ್ಯದ ಕೆಲವೆಡೆ ವರ್ಷಧಾರೆ

ಒಂದನೇ ಪುಟದಿಂದ...

ದಕ್ಷಿಣ ಕನ್ನಡ ಮಂಗಳೂರು–ಮೂಡುಬಿದಿರೆ ರಾಷ್ಟ್ರೀಯ ಹೆದ್ದಾರಿ 169ರ ವಾಮಂಜೂರು ಸಮೀಪದ ತಿರುವೈಲ್ ಗ್ರಾಮದ ತೆತ್ತಿಕಲ್ ಎಂಬಲ್ಲಿ ಶನಿವಾರ ರಾತ್ರಿ ಗುಡ್ಡ ಕುಸಿತವಾಗಿ ರಸ್ತೆಯ ಒಂದು ಭಾಗಕ್ಕೆ ಬೃಹತ್ ಕಲ್ಲುಗಳು ಮತ್ತು ಮಣ್ಣು ಬಿದ್ದ ಕಾರಣ ಒಂದು ಬದಿಯಲ್ಲಿ ಮಾತ್ರ ವಾಹನ ಸಂಚಾರಕ್ಕೆ ಅವಕಾಶ ನೀಡಲಾಯಿತು. ಇಲ್ಲಿ ಕಳೆದ ಮಳೆಗಾಲದಲ್ಲೂ ಕುಸಿತ ಉಂಟಾಗಿ ಆತಂಕ ಮೂಡಿತ್ತು.

ಮಂಗಳೂರು ನಗರ ಸಮೀಪದ ಪಡೀಲ್ ಮತ್ತು ಜೋಕಟ್ಟೆ ನಡುವೆ ರೈಲು ಹಳಿಯ ಮೇಲೆ ಗುಡ್ಡದ ಮಣ್ಣು ಬಿದ್ದ ಕಾರಣ ಶನಿವಾರ ರಾತ್ರಿಯಿಂದ ರೈಲು ಸಂಚಾರ ವ್ಯತ್ಯಯವಾಯಿತು. ಈ ಭಾಗದಲ್ಲಿ ಸಾಗುವ ಮತ್ತು ಮಂಗಳೂರು ಸೆಂಟ್ರಲ್, ಮಂಗಳೂರು ಜಂಕ್ಷನ್‌ನಿಂದ ಹೊರಡುವ ರೈಲುಗಳು ಮಣ್ಣು ತೆರವು ಕಾರ್ಯ ಮುಗಿಯುವವರೆಗೆ ತಡವಾಗಿ ಸಾಗಲಿವೆ ಎಂದು ದಕ್ಷಿಣ ರೈಲ್ವೆಯ ಪಾಲಕ್ಕಾಡ್ ವಿಭಾಗದ ಎಕ್ಸ್ ಖಾತೆಯಲ್ಲಿ ಮಾಹಿತಿ ನೀಡಲಾಗಿದೆ.

ಉಡುಪಿ ನಗರದ ಹಲವೆಡೆ ರಸ್ತೆಗಳಲ್ಲಿ ನೀರು ಸಂಗ್ರಹವಾದ ಕಾರಣ ವಾಹನ ಸಂಚಾರಕ್ಕೆ ತೊಡಕಾಯಿತು. ಕುಂದಾಪುರ, ಬೈಂದೂರು, ಬ್ರಹ್ಮಾವರ, ಕಾರ್ಕಳ, ಹೆಬ್ರಿ, ಕಾಪು ಭಾಗದಲ್ಲಿ ಧಾರಾಕಾರ ಮಳೆಯಾಗಿದೆ.

ಕೊಡಗು ಜಿಲ್ಲೆಯಲ್ಲಿ ಭಾಗಮಂಡಲ ಕರಿಕೆ ರಸ್ತೆಯಲ್ಲಿರುವ ಜಲಪಾತಗಳು ಭಾನುವಾರ ಧುಮ್ಮಿಕ್ಕುತ್ತಿದ್ದು, ಕಣ್ಮನ ಸೆಳೆಯುತ್ತಿವೆ

ಚಿತ್ರ: ರಜಿತ್‌ಕುಮಾರ್ ಗುಹ್ಯ

ಮಂಗಳೂರು ನಗರದ ಕಂಕನಾಡಿಯ ಸುವರ್ಣ ಲೇನ್‌ನಲ್ಲಿ ಆವರಣ ಗೋಡೆಯೊಂದು ಎದುರು ಭಾಗದ ಮನೆಯ ಕಂಪೌಂಡ್‌ಗೆ ಬಡಿದು ಗೇಟ್ ತುಂಡಾಗಿ ಮನೆಯ ಅಂಗಳದಲ್ಲಿ ಬಿದ್ದ ಘಟನೆಯ ಸಿಸಿಟಿವಿ ದೃಶ್ಯಾವಳಿ ಸಾಮಾಜಿಕ ತಾಣಗಳಲ್ಲಿ ಹರಿದಾಡಿದೆ. ಗೋಡೆ ಗೇಟ್‌ಗೆ ಬಡಿಯುವಾಗ ಸಮೀಪದ ಟ್ರಾನ್ಸ್‌ಫಾರ್ಮರ್‌ನಿಂದ ಕಿಡಿ ಹಾರಿದೆ. ಇದು ನಡೆದಾಗ ಯಾರೂ ಹೊರಗೆ ಇರಲಿಲ್ಲ.

ನಗರದ ಶಿವಬಾಗ್‌ನಲ್ಲೂ ಆವರಣ ಗೋಡೆ ಕುಸಿದಿದ್ದು ಸಮೀಪದ ಒಂಟಿ ಮನೆಯಲ್ಲಿ ವಾಸವಾಗಿದ್ದ ಕುಟುಂಬವನ್ನು ಜೋಡುಕಟ್ಟೆಯ ಸಂಬಂಧಿಕರ ಮನೆಗೆ ಸ್ಥಳಾಂತರಿಸಲಾಗಿದೆ. ಕಂಕನಾಡಿ ಬಳಿಯ ನಾಗುರಿ ಜನವಸತಿ ಪ್ರದೇಶದಲ್ಲಿ ಗುಡ್ಡ ಸಣ್ಣ ಪ್ರಮಾಣದಲ್ಲಿ ಕುಸಿದಿದೆ. ಅಲ್ಲಿನ ನಿವಾಸಿಗಳನ್ನು ಸ್ಥಳಾಂತರಿಸಲಾಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಗಾಳಿಯ ರಭಸಕ್ಕೆ ಹಲವೆಡೆ ಮರಗಳು ಉರುಳಿ, ಮನೆಗಳಿಗೆ ಹಾನಿಯುಂಟಾಗಿದೆ. ಭಟ್ಕಳದಲ್ಲಿ 10ಕ್ಕೂ ಹೆಚ್ಚು ಮನೆಗಳಿಗೆ ಭಾಗಶಃ ಹಾನಿ ಉಂಟಾಗಿದೆ.

ಹುಬ್ಬಳ್ಳಿ ವರದಿ: ಹುಬ್ಬಳ್ಳಿ–ಧಾರವಾಡದಲ್ಲಿಯೂ ಭಾನುವಾರ ಕೆಲ ಸಮಯ ಮಳೆಯಾಗಿದ್ದು ಹುಬ್ಬಳ್ಳಿ ನಗರದಲ್ಲಿ ಸಾಯಂಕಾಲವಿಡೀ ಜಿಟಿಜಿಟಿ ಮಳೆಯಾಗಿದೆ.

ಮಡಿಕೇರಿ ವರದಿ: ನಗರ ಸೇರಿದಂತೆ ಸುತ್ತಲಿನ ಪ್ರದೇಶಗಳಲ್ಲಿ ಬಿರುಸಿನಿಂದ ಮಳೆಯಾಗಿದೆ. ಜೋರಾದ ಗಾಳಿಯೊಂದಿಗೆ ಶನಿವಾರ ತಡರಾತ್ರಿ ಆರಂಭವಾದ ಮಳೆ ಭಾನುವಾರ ದಿನವಿಡೀ ಸುರಿಯಿತು.

ಹಾರಂಗಿ ಜಲಾಶಯದ ಮಟ್ಟ 2851.73 ಅಡಿ ಇದ್ದು, (ಗರಿಷ್ಠ ಮಟ್ಟ 2,859 ಅಡಿ) ಸದ್ಯ, 3,208 ಕ್ಯುಸೆಕ್ ನೀರು ಹರಿದು ಬರುತ್ತಿದೆ. ಮುಂಜಾಗ್ರತಾ ಕ್ರಮವಾಗಿ 3,750 ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ.

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald-Prajavani relief Trust'**ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು **dept.finc@printersmysore.co.in**ಗೆ ಮೇಲ್ ಕಳುಹಿಸಿ.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಜೊತೆಗೆ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಸ್‌ಎಫ್‌ಸಿ ಕೋಡ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಅಥವಾ ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **ಶೈಕ್ಷಣಿಕ ನೆರವಿಗೆ ಅರ್ಜಿ** ಎಂದು ಸ್ಪಷ್ಟವಾಗಿ ಬರೆದಿರಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ನೀಡಬೇಕು.

ವಿಳಾಸ: ಮ್ಯಾನೇಜರ್, ಡೆಕ್ಕನ್‌ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ನೀರಿನಲ್ಲಿ ಮಗುಚಿದ ಅಟ್ಟಣಿಗೆ

ಮಾಣಿ ಜಲಾಶಯ: ಕಾಂತಾರ–1 ಸಿನಿಮಾ ಚಿತ್ರೀಕರಣ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಹೊಸನಗರ ತಾಲ್ಲೂಕಿನ ಮಾಣಿ ಜಲಾಶಯದಲ್ಲಿ ಕಾಂತಾರ ಚಾಪ್ಟರ್-1 ಸಿನಿಮಾದ ಚಿತ್ರೀಕರಣ ನಡೆಯುತ್ತಿದ್ದು, ಇದಕ್ಕಾಗಿ ಜಲಾಶಯದ ನೀರಿನ ಮೇಲೆ ಹಾಕಿದ್ದ ಪ್ಲಾಸ್ಟಿಕ್‌ನ ತೇಲುವ ಅಟ್ಟಣಿಗೆ ಶನಿವಾರ ಸಂಜೆ ಮಳೆ-ಗಾಳಿಗೆ ಮಗುಚಿದೆ. ಈ ವೇಳೆ ಅಲ್ಲಿ ನಟ ರಿಷಬ್ ಶೆಟ್ಟಿ ಸೇರಿದಂತೆ 10ಕ್ಕೂ ಹೆಚ್ಚು ಮಂದಿ ಇದ್ದರು. ಯಾರಿಗೂ ತೊಂದರೆ ಆಗಿಲ್ಲ ಎಂದು ತಿಳಿದುಬಂದಿದೆ.

ಚಿತ್ರೀಕರಣ ಸ್ಥಳದಲ್ಲಿ ಭಾರಿ ದುರಂತ ಸಂಭವಿಸಿದೆ. ದೋಣಿ ಮುಳುಗಿದೆ ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಕೆಲವು ಮಾಧ್ಯಮಗಳಲ್ಲೂ ಇದು ವರದಿಯಾಗಿತ್ತು.

‘ಹೊಸನಗರ ಠಾಣೆ ಸಿಪಿಐ ಅವರನ್ನು ಸ್ಥಳಕ್ಕೆ ಕಳಿಸಿದ್ದೇವೆ. ಜಲಾಶಯದ ನೀರಿನ ಮೇಲೆ ಹಾಕಿದ್ದ ತೇಲುವ ಅಟ್ಟಣಿಗೆ ಮಗುಚಿದೆ. ಯಾವುದೇ ಜೀವ ಹಾನಿ ಸಂಭವಿಸಿಲ್ಲ. ಎಲ್ಲರೂ ಸುರಕ್ಷಿತವಾಗಿದ್ದಾರೆ’ ಎಂದು ಎಸ್ಪಿ ಜಿ.ಕೆ.ಮಿಥುನ್ ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಜಲಾಶಯದಲ್ಲಿ ಚಿತ್ರೀಕರಣ ನಡೆಸುವುದಕ್ಕೆ ಕರ್ನಾಟಕ ವಿದ್ಯುತ್ ನಿಗಮ (ಕೆಪಿಸಿ) ಹಾಗೂ ಸಂಬಂಧಿಸಿದ ಇಲಾಖೆಗಳಿಂದ ಅನುಮತಿ ಪಡೆಯಲಾಗಿದೆಯೇ ಎಂಬುದನ್ನು ಪರಿಶೀಲಿಸುವಂತೆ ಹೊಸನಗರ ಪೊಲೀಸರಿಗೆ ಸೂಚಿಸಲಾಗಿದೆ’ ಎಂದು ಹೇಳಿದರು.

‘ಚಿತ್ರೀಕರಣಕ್ಕೆ ಜಿಲ್ಲಾಡಳಿತದಿಂದ ಅನುಮತಿ ಪಡೆದಿಲ್ಲ. ಬೆಂಗಳೂರಿನಿಂದಲೇ ಅನುಮತಿ ಪಡೆದಿರುವುದಾಗಿ ಚಿತ್ರ ತಂಡದವರು ಹೇಳಿದ್ದಾರೆ. ದಾಖಲೆಗಳ ಪರಿಶೀಲನೆ ನಡೆಸಲಾಗುವುದು’ ಎಂದು ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ತಿಳಿಸಿದರು.

ಈ ಸಿನಿಮಾದ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದ ಕೇರಳದ ಕಲಾವಿದರೊಬ್ಬರು ತಾವು ಉಳಿದುಕೊಂಡಿದ್ದ ಆಗುಂಬೆಯ ಹೋಂ ಸ್ಟೇಯಲ್ಲಿ ಈಚೆಗೆ ಹೃದಯಾಘಾತದಿಂದ ಮೃತಪಟ್ಟಿದ್ದರು.

ಅವಘಡ ನಡೆದಿಲ್ಲ: ಸ್ಪಷ್ಟನೆ

‘ಮಾಣಿ ಹಿನ್ನೀರು ಪ್ರದೇಶದಲ್ಲಿ ಚಿತ್ರೀಕರಣ ನಡೆಯುತ್ತಿದ್ದು, ಈ ವೇಳೆ ಯಾವುದೇ ಅವಘಡ ಸಂಭವಿಸಿಲ್ಲ’ ಎಂದು ಕಾರ್ಯನಿರ್ವಾಹಕ ನಿರ್ಮಾಪಕ ಆದರ್ಶ್, ಮಾಧ್ಯಮಗಳಿಗೆ ಸ್ಪಷ್ಟನೆ ನೀಡಿದ್ದಾರೆ.

‘ಭಾನುವಾರವೂ ಚಿತ್ರೀಕರಣ ನಡೆದಿದೆ. ಇದಕ್ಕೆ ಸಂಬಂಧಿಸಿದ ಇಲಾಖೆಗಳಿಂದ ಪರವಾನಗಿ ಪಡೆದಿದ್ದೇವೆ’ ಎಂದು ತಿಳಿಸಿದ್ದಾರೆ.

ನೀಟ್: ವಿದ್ಯಾರ್ಥಿಗಳ ಸಾಧನೆ

ಅಕ್ಷಯ್ ಎಂ.ಹೆಗಡೆ

ಶಿವಪ್ರಸಾದ



ತುಷಾರ್ ಜಿ. ಪಾಟೀಲ

ಅರುಣ್ ಗೌಡ

ಪಾಂಡುರಂಗ ಜಿ.ಬಿ.

ಪ್ರೇಕ್ಷಾ ಎಂ.ಎಸ್.

ವೈಭವ್

ಅರುಣ್ ಜಂಬಗಿ

ಆಳ್ವಾಸ್: 75 ವಿದ್ಯಾರ್ಥಿಗಳಿಗೆ ಅಗ್ರ 10 ಸಾವಿರದೊಳಗೆ ರ‍್ಯಾಂಕ್

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆಯಲ್ಲಿ (ನೀಟ್) ಇಲ್ಲಿನ ಆಳ್ವಾಸ್ ಪದವಿ ಪೂರ್ವ ಕಾಲೇಜಿನ 75 ವಿದ್ಯಾರ್ಥಿಗಳು ಅಗ್ರ 10 ಸಾವಿರದೊಳಗಿನ ರ‍್ಯಾಂಕ್ ಪಡೆದಿದ್ದಾರೆ.

ರಾಘವೇಂದ್ರ ಶಂಕರ್

450ಕ್ಕೂ ಅಧಿಕ ವಿದ್ಯಾರ್ಥಿಗಳು ಸರ್ಕಾರಿ ಕೋಟಾದ ಎಂಬಿಬಿಎಸ್ ಸೀಟ್‌ಗೆ ಅರ್ಹತೆ ಪಡೆದಿದ್ದಾರೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ತಿಳಿಸಿದ್ದಾರೆ.

ಪಟ್ಟಣದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ‘ಕಾಲೇಜಿನ ರಾಘವೇಂದ್ರ ಶಂಕರ್ 601 ಅಂಕ ಪಡೆದಿದ್ದಾರೆ. 21 ವಿದ್ಯಾರ್ಥಿಗಳು 550ಕ್ಕೂ ಅಧಿಕ, 116 ವಿದ್ಯಾರ್ಥಿಗಳು 500ಕ್ಕೂ ಅಧಿಕ, 401 ವಿದ್ಯಾರ್ಥಿಗಳು 450ಕ್ಕೂ ಅಧಿಕ ಹಾಗೂ 596 ವಿದ್ಯಾರ್ಥಿಗಳು 400ಕ್ಕೂ ಅಧಿಕ ಅಂಕ ಪಡೆದಿದ್ದಾರೆ. 9 ವಿದ್ಯಾರ್ಥಿಗಳು, ಅಖಿಲ ಭಾರತ ಮಟ್ಟದ ಅಗ್ರ 1 ಸಾವಿರದೊಳಗೆ, 20 ವಿದ್ಯಾರ್ಥಿಗಳು ಅಗ್ರ 2 ಸಾವಿರದೊಳಗೆ, 48 ವಿದ್ಯಾರ್ಥಿಗಳು ಅಗ್ರ 5 ಸಾವಿರದೊಳಗೆ ಸ್ಥಾನ ಪಡೆದಿದ್ದಾರೆ’ ಎಂದರು.

‘ವಿದ್ಯಾರ್ಥಿ ರಾಘವೇಂದ್ರ ಶಂಕರ್ 601, ಅಕ್ಷಯ್ ಎಂ. ಹೆಗಡೆ 597, ಶಿವಪ್ರಸಾದ 587, ಪಾಂಡುರಂಗ ಜಿ.ಬಿ. 584, ತುಷಾರ್ ಘನಶ್ಯಾಮ್ 581, ಪ್ರೇಕ್ಷಾ ಎಂ.ಎಸ್. 580, ವೈಭವ್ 580, ಅರುಣ್‌ಗೌಡ ಪಾಟೀಲ್ 579, ಅರುಣ್ ಜಂಬಗಿ 568, ಶಶಾಂಕ್ ಉಡುಪ 567, ತುಷಾರ್ ಎಸ್. ಅವತಿ 567, ಮೋಹನ್ ಡಿ-567, ತುಷಾರ್ ಉಡುಪ 565, ಜಸ್ವಂತ್ ಸಿ 564, ಶ್ರೀನಿವಾಸ ರೆಡ್ಡಿ 561, ವಿಕಾಸ್ ಗೌಡ 559, ಸೃಜನ್ ವಿ.ಎ. 558, ಗಣೇಶ್ 557, ಪ್ರಜ್ವಲ್ ಎಸ್. ಕೆ 556, ವರುಣ್ ಶೆಟ್ಟಿ 554, ಪವನ್ ಮಂಜುನಾಥ್ 552 ಅಂಕ ಪಡೆದಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಪ್ರಾಚಾರ್ಯ ಮೊಹ್ಮದ್ ಸದಾಖತ್, ಆಡಳಿತಾಧಿಕಾರಿ ಪ್ರದೀಪ್ ಕುಮಾರ್ ಇದ್ದರು.

ಕೊಡವ ಸಮಾಜದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ • ಕೊಡವರ ಸೇವೆಗೆ ಶ್ಲಾಘನೆ

ಜಾತಿ, ಧರ್ಮ ಮನೆ ಒಳಗಿನ ಆಚರಣೆಯಾಗಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂಖ್ಯೆಯಲ್ಲಿ ಅಲ್ಪ ಸಂಖ್ಯಾತರಾದರೂ ದೇಶ ಸೇವೆಯಲ್ಲಿ ಕೊಡವ ಸಮಾಜದವರಿಗೆ ಸರಿಸಮಾನ ಬೇರೆ ಇಲ್ಲ. ಸಂಸ್ಕೃತಿ ಮತ್ತು ಶಿಸ್ತಿನಲ್ಲಿ ಕೊಡವರು ಮುಂಚೂಣಿಯಲ್ಲಿ xದ್ದಾರೆ. ಸೈನ್ಯ, ದೇಶ ರಕ್ಷಣೆ, ಕ್ರೀಡೆ ಮತ್ತು ರಾಜಕಾರಣಕ್ಕೆ ಕೊಡವರ ಕೊಡುಗೆ ಅಪಾರ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ವಸಂತನಗರದ ಕೊಡವ ಸಭಾಂಗಣದಲ್ಲಿ ಕೊಡವ ಸಮಾಜ ಭಾನುವಾರ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ‘ಸರ್ವರನ್ನೂ ಸಮಾನವಾಗಿ ಕಾಣುವುದು ಕಾಂಗ್ರೆಸ್ ಪಕ್ಷದ ಸಂಸ್ಕೃತಿ. ಎಲ್ಲ ಜಾತಿ, ಧರ್ಮದವರನ್ನೂ ಭಾರತೀಯರು, ಭಾರತೀಯ ಪ್ರಜೆಗಳು ಎಂದು ಕಾಂಗ್ರೆಸ್ ಪರಿಗಣಿಸುತ್ತದೆ’ ಎಂದರು.

‘ಜಾತಿ, ಧರ್ಮ ಮನೆಯ ಒಳಗಿನ ಆಚರಣೆಯಾಗಲಿ. ಹೊರಗೆ ಬಂದ ಕೂಡಲೇ ನಾವೆಲ್ಲರೂ ಒಂದೇ, ನಾವು ಭಾರತೀಯರಾಗಬೇಕು. ದೇಶ ರಕ್ಷಣೆಯಲ್ಲಿ ಮುಂಚೂಣಿಯಲ್ಲಿರುವ ಕೊಡವರು ಜಾತಿ-ಧರ್ಮ ಮಾಡುವವರಲ್ಲ. ಎಲ್ಲರನ್ನೂ ಭಾರತೀಯರು ಎಂದು ಗೌರವಿಸುವವರು’ ಎಂದು ಅವರು ಹೇಳಿದರು.

‘ಎ.ಕೆ. ಸುಬ್ಬಯ್ಯ ಮತ್ತು ಎಂ.ಸಿ. ನಾಣಯ್ಯ ಉತ್ತಮ ಸಂಸದೀಯ ಪಟುಗಳು. ಅವರು ಸದನದಲ್ಲಿ ಸಮಾಜಮುಖಿಯಾಗಿ ಮಾತನಾಡಿದ ಫೈರ್ ಬ್ರಾಂಡ್‌ಗಳು. ಹಾಲಿ ಶಾಸಕ ಎ.ಎಸ್. ಪೊನ್ನಣ್ಣ ಅವರಿಗೂ ಫೈರ್ ಬ್ರಾಂಡ್ ಆಗುವ ಲಕ್ಷಣಗಳಿವೆ’ ಎಂದರು.

‘ಯಾವುದೇ ಸಮುದಾಯ ಸರ್ಕಾರದಿಂದ ಜಾಗ ಕೇಳಿದರೆ ಮಾರ್ಗಸೂಚಿ ದರದ ಶೇ 10ರಷ್ಟು ಬೆಲೆಗೆ ಕೊಡಬೇಕು ಎಂದು ಕಂದಾಯ ಸಚಿವರಿಗೆ ಸೂಚಿಸಿದ್ದೇನೆ. ಅದರಂತೆ ಕೊಡವ ಸಮಾಜಕ್ಕೂ ಜಾಗ ನೀಡಿದ್ದೇವೆ’ ಎಂದರು.

ಸಚಿವರಾದ ಕೆ.ಜೆ. ಜಾರ್ಜ್, ಬೈರತಿ ಸುರೇಶ್, ಕೃಷ್ಣ ಬೈರೇಗೌಡ, ಶಾಸಕರಾದ ಎ.ಎಸ್. ಪೊನ್ನಣ್ಣ, ಶಾಸಕ ಮಂಥರ್ ಗೌಡ, ರಿಜ್ವಾನ್ ಅರ್ಷದ್, ಕೊಡವ ಸಮಾಜದ ಅಧ್ಯಕ್ಷ ಕೆ.ಟಿ. ಪೆಮ್ಮಯ್ಯ, ಉಪಾಧ್ಯಕ್ಷ ಪಿ.ಕೆ. ಮುತ್ತಪ್ಪ ಇದ್ದರು.

ಕಾರ್ಯಕ್ರಮದಲ್ಲಿ ಬೈರತಿ ಸುರೇಶ್, ಕೆ.ಜೆ. ಜಾರ್ಜ್, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಎ.ಎಸ್. ಪೊನ್ನಣ್ಣ

‘ಕಾರ್ಯಪ್ಪ ಹೆಸರು ಉಳಿಸಲು ಬದ್ಧ’

‘ಮೆಟ್ರೊ ನಿಲ್ದಾಣಕ್ಕೆ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಅವರ ಹೆಸರಿಡುವ ಬಗ್ಗೆ ಮುಖ್ಯಮಂತ್ರಿ ಮತ್ತು ನಾನು ಚರ್ಚಿಸಿ ತೀರ್ಮಾನಿಸುತ್ತೇವೆ. ಕಾರ್ಯಪ್ಪ ಅವರ ಹೆಸರು ಉಳಿಸುವ ಕೆಲಸ ಮಾಡುತ್ತೇವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

‘ಇಡೀ ದೇಶಕ್ಕೆ ಕೊಡಗು ಹಾಗೂ ಕೊಡವರು ಆಭರಣ ಇದ್ದಂತೆ. ಸಂಸ್ಕೃತಿ ಹಾಗೂ ಪರಂಪರೆಗಳನ್ನು ನಾವು ಹಾಳು ಮಾಡಿಕೊಳ್ಳಬಾರದು ಎಂಬುದು ನಮ್ಮ ಬಯಕೆ. ಕೊಡವ ಸಮಾಜಕ್ಕೆ ನೀಡಿರುವ 7 ಎಕರೆ ಜಮೀನಿಗೆ ₹ 30 ಕೋಟಿಯಿಂದ ₹ 40 ಕೋಟಿ ಕಡಿಮೆ ಮಾಡಿರುವುದು ದೊಡ್ಡ ವಿಚಾರವಲ್ಲ. ಅದಕ್ಕಿಂತ ನಿಮ್ಮ ತ್ಯಾಗ, ಪರಿಶ್ರಮ, ಶಿಸ್ತು ದೊಡ್ಡದು’ ಎಂದರು.

ನಿಧನ ವಾರ್ತೆ

ಸೂರ್ಯ ದೇವಾಡಿಗ

ಬ್ರಹ್ಮಾವರ: ಬಡಗುತಿಟ್ಟಿನ ಚಂಡೆವಾದಕ ನೀಲಾವರ ಸೂರ್ಯ ದೇವಾಡಿಗ (56) ಶನಿವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.



ಸೂರ್ಯ ದೇವಾಡಿಗ

ಮಡಾಮಕ್ಕಿ, ಅಮೃತೇಶ್ವರಿ, ಮೇಗರವಳ್ಳಿ, ಹಾಲಾಡಿ, ಕಾಲ ಮಂದಾರ್ತಿ ಸೇರಿ ಸುಮಾರು 30 ವರ್ಷ ಯಕ್ಷಗಾನ ಮೇಳಗಳಲ್ಲಿ ಚಂಡೆ ವಾದಕರಾಗಿ ಸೇವೆ ಮಾಡಿದ್ದರು.

ಉಡುಪಿ ಯಕ್ಷಗಾನ ಕೇಂದ್ರದಲ್ಲಿ ಎ.ಪಿ. ಪಾಠಕ್ ಅವರ ಶಿಷ್ಯರಾಗಿ ಚಂಡೆ, ಮದ್ದಲೆ ವಾದನ ಕರಗತ ಮಾಡಿಕೊಂಡಿದ್ದರು. ಕುಲ ಕಸುಬಾದ ವಾದ್ಯ ನುಡಿಸುವುದನ್ನು, ನೀಲಾವರ ದೇವಸ್ಥಾನದಲ್ಲಿ ಪ್ರವೃತ್ತಿಯಾಗಿ ಸ್ವೀಕರಿಸಿ ತೊಡಗಿಸಿಕೊಂಡಿದ್ದರು. ಈ ಬಾರಿಯ ತಿರುಗಾಟದಲ್ಲಿ ಒಂದು ತಿಂಗಳು ಮಾರಣಕಟ್ಟೆ ಮೇಳದಲ್ಲಿ ಚಂಡೆವಾದಕರಾಗಿ ಸೇವೆ ಸಲ್ಲಿಸಿದ್ದರು.

CASAGRAND Presents ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಸಮ್ಮಾನಕ್ಕಾಗಿ ಹೆಜ್ಜೆ–ಧ್ವನಿಗಳ ಪೈಪೋಟಿ

‘ಕಾಸಾಗ್ರ್ಯಾಂಡ್’ ಪ್ರಸ್ತುತ ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ 3ನೇ ಆವೃತ್ತಿಗೆ ದಿನಗಣನೆ ಆರಂಭವಾಗಿದೆ. ಈಗಾಗಲೇ ಹಲವು ವಿಭಾಗಗಳಲ್ಲಿ ನಾಮನಿರ್ದೇಶಿತರಾದವರ ಹೆಸರುಗಳನ್ನು ಪ್ರಕಟಿಸಲಾಗಿದೆ. ಗಾಯನ, ನೃತ್ಯಗಳೆರಡೂ ಸಿನಿಮಾದ ಮೆರಗನ್ನು ಹೆಚ್ಚಿಸುವಂಥವು. ಸಿನಿಮಾವೊಂದರ ಅಂದ ಹೆಚ್ಚಿಸಿದ ಈ ವಿಭಾಗಗಳ ನಾಮನಿರ್ದೇಶಿತರನ್ನು ಇಂದು ಪ್ರಕಟಿಸಲಾಗುತ್ತಿದೆ. ಇನ್ನಷ್ಟು ವಿಭಾಗಗಳಲ್ಲಿ ನಾಮನಿರ್ದೇಶಿತರಾದವರ ಹೆಸರುಗಳನ್ನು ಹಂತ ಹಂತವಾಗಿ ಪ್ರಕಟಿಸಲಾಗುವುದು.

ಅತ್ಯುತ್ತಮ ಹಿನ್ನೆಲೆ ಗಾಯಕ


ಅಕ್ಷತ್ ಆಚಾರ್ಯ
ಚಿತ್ರ: ಬ್ಯಾಚುಲರ್ ಪಾರ್ಟಿ

ಜಸ್ಕರಣ್ ಸಿಂಗ್
ಚಿತ್ರ: ಕೃಷ್ಣಂ ಪ್ರಣಯ ಸಖಿ

ಕಪಿಲ್ ಕಪಿಲನ್
ಚಿತ್ರ: ಇಬ್ಬನಿ ತಬ್ಬಿದ ಇಳೆಯಲಿ

ಸಿದ್ಧಾರ್ಥ್ ಬೆಳ್ಮಣ್
ಚಿತ್ರ: ಬ್ಲಿಂಕ್

ಉಪೇಂದ್ರ, ರಾಜೇಶ್ ಕೃಷ್ಣ
ಚಿತ್ರ: ಕರಟಕ ದಮನಕ

ಅತ್ಯುತ್ತಮ ಹಿನ್ನೆಲೆ ಗಾಯಕಿ

ಸಂಗೀತಾ ಕಟ್ಟಿ
ಚಿತ್ರ: ಜೀನಿಯಸ್ ಮುತ್ತ

ಸುನಿಧಿ ಗಣೇಶ್
ಚಿತ್ರ: ಕಬಂಧ

ಶ್ರುತಿ ಪ್ರಹ್ಲಾದ್
ಚಿತ್ರ: ಕರಟಕ ದಮನಕ

ಶ್ರೀಲಕ್ಷ್ಮಿ ಬೆಳ್ಮಣ್
ಚಿತ್ರ: ಇಬ್ಬನಿ ತಬ್ಬಿದ ಇಳೆಯಲಿ

ವೈಶ್
ಚಿತ್ರ: ಭೀಮ

ಅತ್ಯುತ್ತಮ ನೃತ್ಯ ನಿರ್ದೇಶನ

ಶೋಭಿ ಪೌಲ್‌ರಾಜ್
ಚಿತ್ರ : ಮ್ಯಾಕ್ಸ್

ದೀಕ್ಷಿತ್ ಕುಮಾರ್
ಚಿತ್ರ: ಇಬ್ಬನಿ ತಬ್ಬಿದ ಇಳೆಯಲಿ

ಪ್ರಭುದೇವ, ಭೂಷಣ್
ಚಿತ್ರ: ಕರಟಕ ದಮನಕ

ಬಿ.ಧನಂಜಯ
ಚಿತ್ರಗಳು: ಭೀಮ ಮತ್ತು ಕಾಲಪತ್ಥರ್


ಶೇಖರ್
ಚಿತ್ರ: ಕೃಷ್ಣಂ ಪ್ರಣಯ ಸಖಿ

ಸಹ ಪ್ರಾಯೋಜಕರು: ಟಿಟಿಕೆ ಪ್ರೆಸ್ಟೀಜ್, ಫ್ರೀಡಂ ಹೆಲ್ತಿ ಕುಕ್ಕಿಂಗ್ ಆಯಿಲ್, ಹೋಂಡಾ, ಸದ್ಗುರು ಆಯುರ್ವೇದ, ದಿ ಬೆಂಗಳೂರ್ ಸಿಟಿ ಕೊ–ಆಪರೇಟಿವ್ ಬ್ಯಾಂಕ್, ದಿ ಜನತಾ ಕೊ–ಆಪರೇಟಿವ್ ಬ್ಯಾಂಕ್. ಮೊಬಿಲಿಟಿ ಪಾರ್ಟ್‌ನರ್: ಮರ್ಸಿಡೀಸ್ ಬೆಂಜ್–ಅಕ್ಷಯ್ ಮೋಟರ್ಸ್. ಬ್ಯಾಂಕಿಂಗ್ ಪಾರ್ಟ್‌ನರ್: ಕೆನರಾ ಬ್ಯಾಂಕ್. ಸ್ಟೈಲ್ ಪಾರ್ಟ್‌ನರ್: ಬಿ.ಎಸ್. ಚನ್ನಬಸಪ್ಪ ಆ್ಯಂಡ್ ಸನ್ಸ್. ಟ್ರಾವೆಲ್ ಪಾರ್ಟ್‌ನರ್: ಟ್ರಾವೆಲ್‌ಮಾರ್ಟ್. ವಾರ್ಡ್‌ರೋಬ್ ಪಾರ್ಟ್‌ನರ್: ನ್ಯುಮೆನ್. ನಾಲೆಜ್ ಪಾರ್ಟ್‌ನರ್ಸ್: ಇನ್‌ಸೈಟ್ಸ್‌ಐಎಎಸ್ ಮತ್ತು ಗೀತಂ ಬೆಂಗಳೂರು. ಇನ್‌ಶ್ಯೂರೆನ್ಸ್ ಪಾರ್ಟ್‌ನರ್: ನ್ಯಾಷನಲ್ ಇನ್‌ಶ್ಯೂರೆನ್ಸ್. ಟೆಲಿಕಾಸ್ಟ್ ಪಾರ್ಟ್‌ನರ್: ಜೀ ಕನ್ನಡ. ಆಡಿಟ್ ಪಾರ್ಟ್‌ನರ್: ಇ ಆ್ಯಂಡ್ ವೈ.

ವಿಮಾನ ಪತನ: 47 ಸಂತ್ರಸ್ತರ ಗುರುತು ಪತ್ತೆ

24 ಮೃತದೇಹ ಕುಟುಂಬಸ್ಥರಿಗೆ ಹಸ್ತಾಂತರ • ದುರಂತ ಕುರಿತ ತನಿಖೆ ಚುರುಕು • ಎರಡನೇ ಬ್ಲ್ಯಾಕ್ ಬಾಕ್ಸ್ ಪತ್ತೆ

ಅಹಮದಾಬಾದ್ (ಪಿಟಿಐ/ರಾಯಿಟರ್ಸ್/ಎಎಫ್‌ಪಿ): ಅಹಮದಾಬಾದ್‌ನಲ್ಲಿ ಏರ್ ಇಂಡಿಯಾ ವಿಮಾನವು ಪತನಗೊಂಡ ಮೂರು ದಿನಗಳ ನಂತರ, 47 ಮಂದಿಯ ಮೃತದೇಹಗಳನ್ನು ಡಿಎನ್‌ಎ ಪರೀಕ್ಷೆ ಮೂಲಕ ಗುರುತಿಸಲಾಗಿದೆ. ಈ ಪೈಕಿ 24 ಮೃತದೇಹಗಳನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದರು.

ಈವರೆಗೆ ಗುರುತು ಪತ್ತೆ ಮಾಡಲಾದ ಸಂತ್ರಸ್ತರು ರಾಜಸ್ಥಾನ ಮತ್ತು ಗುಜರಾತ್‌ನ ವಿವಿಧ ಪ್ರದೇಶದವರು ಎಂದು ಅವರು ತಿಳಿಸಿದರು.

ಬಹುತೇಕ ಮೃತದೇಹಗಳು ಗುರುತಿಸಲಾಗದಷ್ಟು ಸುಟ್ಟು ಕರಕಲಾಗಿವೆ ಅಥವಾ ಛಿದ್ರವಾಗಿವೆ. ಆದ್ದರಿಂದ ಅಧಿಕಾರಿಗಳು ಡಿಎನ್‌ಎ ಪರೀಕ್ಷೆ ನಡೆಸಿ ಮೃತರ ಗುರುತು ಪತ್ತೆ ಮಾಡುತ್ತಿದ್ದಾರೆ. ಈ ಪ್ರಕ್ರಿಯೆಗಾಗಿ 230 ತಂಡಗಳನ್ನು ರಚಿಸಲಾಗಿದೆ.

ಪತನಗೊಂಡ ಏರ್ ಇಂಡಿಯಾ ವಿಮಾನದಲ್ಲಿದ್ದ 242 ಮಂದಿಯ ಪೈಕಿ 241 ಮಂದಿ ಮೃತಪಟ್ಟಿದ್ದಾರೆ. ವಿಮಾನ ಡಿಕ್ಕಿ ಹೊಡೆದ ಸ್ಥಳದಲ್ಲಿದ್ದ ಎಂಬಿಬಿಎಸ್ ವಿದ್ಯಾರ್ಥಿಗಳೂ ಸೇರಿ 29 ಮಂದಿ ಮೃತಪಟ್ಟಿದ್ದಾರೆ.

ಶವಗಳ ಅಂತ್ಯಸಂಸ್ಕಾರ: ಮೃತದೇಹಗಳನ್ನು ಪಡೆದ ಕುಟುಂಬಸ್ಥರು ಪಾರ್ಥಿವ ಶರೀರಗಳ ಅಂತ್ಯಸಂಸ್ಕಾರವನ್ನು ಭಾನುವಾರ ನೆರವೇರಿಸಿದರು.

‘ಹಸ್ತಾಂತರಿಸಲಾದ ಶವಪೆಟ್ಟಿಗೆಯನ್ನು ತೆರೆಯದಂತೆ ಸೂಚನೆ ನೀಡಲಾಗಿದೆ’ ಎಂದು ಮೃತರ ಸಂಬಂಧಿಯೊಬ್ಬರು ತಿಳಿಸಿದರು.

ಎರಡನೇ ಬ್ಲ್ಯಾಕ್ ಬಾಕ್ಸ್ ಪತ್ತೆ: ಇಲ್ಲಿನ ಬಿ.ಜೆ ವೈದ್ಯಕೀಯ ಕಾಲೇಜಿನ ಆವರಣದಲ್ಲಿ ಪತನಗೊಂಡಿದ್ದ ಏರ್ ಇಂಡಿಯಾ ಬೋಯಿಂಗ್ 787–8 ವಿಮಾನದ ಎರಡನೆಯ ಬ್ಲ್ಯಾಕ್ ಬಾಕ್ಸ್ ಭಾನುವಾರ ಪತ್ತೆಯಾಗಿದೆ.

ವಿಮಾನದಲ್ಲಿ ಎರಡು ಬ್ಲ್ಯಾಕ್ ಬಾಕ್ಸ್‌ಗಳಿದ್ದವು. ವಿಮಾನದ ಫ್ಲೈಟ್ ಡೇಟಾ ರೆಕಾರ್ಡರ್ ಶುಕ್ರವಾರ ಪತ್ತೆಯಾಗಿತ್ತು. ‘ಕಾಕ್‌ಪಿಟ್ ವಾಯ್ಸ್ ರೆಕಾರ್ಡರ್’ ಭಾನುವಾರ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬ್ರಿಟಿಷ್ ದಂಪತಿಯ ದುರಂತ ಅಂತ್ಯ

‘ಅತ್ಯಂತ ಸಂತೋಷದಿಂದ ಹಿಂದಿರುಗುತ್ತಿದ್ದೇವೆ’

–ವಿಮಾನ ದುರಂತದಲ್ಲಿ ಮೃತಪಟ್ಟ ಬ್ರಿಟಿಷ್ ಪ್ರಜೆ ಫಿಯೋಂಗಲ್ ಗ್ರೀನ್ ಲಾ–ಮೀಕ್ ಅವರು ವಿಮಾನವು ಅಹಮದಾಬಾದ್‌ನಿಂದ ಹೊರಡುವ ಮುನ್ನ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದ ವಿಡಿಯೊದಲ್ಲಿ ಹೇಳಿದ್ದ ಮಾತಿದು.

ಫಿಯೋಂಗಲ್ ಅವರು ಪತಿ ಜೆಮಿ ಮೀಕ್ ಅವರೊಂದಿಗೆ ಭಾರತಕ್ಕೆ ಪ್ರವಾಸ ಬಂದಿದ್ದರು. ಆದರೆ ದುರದೃಷ್ಟವಶಾತ್ ಇದು ದಂಪತಿಯ ಅಂತಿಮ ಯಾತ್ರೆಯಾಗಿ ಮಾರ್ಪಟ್ಟಿತು.

ವಿಡಿಯೊದಲ್ಲಿ ದಂಪತಿ, ‘ನಾವೀಗ ವಿಮಾನ ನಿಲ್ದಾಣದಲ್ಲಿದ್ದೇವೆ. ಗುಡ್ ಬೈ ಇಂಡಿಯಾ’ ಎಂದು ಹೇಳಿದ್ದಾರೆ.

ಇದಕ್ಕೂ ಮುನ್ನಾದಿನ ಪೋಸ್ಟ್ ಮಾಡಿದ್ದ ವಿಡಿಯೊದಲ್ಲಿ ಅವರ ಭಾರತ ಪ್ರವಾಸದ ಕುರಿತ ಅನುಭವವನ್ನು ಹಂಚಿಕೊಂಡಿದ್ದರು. ‘ಭಾರತದಲ್ಲಿ ಇದು ನಮ್ಮ ಕೊನೆಯ ರಾತ್ರಿ’ ಎಂದು ಹೇಳಿದ್ದರು.

ದಿನದ ಬೆಳವಣಿಗೆ

- ಅಮೆರಿಕದ ರಾಷ್ಟ್ರೀಯ ಸಾರಿಗೆ ಸುರಕ್ಷತಾ ಮಂಡಳಿಯಿಂದ (ಎನ್‌ಟಿಎಸ್‌ಬಿ) ಘಟನಾ ಸ್ಥಳದಲ್ಲಿ ಸಮೀಕ್ಷೆ
- ವಿಮಾನ ಪತನದ ವಿಡಿಯೊ ಚಿತ್ರೀಕರಿಸಿದ್ದ ಬಾಲಕ ಆರ್ಯನ್ ಭಾನುವಾರ ಅರಾವಳಿ ಜಿಲ್ಲೆಗೆ ಮರಳಿದ್ದಾನೆ. ಆರ್ಯನ್ ಹೇಳಿಕೆಯನ್ನು ಪೊಲೀಸರು ಶನಿವಾರ ದಾಖಲಿಸಿ ಕೊಂಡಿದ್ದರು

ವಿಮಾನ ದುರಂತದಲ್ಲಿ ಮೃತಪಟ್ಟ ರಚನಾಬೆನ್ ರೋಜರ್ ಮತ್ತು ರೋಜರ್ ಡೇವಿಡ್ ಅವರ ಮೃತದೇಹವನ್ನು ಪಡೆದ ಸಂಬಂಧಿಕರು ಭಾನುವಾರ ಅಂತ್ಯಸಂಸ್ಕಾರ ನೆರವೇರಿಸಿದರು –ಪಿಟಿಐ ಚಿತ್ರ

ಮತ್ತೊಂದು ಪವಾಡಕ್ಕಾಗಿ ಪ್ರಾರ್ಥನೆ

ಏರ್ ಇಂಡಿಯಾ ವಿಮಾನವು ಅಪ್ಪಳಿಸಿದ್ದ ಕಾಲೇಜು ಹಾಸ್ಟೆಲ್ ಕಟ್ಟಡದಲ್ಲಿದ್ದ ತಾಯಿ ಮತ್ತು ಎರಡು ವರ್ಷದ ಮಗಳಿಗಾಗಿ ಹಾಸ್ಟೆಲ್ ಬಾಣಸಿಗ ರವಿ ಠಾಕೂರ್ ಅವರು ಪರಿತಪಿಸುತ್ತಿದ್ದಾರೆ.

ದುರಂತಕ್ಕೂ 30 ನಿಮಿಷ ಮುನ್ನ ರವಿ ಮತ್ತು ಅವರ ಪತ್ನಿ ಲಂಚ್ ಬಾಕ್ಸ್ ಡೆಲಿವರಿ ಮಾಡಲು ಹೊರಗೆ ಬಂದಿದ್ದರು. ಆದರೆ ಕಟ್ಟಡದಲ್ಲಿ ಅವರ ತಾಯಿ ಮತ್ತು ಮಗಳು ಇದ್ದರು. ‘ತಾಯಿ, ಮಗು ಸದ್ಯ ನಾಪತ್ತೆಯಾಗಿದ್ದಾರೆ. ವಿಮಾನದ ಪ್ರಯಾಣಿಕರೊಬ್ಬರು ಬದುಕುಳಿದಂತೆ ಇನ್ನೊಂದು ಪವಾಡ ಘಟಿಸಲಿ’ ಎಂದು ಠಾಕೂರ್ ಪ್ರಾರ್ಥಿಸುತ್ತಿದ್ದಾರೆ.

‘ಲಂಚ್ ಬಾಕ್ಸ್ ಡೆಲಿವರಿಗೆ ಹೊರಡುವ ಮುನ್ನ ಮಗಳನ್ನು ತೂಗುಯ್ಯಾಲೆ ಮೇಲೆ ಮಲಗಿಸಿದ್ದೆ. ಅವಘಡದ ಸಂದರ್ಭದಲ್ಲಿ ಮಗಳನ್ನು ಯಾರಾದರೂ ಒಯ್ದಿರುವ ಸಾಧ್ಯತೆ ಇದೆ’ ಎಂದರು. ‘ಇದನ್ನು ನಾಪತ್ತೆ ಎಂದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ವಿಜಯ್ ರೂಪಾನಿ ಮೃತದೇಹ ಪತ್ತೆ

ಗುಜರಾತ್‌ನ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ ಅವರ ಮೃತದೇಹವನ್ನು ಡಿಎನ್‌ಎ ಪರೀಕ್ಷೆ ಮೂಲಕ ಪತ್ತೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

‘ರೂಪಾನಿ ಡಿಎನ್‌ಎಯು ಅವರ ಕುಟುಂಬಸ್ಥರ ಡಿಎನ್‌ಎ ಜತೆ ತಾಳೆಯಾಗಿದೆ’ ಎಂದು ಗುಜರಾತ್‌ನ ಗೃಹ ಸಚಿವ ಹರ್ಷ ಸಂಘ್ವಿ ಅವರು ಸುದ್ದಿಗಾರರಿಗೆ ತಿಳಿಸಿದರು.

ದೇವಸ್ಥಾನ: 114 ಮುಸ್ಲಿಮರು ಸೇರಿ 167 ಸಿಬ್ಬಂದಿ ವಜಾ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಅಹಲ್ಯಾನಗರ ಜಿಲ್ಲೆಯಲ್ಲಿರುವ ಶನಿ ಶಿಂಗ್ಣಾಪುರ ದೇವಸ್ಥಾನದ ಆಡಳಿತ ಮಂಡಳಿಯು 114 ಜನ ಮುಸ್ಲಿಮರು ಸೇರಿದಂತೆ ತನ್ನ ಒಟ್ಟು 167 ಸಿಬ್ಬಂದಿಯನ್ನು ವಜಾ ಮಾಡಿದೆ. ಶಿಸ್ತುಕ್ರಮ ಉಲ್ಲಂಘನೆ ಹಾಗೂ ಅಕ್ರಮಗಳ ಆರೋಪದಡಿ ಸಿಬ್ಬಂದಿ ಮೇಲೆ ಈ ಕ್ರಮ ಕೈಗೊಂಡಿರುವುದಾಗಿ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

‘ವಜಾಗೊಂಡಿರುವವರು ಸೇವಾ ನಿಯಮಗಳನ್ನು ಉಲ್ಲಂಘಿಸಿರುವುದು ಕಂಡುಬಂದಿತು. ಹೀಗಾಗಿ ಸಂಪೂರ್ಣ ಆಡಳಿತಾತ್ಮಕವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ’ ಎಂದು ಆಡಳಿತ ಮಂಡಳಿಯ ಅಧಿಕಾರಿಯೊಬ್ಬರು ಹೇಳಿದರು.

ದೇವಸ್ಥಾನದ ಆವರಣದಲ್ಲಿ ಮುಸ್ಲಿಂ ಸಿಬ್ಬಂದಿ ಇರುವುದಕ್ಕೆ ಕೆಲ ಹಿಂದೂ ಸಂಘಟನೆಗಳು ಇತ್ತೀಚೆಗೆ ವಿರೋಧ ವ್ಯಕ್ತಪಡಿಸಿದ್ದವು. ‘ಶನಿ ದೇವರ ಪವಿತ್ರ ಸ್ಥಳದಲ್ಲಿ ಹಿಂದೂಯೇತರ ಕೆಲಸಗಾರರು ಇರುವುದು ಸ್ವೀಕಾರಾರ್ಹವಲ್ಲ. ಅವರನ್ನು ಕೆಲಸದಿಂದ ತೆಗೆದು ಹಾಕಬೇಕು’ ಎಂದು ಆಗ್ರಹಿಸಿದ್ದವು.

ಚುಟುಕು ಸುದ್ದಿ

ವಿಮಾನ ಪತನ: ಉನ್ನತ ಮಟ್ಟದ ಸಮಿತಿ ಸಭೆ

ನವದೆಹಲಿ (ಪಿಟಿಐ): ಏರ್ ಇಂಡಿಯಾ ವಿಮಾನ ಪತನದ ತನಿಖೆಗಾಗಿ ಕೇಂದ್ರ ಸರ್ಕಾರ ರಚಿಸಿರುವ ಉನ್ನತ ಮಟ್ಟದ ಸಮಿತಿಯು ಸೋಮವಾರ ಮಧ್ಯಾಹ್ನ ಸಭೆ ಸೇರಲಿದೆ ಎಂದು ಮೂಲಗಳು ತಿಳಿಸಿವೆ.

ಗೃಹ ಕಾರ್ಯದರ್ಶಿ ಅವರ ನೇತೃತ್ವದ ಸಮಿತಿಯು ಮೂರು ತಿಂಗಳಲ್ಲಿ ತನ್ನ ವರದಿಯನ್ನು ಸಲ್ಲಿಸುವ ನಿರೀಕ್ಷೆ ಇದೆ.

ಸಮಿತಿಯು, ‘ಭವಿಷ್ಯದಲ್ಲಿ ಇಂಥ ಅವಘಡಗಳ ತಡೆಗಾಗಿ ಪ್ರಮಾಣೀಕೃತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಜಾರಿ’ ಬಗ್ಗೆ ಹೆಚ್ಚಿನ ಗಮನ ನೀಡಲಿದೆ ಎಂದು ಹೇಳಲಾಗಿದೆ.

‘2026ರ ವೇಳೆಗೆ ಭಾರತ ನಕ್ಸಲ್ ಮುಕ್ತ’

ಲಖನೌ (ಪಿಟಿಐ): ‘ಭಾರತವು 2026ರ ಮಾರ್ಚ್ 31ರ ವೇಳೆಗೆ ಸಂಪೂರ್ಣ ನಕ್ಸಲ್ ಮುಕ್ತವಾಗಲಿದೆ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಪುನರುಚ್ಚರಿಸಿದರು.


ಅಮಿತ್ ಶಾ

ಹೊಸದಾಗಿ ನೇಮಕಗೊಂಡ ಸಿವಿಲ್ ಪೊಲೀಸ್ ಕಾನ್‌ಸ್ಟೆಬಲ್‌ಗಳಿಗೆ ನೇಮಕಾತಿ ಪತ್ರ ವಿತರಿಸಿ ಮಾತನಾಡಿದ ಅವರು, ‘ಪ್ರಧಾನಿ ನರೇಂದ್ರ ಮೋದಿ ಅವರ 11 ವರ್ಷಗಳ ಆಡಳಿತದಲ್ಲಿ ದೇಶದ ಭದ್ರತೆಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಬಿಗಿ ಕ್ರಮಗಳಿಂದ 11 ರಾಜ್ಯಗಳಲ್ಲಿ ಹರಡಿಕೊಂಡಿದ್ದ ನಕ್ಸಲ್ ಚಟುವಟಿಕೆಯು ಈಗ ಮೂರು ಜಿಲ್ಲೆಗಳಿಗೆ ಸೀಮಿತಗೊಂಡಿದೆ. ಇನ್ನೊಂದು ವರ್ಷದಲ್ಲಿ ದೇಶವು ಸಂಪೂರ್ಣ ನಕ್ಸಲ್ ಮುಕ್ತವಾಗಲಿದೆ’ ಎಂದರು.

ಹುಸಿ ಬಾಂಬ್ ಬೆದರಿಕೆ

ಮುಂಬೈ (ಪಿಟಿಐ): ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್‌ನಲ್ಲಿರುವ (ಬಿಕೆಸಿ) ಅಮೆರಿಕದ ಕಾನ್ಸುಲೇಟ್ ಕಚೇರಿಗೆ ಹುಸಿ ಬಾಂಬ್ ಬೆದರಿಕೆ ಕರೆ ಬಂದಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ವ್ಯಕ್ತಿಯೊಬ್ಬ ಶನಿವಾರ ರಾತ್ರಿ 8 ಗಂಟೆ ಸುಮಾರಿಗೆ ಕಾನ್ಸುಲೇಟ್‌ಗೆ ಕರೆ ಮಾಡಿ ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಹಾಕಿದ್ದಾನೆ. ಪೊಲೀಸರು ತಕ್ಷಣವೇ ಕಾರ್ಯಪ್ರವೃತ್ತರಾಗಿ ಸ್ಥಳವನ್ನು ಪರಿಶೀಲಿಸಿದಾಗ ಯಾವುದೇ ಅನುಮಾನಾಸ್ಪದ ವಸ್ತು ಕಂಡು ಬಂದಿಲ್ಲ. ಈ ಕುರಿತು ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಬಿಕೆಸಿಯ ಪೊಲೀಸರು ತಿಳಿಸಿದ್ದಾರೆ.

ಬ್ರಿಟನ್ ಯುದ್ಧ ವಿಮಾನ ತುರ್ತು ಭೂಸ್ಪರ್ಶ

ನವದೆಹಲಿ (ಪಿಟಿಐ): ಇಂಗ್ಲೆಂಡ್‌ನ ಎಫ್–35 ಯುದ್ಧ ವಿಮಾನ ಕೇರಳದ ತಿರುವನಂತಪುರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶನಿವಾರ ರಾತ್ರಿ ತುರ್ತು ಭೂಸ್ಪರ್ಶ ಮಾಡಿದೆ. ಭಾರತೀಯ ವಾಯುಪಡೆ (ಐಎಎಫ್) ಭಾನುವಾರ ಇದನ್ನು ಖಚಿತಪಡಿಸಿದ್ದು, ವಿಮಾನದ ಸುರಕ್ಷತೆ ದೃಷ್ಟಿಯಿಂದ ತುರ್ತು ಭೂಸ್ಪರ್ಶಕ್ಕೆ ಅವಕಾಶ ಮಾಡಿ ಕೊಟ್ಟಿರುವುದಾಗಿ ತಿಳಿಸಿದೆ.

ಮಹಾರಾಷ್ಟ್ರದಲ್ಲಿ 8, ಉತ್ತರ ಪ್ರದೇಶದಲ್ಲಿ 11 ಸಾವು

ಕೇರಳದಲ್ಲಿ ವರುಣನ ಆರ್ಭಟ

ಮುಂಬೈ (ಪಿಟಿಐ): ಮಹಾರಾಷ್ಟ್ರದಲ್ಲಿ ಭಾನುವಾರ ಭಾರಿ ಮಳೆ, ಮಿಂಚಿನ ಹೊಡೆತಕ್ಕೆ ಎಂಟು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೇರಳದ ನಾಲ್ಕು ಜಿಲ್ಲೆಗಳಲ್ಲಿ ಮೂರು ಮಂದಿ ಮಳೆಯ ಪರಿಣಾಮಗಳಿದಾಗಿ ಹಾಗೂ ಉತ್ತರ ಪ್ರದೇಶದಲ್ಲಿ 11 ಮಂದಿ ಸಿಡಿಲು ಬಡಿದು ಮೃತಪಟ್ಟಿದ್ದಾರೆ ಎಂದು ಅಲ್ಲಿನ ಅಧಿಕಾರಿಗಳು ಹೇಳಿದ್ದಾರೆ.

ಕರಾವಳಿ ಜಿಲ್ಲೆಗಳಾದ ರತ್ನಗಿರಿ, ರಾಯಗಢ ಜಿಲ್ಲೆಗಳಿಗೆ ಹವಮಾನ ಇಲಾಖೆಯು ‘ರೆಡ್ ಅಲರ್ಟ್’ ಘೋಷಿಸಿದ್ದು, ಪಾಲ್ಘರ್, ಠಾಣೆ, ಸಿಂಧುದುರ್ಗ, ಪುಣೆಯ ಘಾಟಿ ಪ್ರದೇಶಗಳು, ಸತಾರಾ, ಕೊಲ್ಹಾಪುರ ಜಿಲ್ಲೆಗಳಿಗೆ ‘ಆರೆಂಜ್ ಅಲರ್ಟ್’ ಘೋಷಿಸಲಾಗಿದೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ರಾಜ್ಯ ವಿಪತ್ತು ನಿರ್ವಹಣಾ ಪಡೆಯನ್ನು (ಎಸ್‌ಡಿಆರ್‌ಎಫ್) ರಕ್ಷಣಾ ಕಾರ್ಯಗಳಿಗೆ ನಿಯೋಜಿಸಲಾಗಿದೆ.

ಎಸ್‌ಡಿಆರ್‌ಎಫ್ ಬಿಡುಗಡೆಗೊಳಿಸಿದ ವರದಿ ಪ್ರಕಾರ ಶನಿವಾರ ಬೆಳಿಗ್ಗೆ 11 ಗಂಟೆಯಿಂದ ಭಾನುವಾರ ಬೆಳಿಗ್ಗೆ 11ರವರೆಗೆ, ‘ರತ್ನಗಿರಿ ಜಿಲ್ಲೆಯಲ್ಲಿ ಗರಿಷ್ಠ ಮಳೆಯಾಗಿದ್ದು, (8.81 ಸೆಂ.ಮೀ.) ರಾಯಗಢದಲ್ಲಿ 6.5 ಸೆಂ.ಮೀ., ಸಿಂಧುದುರ್ಗದಲ್ಲಿ 4.3 ಸೆಂ.ಮೀ., ಠಾಣೆಯಲ್ಲಿ 2.9 ಸೆಂ.ಮೀ. ಯವತ್‌ಮಾಲ್ ಜಿಲ್ಲೆಯಲ್ಲಿ 2.7 ಸೆಂ.ಮೀ. ಮಳೆಯಾಗಿದೆ.

ಮಹಾರಾಷ್ಟ್ರದ ವಿವಿಧೆಡೆ ಮಳೆ ಸಂಬಂಧಿ ಅನಾಹುತಗಳಿಂದ 8 ಮಂದಿ ಪ್ರಾಣ ಕಳೆದುಕೊಂಡಿದ್ದು, 10ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಮುಂಬೈ, ಸಿಂಧುದುರ್ಗ, ಧುಲೆ, ನಾಸಿಕ್, ಸಂಭಾಜಿನಗರ, ನಂದೂರ್‌ಬರ್, ಅಮರಾವತಿ ಜಿಲ್ಲೆಗಳಲ್ಲಿ ಮಿಂಚಿನ ಹೊಡೆತದಿಂದ ಇವರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕೊಂಕಣ ತೀರದ ಪ್ರಮುಖ ನದಿಗಳು, ರತ್ನಗಿರಿ ಜಿಲ್ಲೆಯ ಜಗ್‌ಬುಡಿ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ನದಿ ನೀರಿನ ಮಟ್ಟ ಉಕ್ಕಿ ಹರಿದರೆ, ಖೇಡ್, ಅಲ್ಸುರೆ, ಛಿಂಚಘಢ, ಪ್ರಭುವಾಡಿ ಜಿಲ್ಲೆಗಳಲ್ಲಿ ಸಮಸ್ಯೆ ಉಂಟಾಗಲಿದೆ ಎಂದು ವಿಪತ್ತು ನಿರ್ವಹಣಾ ತಂಡವು ವರದಿಯಲ್ಲಿ ತಿಳಿಸಿದೆ.

ಜೂ.19ರವರೆಗೆ ಭಾರಿ ಮಳೆ: (ಅಮರಾವತಿ) ‘ಆಂಧ್ರಪ್ರದೇಶದ ವಿವಿಧೆಡೆಗಳಲ್ಲಿ ಜೂನ್ 19ರವರೆಗೂ ಭಾರಿ ಮಳೆಯಾಗಲಿದೆ’ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.

ಕೇರಳದ 4 ಜಿಲ್ಲೆಗಳಿಗೆ ‘ರೆಡ್ ಅಲರ್ಟ್’: ಕೇರಳದ ಕಾಸರಗೋಡು, ಕಣ್ಣೂರು, ವಯನಾಡ್, ಕೋಯಿಕ್ಕೋಡ್ ಹಾಗೂ ಮಲಪ್ಪುರ ಜಿಲ್ಲೆಗಳಿಗೆ ಸೋಮವಾರದವರೆಗೆ ಹವಾಮಾನ ಇಲಾಖೆಯು ‘ರೆಡ್ ಅಲರ್ಟ್’ ಘೋಷಿಸಿದೆ. ಈ ಜಿಲ್ಲೆಗಳ ವ್ಯಾಪ್ತಿಯಲ್ಲಿ ಎರಡು ದಿನಗಳ ಅವಧಿಯಲ್ಲಿ ಮುಂಗಾರು ತೀವ್ರಗೊಂಡಿದೆ. ಮಳೆಗೆ ಸಂಬಂಧಿಸಿದ ಅವಘಡಗಳಲ್ಲಿ ಮೂವರು ಮೃತಪಟ್ಟಿದ್ದಾರೆಂದು ಅಧಿಕಾರಿಗಳು ತಿಳಿಸಿದ್ದಾರೆ.

ಉತ್ತರ ಪ್ರದೇಶ–11 ಸಾವು: ಸಿಡಿಲು ಬಡಿದು ಉತ್ತರ ಪ್ರದೇಶದ ಪ್ರಯಾಗರಾಜ್, ಸಂಭಲ್, ಗೋರಖಪುರ ಹಾಗೂ ಬಿಜ್ನೌರ್ ಜಿಲ್ಲೆಗಳಲ್ಲಿ 11 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕೊಚ್ಚಿಯಲ್ಲಿ ನದಿ ನೀರು ತುಂಬಿ ಹರಿಯುತ್ತಿರುವುದರಿಂದ ಜಲಾವೃತವಾದ ಪ್ರದೇಶದಲ್ಲಿ ತಾಯಿ–ಮಗಳು ನಡೆದು ಸಾಗಿದರು –ಪಿಟಿಐ ಚಿತ್ರ

ಮುಖ್ಯಾಂಶಗಳು

- ಮುಂಬೈ ಸೇರಿದಂತೆ 8 ಜಿಲ್ಲೆಗಳಲ್ಲಿ ಗರಿಷ್ಠ ಮಳೆ
- 8 ಮಂದಿ ಸಾವು, 10 ಮಂದಿಗೆ ಗಾಯ
- ಅಪಾಯದ ಮಟ್ಟ ಮೀರಿ ಹರಿಯುತ್ತಿರುವ ನದಿಗಳು

ಅಂಬೇಡ್ಕರ್‌ಗೆ ಅವಮಾನ: ಲಾಲೂ ವಿರುದ್ಧ ಜೆಡಿಯು ವಾಗ್ದಾಳಿ

ಪಟ್ನಾ (ಪಿಟಿಐ): ‘ರಾಷ್ಟ್ರೀಯ ಜನತಾದಳದ ಅಧ್ಯಕ್ಷ ಲಾಲೂ ಪ್ರಸಾದ್ ಅವರು ತಮ್ಮ ಪಾದಗಳ ಕೆಳಗಡೆ ಅಂಬೇಡ್ಕರ್ ಅವರ ಭಾವಚಿತ್ರ ಇಡುವ ಮೂಲಕ ಬಾಬಾ ಸಾಹೇಬರಿಗೆ ಅಗೌರವ ತೋರಿದ್ದಾರೆ’ ಎಂದು ನಿತೀಶ್ ಕುಮಾರ್ ನೇತೃತ್ವದ ಜೆಡಿ–ಯು ವಾಗ್ದಾಳಿ ನಡೆಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಜೆಡಿ(ಯು) ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶ್ಯಾಮ್ ರಜಕ್, ‘ಲಾಲೂ ಅವರ ನಡೆಯನ್ನು ಬಿಹಾರದ ಜನತೆ ಎಂದಿಗೂ ಕ್ಷಮಿಸುವುದಿಲ್ಲ. 20 ವರ್ಷಗಳಿಂದ ಬಿಹಾರದಲ್ಲಿ ಆಡಳಿತ ನಡೆಸುತ್ತಿರುವ ನಿತೀಶ್ ಕುಮಾರ್ ಅವರು, ದಲಿತರು ಸೇರಿದಂತೆ ಶೋಷಿತ ಸಮುದಾಯಗಳ ಏಳಿಗೆಗಾಗಿ ಶ್ರಮಿಸುತ್ತಿದ್ದಾರೆ. ಅವರ ನೀತಿಗಳು ತಳಮಟ್ಟದಲ್ಲಿಯೂ ಪರಿಣಾಮ ಬೀರಿವೆ’ ಎಂದರು.

ಶ್ಯಾಮ್ ರಜಕ್ ಕಳೆದ ವರ್ಷವಷ್ಟೇ ಆರ್‌ಜೆಡಿ ತೊರೆದು ಜೆಡಿಯು ಸೇರಿದ್ದರು. ಈ ಹಿಂದೆ ಆರ್‌ಜೆಡಿ ಸರ್ಕಾರದಲ್ಲಿ ಸಚಿವರಾಗಿ ಕೆಲಸ ಮಾಡಿದ್ದರು.

ಲಾಲೂ ಪ್ರಸಾದ್

ಬಿಜೆಪಿ ಪ್ರತಿಭಟನೆ: ಲಾಲೂ ಅವರ ನಡೆಯನ್ನು ಖಂಡಿಸಿ, ಪಕ್ಷದ ಪರಿಶಿಷ್ಟ ಜಾತಿ ಮೋರ್ಚಾದ ಸದಸ್ಯರು ರಾಜ್ಯದ ವಿವಿಧೆಡೆ ಅವರ ಪ್ರತಿಕೃತಿ ದಹಿಸಿದ್ದಾರೆ ಎಂದು ರಾಜ್ಯ ಬಿಜೆಪಿ ಘಟಕ ತಿಳಿಸಿದೆ.

ಆರ್‌ಜೆಡಿ ಸಮರ್ಥನೆ: ವಿವಾದ ಕುರಿತಂತೆ ಪ್ರತಿಕ್ರಿಯಿಸಿರುವ ಆರ್‌ಜೆಡಿ ವಕ್ತಾರ ಶಕ್ತಿ ಯಾದವ್, ‘ವ್ಯಕ್ತಿಯೊಬ್ಬರು ಅಂಬೇಡ್ಕರ್ ಭಾವಚಿತ್ರವನ್ನು ಲಾಲೂ ಅವರ ಮನೆಗೆ ತಂದುಕೊಡುವ ವೇಳೆ ‘ಕ್ಯಾಮೆರಾದ ಕೋನ’ದಿಂದ ಆ ರೀತಿ ಕಾಣುತ್ತಿದೆ. ಆದರೆ, ಭಾವಚಿತ್ರವನ್ನು ಕೈಯಲ್ಲೇ ಹಿಡಿದುಕೊಂಡಿದ್ದು, ಸೋಫಾದ ಮೇಲೆ ಇಡುವಂತೆ ಲಾಲೂ ಅವರು ತಿಳಿಸಿದ್ದಾರೆ. ಅವರು (ಲಾಲು) ಹಲವು ಕಾಯಿಲೆಗಳಿಂದ ಬಳಲುತ್ತಿದ್ದು, ವೈದ್ಯರ ಸಲಹೆ ಮೇರೆಗೆ ಭಾವಚಿತ್ರವನ್ನು ಕೈಯಲ್ಲಿ ಪಡೆಯಲು ಸಾಧ್ಯವಾಗಿಲ್ಲ’ ಎಂದು ತಿಳಿಸಿದ್ದಾರೆ.

ರಾಹುಲ್‌ಗೆ ಸವಾಲು

ಮುಜಾಫರ್‌ಪುರ್ (ಬಿಹಾರ) (ಪಿಟಿಐ): ‘ಡಾ.ಅಂಬೇಡ್ಕರ್ ಅವರ ಭಾವಚಿತ್ರವನ್ನು ಕಾಲ ಬಳಿ ಇಟ್ಟಿದ್ದ ಲಾಲೂ ಪ್ರಸಾದ್ ಅವರನ್ನು ತಾಕತ್ತಿದ್ದರೆ ಟೀಕಿಸಿ’ ಎಂದು ಜನ್ ಸುರಾಜ್ ಪಕ್ಷದ ಸ್ಥಾಪಕ ಪ್ರಶಾಂತ್ ಕಿಶೋರ್, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಸವಾಲು ಹಾಕಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಾಂಗ್ರೆಸ್ ಪಕ್ಷವು ಬಿಹಾರದಲ್ಲಿ ಆರ್‌ಜೆಡಿ ಹಂಗಿನಲ್ಲಿ ಇದ್ದಂತಿದೆ. ಹಿಂದೆ ರಾಜ್ಯ ಕಾಂಗ್ರೆಸ್ ಘಟಕ ಲಾಲೂ ಪ್ರಸಾದ್ ಅವರ ನಿಯಂತ್ರಣದಲ್ಲಿತ್ತು. ಈಗ ಅವರ ಪುತ್ರ ತೇಜಸ್ವಿ ಯಾದವ್ ಆ ನಿಯಂತ್ರಣ ಹೊಂದಿದ್ದಾರೆ’ ಎಂದು ಟೀಕಿಸಿದರು.

ಎನ್‌ಕೌಂಟರ್: ನಾಲ್ವರು ನಕ್ಸಲರ ಹತ್ಯೆ

ಬಾಲಾಘಾಟ್ (ಪಿಟಿಐ): ಮಧ್ಯ ಪ್ರದೇಶದ ಬಾಲಾಘಾಟ್ ಜಿಲ್ಲೆಯಲ್ಲಿ ನಕ್ಸಲ್ ವಿರೋಧಿ ಪಡೆ ನಡೆಸಿದ ಎನ್‌ಕೌಂಟರ್‌ನಲ್ಲಿ ನಾಲ್ವರು ನಕ್ಸಲರು ಮೃತಪಟ್ಟಿದ್ದಾರೆ. ಈ ನಾಲ್ವರನ್ನು ಹುಡುಕಿ ಕೊಟ್ಟವರಿಗೆ ₹56 ಲಕ್ಷ ಬಹುಮಾನ ನೀಡುವುದಾಗಿ ಘೋಷಣೆ ಮಾಡಲಾಗಿತ್ತು.

ಇವರು ಸುಮಾರು 100 ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದರು.

‘ಈ ನಾಲ್ವರಲ್ಲಿ ಮೂವರು ಮಹಿಳೆಯರಿದ್ದರು. ಪಡೆಗಳು ಶನಿವಾರ ಕಾರ್ಯಾಚರಣೆ ನಡೆಸಿದ್ದವು.

ಇವರು ನಿಷೇಧಿತ ಜಿಆರ್‌ಬಿ ನಕ್ಸಲ್ ಸಂಘಟನೆಯ ಪ್ರಾದೇಶಿಕ ಸಮಿತಿಯ ಸದಸ್ಯರಾಗಿದ್ದರು. ನಕ್ಸಲರು ಇದ್ದ ಸ್ಥಳದಿಂದ ಹಲವಾರು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಭಾನುವಾರ ತಿಳಿಸಿದರು.

ಕರ್ನಾಟಕ ಅರಣ್ಯ ಇಲಾಖೆ
ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತ)ರವರ ಕಛೇರಿ
2ನೇ ಮಹಡಿ, ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560003
ಫೋನ್: 080–23365562, 23440467, ಇ–ಮೇಲ್: apccfvigil@gmail.com
ಸಂ.: E.Comp. No.: 1800159 ದಿನಾಂಕ: 12.06.2025
File No: KFD/VIGI/WRLS/6/2025

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತ) ರವರ ಕಛೇರಿ, ಬೆಂಗಳೂರು ರವರು ಅರಣ್ಯ ಇಲಾಖೆಗೆ ಅಗತ್ಯವಿರುವ ನಿಸ್ತಂತು ಉಪಕರಣಗಳ ಬಿಡಿಭಾಗಗಳನ್ನು ಖರೀದಿಸುವ ಸಲುವಾಗಿ ಕರ್ನಾಟಕ ಸರ್ಕಾರದ e-Procurement Portal (https://kppp.karnataka.gov.in) ಮುಖಾಂತರ ಟೆಂಡರ್ ಆಹ್ವಾನಿಸಿರುತ್ತಾರೆ. ಈ ಟೆಂಡರ್‌ನಲ್ಲಿ ಭಾಗವಹಿಸಲು ಸಿದ್ದರಿರುವ ನಿರೀಕ್ಷಿತ ಪೂರೈಕೆದಾರರು ಅಗತ್ಯವಾಗಿ ಮೇಲೆ ತಿಳಿಸಿದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು.

1) ಟೆಂಡರ್ ಅಧಿಸೂಚನೆ ಸಂಖ್ಯೆ : **KFD/2025-26/IND0256**. 2) ಟೆಂಡರ್ ಪೂರ್ವಬಾವಿ ಸಭೆಯ **ದಿನಾಂಕ ಮತ್ತು ಸಮಯ: 20.06.2025ರ ಬೆಳಿಗ್ಗೆ 11:30 ಗಂಟೆಗೆ.** 3) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ ಮತ್ತು ಸಮಯ: 30.06.2025ರ ಸಂಜೆ 4:00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ ಮತ್ತು ಸಮಯ: 02.07.2025ರ ಬೆಳಿಗ್ಗೆ 11:30 ಗಂಟೆಗೆ.** 5) ವಾಣಿಜ್ಯ ಬಿಡ್ ತೆರೆಯುವ ತಾತ್ಕಾಲಿಕ **ದಿನಾಂಕ ಮತ್ತು ಸಮಯ: 04.07.2025ರ ಬೆಳಿಗ್ಗೆ 11:30 ಗಂಟೆಗೆ.** 6) ಟೆಂಡರ್ ಪೂರ್ವಬಾವಿ ಸಭೆ ಮತ್ತು ಟೆಂಡರ್‌ಗಳನ್ನು ತೆರೆಯುವುದು ಹಾಗೂ ಸಂವಹನದ ವಿಳಾಸ : **ಮೇಲ್ಕಂಡ ವಿಳಾಸ.**

ಈ ಟೆಂಡರ್ ಭಾಗವಹಿಸಲು ಸಿದ್ದರಿರುವ ನಿರೀಕ್ಷಿತ ಪೂರೈಕೆದಾರರು ವೆಬ್‌ಸೈಟ್: ಗೆ ಭೇಟಿ ನೀಡುವ ಮೂಲಕ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಜಾಗೃತ) ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ವಾಸಾಸಂಇ/ವಾ.ಪ್ರ/ಜೆಎ/1235/2025–26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಕರುಣೆಯ ಸ್ಪರ್ಶದಿಂದ ಮಾತ್ರ ನಮ್ಮ ನೋವುಗಳು ಮತ್ತು ಗಾಯಗಳು ಮಾಯಲು ಸಾಧ್ಯ.

–ಗೌತಮ ಬುದ್ಧ

ಸಂಪಾದಕೀಯ

ಜಾತಿವಾರು ಸಮೀಕ್ಷೆ ಪಾರದರ್ಶಕವಾಗಿ ನಡೆಯಲಿ

ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವು ಹತ್ತು ವರ್ಷಗಳ ಹಿಂದೆ ನಡೆಸಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯು ಮಾನ್ಯತೆ ಕಳೆದುಕೊಂಡಿದೆ ಎಂಬ ನಿರ್ಣಯಕ್ಕೆ ಬಂದಿರುವ ರಾಜ್ಯ ಸರ್ಕಾರವು ಹೊಸದಾಗಿ 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ' ನಡೆಸಲು ತೀರ್ಮಾನಿಸಿದೆ. ಆಯೋಗದ ನೇತೃತ್ವದಲ್ಲೇ 90 ದಿನಗಳ ಕಾಲಮಿತಿಯಲ್ಲಿ ಸಮೀಕ್ಷೆ ನಡೆಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಸರ್ಕಾರದ ಆದೇಶದ ಅನ್ವಯ ಆಯೋಗವು ಜಾತಿ ಜನಗಣತಿ ಎಂದೇ ಹೆಸರಾಗಿರುವ ಈ ಸಮೀಕ್ಷೆಯನ್ನು 2015ರಲ್ಲಿ ನಡೆಸಿತ್ತು. ಪ್ರತಿ ಮನೆಗೂ ಭೇಟಿ ನೀಡಿ 54 ಪ್ರಶ್ನೆಗಳನ್ನು ಮುಂದಿಟ್ಟು ಮಾಹಿತಿ ಸಂಗ್ರಹಿಸಲಾಗಿದೆ ಎಂದು ಸರ್ಕಾರ ಹೇಳಿತ್ತು. ರಾಜ್ಯದ ಎರಡು ಪ್ರಬಲ ಸಮುದಾಯಗಳಾದ ಒಕ್ಕಲಿಗ ಮತ್ತು ಲಿಂಗಾಯತ ಮುಖಂಡರು ಸಮೀಕ್ಷೆ ಬಗ್ಗೆ ಆಕ್ಷೇಪ ಎತ್ತಿದ್ದರು. 2018ರ ಆರಂಭದಲ್ಲಿ ವರದಿ ತಯಾರಾಗಿತ್ತು. ಚುನಾವಣೆ ಬಂದಿದ್ದರಿಂದಾಗಿ ಅದು ನನೆಗುದಿಗೆ ಬಿದ್ದಿತು. ಯಾವುದೇ ಸಮೀಕ್ಷೆಯ ವರದಿಯು 10 ವರ್ಷಗಳ ಬಳಿಕ ಪ್ರಸ್ತುತತೆ ಕಳೆದುಕೊಳ್ಳಬಹುದು ಎಂಬ ವಾದವನ್ನು ಒಪ್ಪಬಹುದಾದರೂ ವರದಿಯನ್ನು ಅಷ್ಟೊಂದು ದೀರ್ಘ ಅವಧಿಗೆ ಅತಂತ್ರ ಸ್ಥಿತಿಯಲ್ಲಿ ಇರಿಸಿದ್ದು ಜವಾಬ್ದಾರಿಯುತ ನಡೆಯಾಗಿ ಕಾಣುವುದಿಲ್ಲ. ಈ ಅವಧಿಯಲ್ಲಿ ಜೆಡಿಎಸ್ ಪಕ್ಷದ ಎಚ್.ಡಿ. ಕುಮಾರಸ್ವಾಮಿ, ಬಿಜೆಪಿಯ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಕಾಂಗ್ರೆಸ್‌ನ ಸಿದ್ದರಾಮಯ್ಯ ಅವರು ಸರ್ಕಾರವನ್ನು ಮುನ್ನಡೆಸಿದ್ದಾರೆ. ವರದಿಯು ಪ್ರಸ್ತುತತೆ ಕಳೆದುಕೊಂಡಿದ್ದರೆ ಅದಕ್ಕೆ ಇವರೆಲ್ಲ ಉತ್ತರದಾಯಿ ಆಗಬೇಕಾಗುತ್ತದೆ.



ಸಮುದಾಯಗಳ ಒಳಿತಿನ ಉದ್ದೇಶದಿಂದ ನಡೆಯುವ ಈ ದತ್ತಾಂಶ ಸಂಗ್ರಹದ ವಿಚಾರದಲ್ಲಿ ಕೆಟ್ಟ ರಾಜಕೀಯ ಮಾಡುವುದು ತರವಲ್ಲ

₹165 ಕೋಟಿ ವಿನಿಯೋಗಿಸಿ ನಡೆಸಲಾದ ಸಮೀಕ್ಷೆಯ ವರದಿಯನ್ನು ಕಪಾಟಿನಲ್ಲಿ ಮುಚ್ಚಿಡುವಂತಹ ಅಗತ್ಯ ಇರಲಿಲ್ಲ. ಸಚಿವ ಸಂಪುಟ ಸಭೆಗೆ ತಂದು ಚರ್ಚಿಸಬೇಕಿತ್ತು. ವರದಿಯನ್ನು ಒಪ್ಪಬಹುದಿತ್ತು, ಸರಿ ಎನಿಸದಿದ್ದರೆ ತಿರಸ್ಕರಿಸಬಹುದಿತ್ತು ಅಥವಾ ಪರಿಷ್ಕರಣೆಗೆ ಸೂಚಿಸುವ ಅವಕಾಶ ಇತ್ತು. ಎಚ್.ಕಾಂತರಾಜ ಆಯೋಗದ ವರದಿಯನ್ನು ಜಾರಿ ಮಾಡಿಯೇ ಸಿದ್ಧ ಎಂದು ಕಾಂಗ್ರೆಸ್ ನಾಯಕರು 2023ರ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಘೋಷಿಸಿದ್ದರು. ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅಧಿಕಾರ ಹಿಡಿದ ಬಳಿಕ, ವರದಿ ಮಂಡನೆಯ ಪರ–ವಿರೋಧದ ಕೂಗು ಜೋರಾಯಿತು. ಅಷ್ಟರಲ್ಲೇ, 2024ರ ಲೋಕಸಭೆ ಚುನಾವಣೆ ಎದುರಾಯಿತು. ಅದು ಪೂರ್ಣಗೊಂಡ ಬಳಿಕವಾದರೂ ವರದಿಯ ಬಗ್ಗೆ ಸ್ಪಷ್ಟ ತೀರ್ಮಾನ ಕೈಗೊಳ್ಳಬಹುದಿತ್ತು. ಅದೂ ಆಗಲಿಲ್ಲ. ಪರ–ವಿರೋಧದ ಮಾತುಗಳು ಪುನಃ ಬಿರುಸು ಪಡೆದವು. ಈ ಮಧ್ಯೆಯೇ, ಮುಚ್ಚಿದ ಲಕೋಟೆಯಲ್ಲಿದ್ದ ವರದಿಯನ್ನು ಸಚಿವ ಸಂಪುಟದ ಮುಂದೆ ತೆರೆದು, ಅದರ ಪ್ರತಿಗಳನ್ನು ಸಚಿವರಿಗೆ ನೀಡಲಾಯಿತು. ಇದರ ಚರ್ಚೆಗಾಗಿಯೇ ವಿಶೇಷ ಸಂಪುಟ ಸಭೆಯೂ ನಿಗದಿಯಾಗಿತ್ತು. ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ದೆಹಲಿಗೆ ಕರೆಸಿಕೊಂಡ ಕಾಂಗ್ರೆಸ್ ಪಕ್ಷದ ವರಿಷ್ಠರು, ಮರು ಸಮೀಕ್ಷೆ ನಡೆಸಲು ನಿರ್ದೇಶನ ನೀಡಿದರು. ಇದರ ಹಿಂದಿನ ಬೆಳವಣಿಗೆಗಳನ್ನು ಗಮನಿಸಿದರೆ, ಪ್ರಭಾವಿ ಜಾತಿಗಳ ಒತ್ತಡಕ್ಕೆ ಪಕ್ಷ ಮಣೆ ಹಾಕಿರಬಹುದು ಎಂಬ ಅನುಮಾನ ಮೂಡುವುದು ಸಹಜ.

'ಮರು ಸಮೀಕ್ಷೆಗೆ ತೀರ್ಮಾನ ಕೈಗೊಂಡಿರುವುದು ಹೈಕಮಾಂಡ್; ನಾನಲ್ಲ' ಎಂದು ಮೊದಲು ಹೇಳಿದ್ದ ಸಿದ್ದರಾಮಯ್ಯ, ಸಚಿವ ಸಂಪುಟ ಸಭೆಯ ಬಳಿಕ '10 ವರ್ಷಗಳ ಹಿಂದೆ ನಡೆಸಿದ್ದ ಸಮೀಕ್ಷೆಯ ವರದಿಯು ಹಿಂದುಳಿದ ವರ್ಗಗಳ ಆಯೋಗದ ಕಾಯ್ದೆಯ ಅನುಸಾರ ಮಾನ್ಯತೆ ಕಳೆದುಕೊಂಡಿರುವುದರಿಂದ ಹೊಸ ಸಮೀಕ್ಷೆ ನಡೆಸಲಾಗುವುದು. ಇದಕ್ಕೆ ಹೈಕಮಾಂಡ್ ಮಾರ್ಗದರ್ಶನವೂ ಇದೆ' ಎಂದರು. ಯಾವುದೇ ಅಪಸ್ವರ ಹಾಗೂ ಸಂಶಯಗಳಿಗೆ ಕಿಂಚಿತ್ತೂ ಆಸ್ಪದ ಕೊಡದಂತೆ ಪೂರ್ವಸಿದ್ಧತೆ ನಡೆಸಿ, ಸಮೀಕ್ಷೆ ನಡೆಸಬೇಕಾದ ಹೊಣೆ ಸರ್ಕಾರದ ಮೇಲಿದೆ. ಜಾತಿ ಸಂಘಟನೆಗಳ ಪ್ರತಿನಿಧಿಗಳು, ಜನ ಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಸಮೀಕ್ಷೆ ಆರಂಭಿಸುವುದು ಸೂಕ್ತ. ತಂತ್ರಜ್ಞಾನದ ಬಳಕೆ, ಆಧಾರ್ ಸಂಖ್ಯೆಯ ನೆರವು ಪಡೆದರೆ ನಿಖರ ದತ್ತಾಂಶವುಳ್ಳ ವರದಿ ಸಿದ್ಧಪಡಿಸಬಹುದು. ಸಮೀಕ್ಷೆಗೆ ಕಾಲಮಿತಿ ನಿಗದಿ ಮಾಡಿದಂತೆ, ವರದಿಯ ಬಗ್ಗೆ ಕ್ರಮ ಕೈಗೊಳ್ಳುವುದಕ್ಕೂ ಕಾಲಮಿತಿ ನಿಗದಿ ಮಾಡುವುದು ಒಳ್ಳೆಯದು. ಸಮುದಾಯಗಳ ಒಳಿತಿನ ಉದ್ದೇಶದಿಂದ ನಡೆಯುವ ಈ ದತ್ತಾಂಶ ಸಂಗ್ರಹದ ವಿಚಾರದಲ್ಲಿ ಕೆಟ್ಟ ರಾಜಕೀಯ ಮಾಡುವುದು ತರವಲ್ಲ.

ಜಾಲಡಾ

ಪ್ರಶ್ನಿಸುವ ಕರ್ತವ್ಯ

...ಪ್ರಶ್ನೆಗೆ ಉತ್ತರಿಸದೆ ನಿರಾಕರಿಸುವವನು ಹಿಂದೂ ಆಗಲು ಸಾಧ್ಯವಿಲ್ಲ. ಹಿಂದೂ ಧರ್ಮಕ್ಕೆ ತಾನು ಪ್ರಶ್ನೆಗೊಳಗಾಗುವುದು ನಿಷಿದ್ಧ ಅಲ್ಲ. ಭಗವಂತನನ್ನು ಅರ್ಜುನ ಪ್ರಶ್ನಿಸಿದ್ದರ ಫಲವಾಗಿಯೇ ಭಗವದ್ಗೀತೆಯ ರಚನೆಯಾಗಿದೆ ಎನ್ನುವುದನ್ನು ಮರೆತ ಹಿಂದೂಗಳನ್ನು ಪ್ರಶ್ನೆ ಮಾಡುವುದು ಧಾರ್ಮಿಕ ಕರ್ತವ್ಯವೂ ಹೌದು.

ಅರವಿಂದ ಚೊಕ್ಕಾಡಿ, ಲೇಖಕ
ಫೇಸ್‌ಬುಕ್‌ನಿಂದ

ಕಿಡಿನುಡಿ

ಪುಣೆ ಜಿಲ್ಲೆಯ ತಲೆಗಾವ್ ಸಮೀಪ ಸೇತುವೆ ಕುಸಿದು ಕೆಲವರು ಇಂದ್ರಾಯಣಿ ನದಿಯಲ್ಲಿ ಕೊಚ್ಚಿ ಹೋಗಿದ್ದಾರೆ. ಅವರಿಗಾಗಿ ಪ್ರಾರ್ಥಿಸೋಣ. ಹೊಣೆಗಾರಿಕೆಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ದಯಮಾಡಿ ಯಾವುದೇ ಪ್ರಶ್ನೆ ಕೇಳಬೇಡಿ. 'ಅಪಘಾತಗಳು ಸಂಭವಿಸುತ್ತವೆ ಮತ್ತು ಯಾರೊಬ್ಬರಿಗೂ ಅವುಗಳನ್ನು ತಡೆಯಲಾಗದು' ಎಂದು ಅಮಿತ್ ಶಾ ಈಗಾಗಲೇ ಹೇಳಿದ್ದಾರೆ.

ವೀಣಾ ಜೈನ್

25 ವರ್ಷಗಳ ಹಿಂದೆ

ಶುಕ್ರವಾರ, 16-6-2000

- **ಧಾರವಾಡ ಸಿವಿಲ್ ಕೋರ್ಟ್‌ಗೆ ಬೆಂಕಿ: ಪ್ರತ್ಯೇಕ ರಾಜ್ಯಕ್ಕೆ ಆಗ್ರಹ**

ಧಾರವಾಡ, ಜೂನ್ 15– ಉತ್ತರ ಕರ್ನಾಟಕ ಹೈಕೋರ್ಟ್ ಪೀಠದ ಬೇಡಿಕೆ ತಿರಸ್ಕೃತವಾಗಿರುವುದರ ವಿರುದ್ಧ ಪ್ರತಿಭಟನೆಯಾಗಿ ಇಲ್ಲಿಯ ಸಿವಿಲ್ ನ್ಯಾಯಾಲಯದ ಕಟ್ಟಡಗಳಿಗೆ ಗುಂಪೊಂದರಿಂದ ಬೆಂಕಿ, ರಸ್ತೆ ತಡೆ ನಡೆಸಿದ ವಕೀಲರ ಬಂಧನದಿಂದ ಈ ಬೇಡಿಕೆಗಾಗಿ ಮತ್ತೆ ಚಳವಳಿ ಆರಂಭಗೊಂಡಂತಾಗಿದೆ.

ಪ್ರತ್ಯೇಕ ಉತ್ತರ ಕರ್ನಾಟಕ ಬೇಕೆಂಬ ಬೇಡಿಕೆಗೆ ಆಗ್ರಹಿಸಿ ರಸ್ತೆ ತಡೆ ಚಳವಳಿ ನಡೆಸಿದ ವಕೀಲರನ್ನು ಪೊಲೀಸರು ಬಂಧಿಸಿ ಬಿಡುಗಡೆ ಮಾಡಿದ್ದಾರೆ.ರಾಜ್ಯ ಹೈಕೋರ್ಟ್ ನಿರ್ಧಾರ ಹಾಗೂ ಹೋರಾಟದ ರೂಪು–ರೇಷೆ ಚರ್ಚಿಸಲು ಧಾರವಾಡ ವಕೀಲರ ಸಂಘ ನಾಳೆ ಸಭೆ ಕರೆದಿದೆ.

- **ಮೋಸದಾಟ: ಅಜರುದ್ದೀನ್ ಹೆಸರು ಬಯಲಿಗೆ**

ಕೇಪ್‌ಟೌನ್, ಜೂನ್ 15– 'ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮಹಮದ್ ಅಜರುದ್ದೀನ್ 1996ರ ಸರಣಿಯಲ್ಲಿ ಬುಕ್ ಮೇಕರ್ ಒಬ್ಬನನ್ನು ನನಗೆ ಪರಿಚಯ ಮಾಡಿಸಿದ್ದರು' ಎಂದು ದಕ್ಷಿಣ ಆಫ್ರಿಕಾ ತಂಡದ ಉಚ್ಚಾಟಿತ ನಾಯಕ ಹ್ಯಾನ್ಸಿ ಕ್ರೋನಿಯೆ ಮೋಸದಾಟದ ತನಿಖೆ ನಡೆಸುತ್ತಿರುವ ನ್ಯಾಯಮೂರ್ತಿ ಎಡ್ವರ್ಡ್ ಕಿಂಗ್ ಆಯೋಗದ ಮುಂದೆ ಇಂದು ಹೇಳಿಕೆ ನೀಡಿದ್ದಾರೆ.

75 ವರ್ಷಗಳ ಹಿಂದೆ

ಶುಕ್ರವಾರ, 16-6-1950

- **ಹಿಂಸಾತ್ಮಕ ಹಾದಿ ಬಿಟ್ಟು ಕಮ್ಯುನಿಸ್ಟರ ನವಪಥಕ್ರಮಣ?**

ಮುಂಬಯಿ, ಜೂನ್, 15– ಭಾರತ ಕಮ್ಯುನಿಸ್ಟ್ ಪಕ್ಷದವರು ತಮ್ಮ ಪ್ರಸ್ತುತ 'ವಿಧ್ವಂಸಕಾರಕ, ಹಿಂಸಾತ್ಮಕ ಧೋರಣೆ ಬದಲಾಯಿಸಿ, ಸಮಾಜವಾದದ ನೀತಿಯನ್ನು ಚೀನಿ ನಾಯಕ ಮಾವೋ ತ್ಸೆ ತುಂಗರ ರೀತಿಗೆ ಹೆಚ್ಚು ಹೊಂದಿಕೊಂಡಂತೆ ಅನುಸರಿಸುವರೆಂದು ಮುಂಬಯಿಯಲ್ಲಿ ವ್ಯಕ್ತಪಟ್ಟಿರುವ ಚಿಹ್ನೆಗಳಿಂದ ತಿಳಿದು ಬಂದಿದೆ.

ಪಕ್ಷದ ನೀತಿ ನಿರ್ಮಾಪಕ ಸಂಸ್ಥೆಯಾದ 'ಪೊಲಿಟ್ ಬ್ಯೂರೋ' ಮುಂದಿನ ತಿಂಗಳು ಮಧ್ಯ ಭಾರತದಲ್ಲಿ ಸಂಧಿಸಿದಾಗ ಹೊಸ ನಾಯಕತ್ವ ತಲೆದೋರುವ ಸಂಭವವಿದೆ.

- **ಪಂಡಿತ್ ನೆಹರೂಗೆ ಚಿನ್ನದ ಕತ್ತಿ**

ಜಕಾರ್ತ, ಜೂ. 15– ಬಾಲಿ ದ್ವೀಪದ ಮುಖ್ಯಸ್ಥರು, ಇಂದು ಬೆಳಿಗ್ಗೆ ಭಾರತ ಪ್ರಧಾನಿ ಪಂಡಿತ್ ನೆಹರೂರವರಿಗೆ ಇಂಡೋನೇಷಿಯನ್ ಸ್ವಾತಂತ್ರ್ಯದಲ್ಲಿ ಭಾರತ ವಹಿಸಿದ ಪ್ರಯತ್ನಗಳ 'ಕೃತಜ್ಞತೆ ಹಾಗೂ ಮೆಚ್ಚುಗೆಯ ಅಭಿಜ್ಞಾನವಾಗಿ' ಚಿನ್ನದ ಕತ್ತಿಯೊಂದನ್ನು ಕೊಟ್ಟರು.

ಬಾಲ್ಯವಿವಾಹ: ಅರಿವೇ ಔಷಧಿ

ವಿಶ್ಲೇಷಣೆ

ಕವಿತ ಬಿ.ಟಿ.

ಆಧುನಿಕತೆಗೆ ತೆರೆದುಕೊಳ್ಳುವುದರೊಂದಿಗೆ ಅಭಿವೃದ್ಧಿಯತ್ತ ದೇಶ ದಾಪುಗಾಲು ಹಾಕುತ್ತಿರುವ ಸಂದರ್ಭದಲ್ಲಿ, ನಗರ ಪ್ರದೇಶದ ಮಹಿಳೆಯರ ಜೀವನ ಮೇಲ್ನೋಟಕ್ಕೆ ಸುಖಮಯವಾಗಿದೆ ಎನಿಸುವಂತಿದೆ. ಆದರೆ, ಗ್ರಾಮೀಣ ಭಾಗದ ಮಹಿಳೆಯರ ಜೀವನಮಟ್ಟ ಹಾಗೂ ಹೆಣ್ಣು ಮಕ್ಕಳ ಬಗೆಗಿನ ಮನೋಭಾವದಲ್ಲಿ ಹೆಚ್ಚಿನ ಬದಲಾವಣೆಯೇನೂ ಕಂಡುಬರುತ್ತಿಲ್ಲ.

ದೇಶದ ಅಸಂಖ್ಯ ಕುಟುಂಬಗಳಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಮಹಿಳೆ ಮತ್ತು ಹೆಣ್ಣು ಮಕ್ಕಳು ದಿನನಿತ್ಯದ ಬದುಕಿನ ಸಣ್ಣ ಸಣ್ಣ ಸೌಲಭ್ಯಗಳಿಗಾಗಿ ನಿರಂತರ ಹೋರಾಟ ನಡೆಸುವ ಪರಿಸ್ಥಿತಿ ಮುಂದುವರಿದೇ ಇದೆ. ಕಿಶೋರಾವಸ್ಥೆಗೆ ಕಾಲಿಟ್ಟ ಬಾಲಕಿಯನ್ನು ಈಗಲೂ 'ಸೆರಗಲ್ಲಿ ಕಟ್ಟಿದ ಕೆಂಡ' ಎಂದು ಭಾವಿಸುವ ಮನೋಭಾವ ವ್ಯಾಪಕವಾಗಿಯೇ ಇದೆ. 'ಜವಾಬ್ದಾರಿ ಕಳೆದುಕೊಳ್ಳುವ' ಮನೋಭಾವದಲ್ಲಿ ಅಪ್ರಾಪ್ತ ವಯಸ್ಸಿನ ತಮ್ಮ ಹೆಣ್ಣು ಮಕ್ಕಳನ್ನು ಮದುವೆ ಮಾಡಿ ಕಳುಹಿಸಲು ಅನೇಕ ಪೋಷಕರು ತುದಿಗಾಲಲ್ಲಿ ನಿಂತಿರುತ್ತಾರೆ. ಈ ಪರಿಸ್ಥಿತಿ ರಾಜ್ಯದಲ್ಲೂ ಇದೆ. ಹದಿನೆಂಟು ವರ್ಷ ತುಂಬುವ ಮುನ್ನವೇ ಹೆಣ್ಣು ಮಕ್ಕಳಿಗೆ ಮದುವೆ ಮಾಡುವುದು ರಾಜ್ಯದ ವಿವಿಧ ಭಾಗಗಳಲ್ಲಿ ನಡೆಯುತ್ತಲೇ ಇದೆ.

ಓದಿನಲ್ಲಿ ಆಸಕ್ತಿ ಇಲ್ಲದ ಕಾರಣಕ್ಕಾಗಿ ಬಾಲಕಿಯೊಬ್ಬಳು ಶಾಲೆ ಬಿಟ್ಟು ಮನೆಯಲ್ಲಿದ್ದಳು. ಹದಿನಾರು ವರ್ಷ ವಯಸ್ಸಿನ ಆಕೆಗೆ, ದೂರದ ಸಂಬಂಧಿಯಾದ 27 ವರ್ಷ ವಯಸ್ಸಿನ ಯುವಕನೊಂದಿಗೆ ಮದುವೆ ನಡೆಯಿತು. 'ನನಗೆ ಎದೆ ನೋವಿದೆ. ಆಸ್ಪತ್ರೆಗೂ ಸೇರಿದ್ದೆ. ನನಗೇನಾದರೂ ಹೆಚ್ಚು–ಕಡಿಮೆಯಾದರೆ ಮನೇಲಿ ಹೆಣ್ಣು ದಿಕ್ಕಿಲ್ಲ. ಮಗಳನ್ನು ಕೊಡು, ಚೆನ್ನಾಗಿ ನೋಡಿಕೊಳ್ತೀವಿ' ಎನ್ನುವ ಹುಡುಗನ ತಾಯಿಯ ಮಾತಿಗೆ ಬಾಲಕಿಯ ತಾಯಿ ಕರಗಿದ್ದಳು. ಮಗಳ ಬಾಲ್ಯವಿವಾಹಕ್ಕೆ ಒಪ್ಪಿಗೆ ನೀಡಿದ ತಾಯಿಯ ಮದುವೆಯೂ ಆಕೆಯ ಹದಿನೈದನೇ ವಯಸ್ಸಿನಲ್ಲಿ ನಡೆದಿತ್ತು. ಊರೆಲ್ಲ ಮಲಗಿರುವ ಮಧ್ಯರಾತ್ರಿ 2 ಗಂಟೆ ಸಮಯದಲ್ಲಿ ಮದುವೆ ನಡೆಯಿತು. ಆದರೆ, ಮೊಬೈಲ್ ಫೋನ್‌ನಲ್ಲಿ ತೆಗೆದ ಮದುವೆಯ ಫೋಟೊಗಳು ಒಬ್ಬರಿಂದ ಒಬ್ಬರಿಗೆ ರವಾನೆಯಾಗಿ, ಅಧಿಕಾರಿಗಳಿಗೂ ತಲುಪಿದವು; ಪ್ರಕರಣ ದಾಖಲಾಯಿತು. ಪ್ರಸ್ತುತ, ಮುಂದಿನ ಶೈಕ್ಷಣಿಕ ವರ್ಷದಲ್ಲಿ ಮಗಳನ್ನು 10ನೇ ತರಗತಿಗೆ ದಾಖಲಿಸಲು ಪೋಷಕರು ಒಪ್ಪಿಕೊಂಡಿದ್ದಾರೆ.

15 ವರ್ಷ 7 ತಿಂಗಳು ವಯಸ್ಸಿನ ಬಾಲಕಿಯೊಬ್ಬಳು ತನ್ನ ಮದುವೆಗೆ ನಡೆದ ಸಿದ್ಧತೆಯ ಬಗ್ಗೆ ಮಕ್ಕಳ ರಕ್ಷಣಾ ಘಟಕ ಸಹಾಯವಾಣಿ 1098ಕ್ಕೆ ದೂರು ನೀಡಿದಳು. ಸ್ಥಳೀಯ ಮಕ್ಕಳ ರಕ್ಷಣಾ ಅಧಿಕಾರಿಗಳು ಬಾಲಕಿಯ ಮನೆಗೆ ಭೇಟಿ ನೀಡಿದಾಗ, 'ಮದುವೆಗೆ ಯಾವ ಸಿದ್ಧತೆಯೂ ನಡೆದಿಲ್ಲ' ಎನ್ನುವ ಉತ್ತರ ಎದುರಾಯಿತು. ಪೋಷಕರ ಉತ್ತರದಿಂದ ಸಮಾಧಾನಗೊಳ್ಳದ ಶಿಶು ಅಭಿವೃದ್ಧಿ ಮೇಲ್ವಿಚಾರಕರು, ಬಾಲ್ಯವಿವಾಹ ಮಾಡದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ. ಬಾಲ್ಯವಿವಾಹ ಅಪರಾಧ ಎಂದು ಬಾಲಕಿಯ ತಂದೆ–ತಾಯಿಗೆ ಮನದಟ್ಟು ಮಾಡಿದ್ದಾರೆ. ಅಧಿಕಾರಿಗಳ ಬುದ್ಧಿಮಾತುಗಳನ್ನು ಒಪ್ಪಿದಂತೆ ನಟಿಸಿರುವ ಪೋಷಕರು, ಸಂಬಂಧಿಕರ ಊರಿನ ದೇವಾಲಯದಲ್ಲಿ ಬಾಲಕಿಯ ಮದುವೆ ಮಾಡಿದ್ದಾರೆ. ಪ್ರಸ್ತುತ ಮೊಕದ್ದಮೆ ದಾಖಲಾಗಿದೆ.

ಮೇಲಿನ ಪ್ರಕರಣಗಳಂತಹ ಹಲವು ಪ್ರಕರಣಗಳು ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗುತ್ತಿವೆ.

ಬಾಲಕಿಯ ವಯಸ್ಸು 18 ವರ್ಷ ಹಾಗೂ ಬಾಲಕನ ವಯಸ್ಸು 21 ವರ್ಷ ತುಂಬದೇ ಇರುವ ಅಥವಾ ಇಬ್ಬರಲ್ಲಿ ಒಬ್ಬರು ಅಪ್ರಾಪ್ತ ವಯಸ್ಸಿನವರಿದ್ದಾಗ ನಡೆಯುವ ವಿವಾಹ 'ಬಾಲ್ಯವಿವಾಹ' ಎನಿಸಿಕೊಳ್ಳುತ್ತದೆ. ಭಾರತ ಸರ್ಕಾರ ಬಾಲ್ಯವಿವಾಹವನ್ನು ನಿಷೇಧಿಸಿ 2006ರಲ್ಲಿ ಕಾಯ್ದೆ ಜಾರಿಗೊಳಿಸಿದೆ. 'ಬಾಲ್ಯವಿವಾಹ ನಿಷೇಧ ಕರ್ನಾಟಕ ತಿದ್ದುಪಡಿ ಕಾಯ್ದೆ–2016' ಅನ್ನು ಜಾರಿಗೆ ತಂದಿರುವ ರಾಜ್ಯ ಸರ್ಕಾರವು ಬಾಲ್ಯವಿವಾಹವನ್ನು ಶಿಕ್ಷಾರ್ಹ ಅಪರಾಧವನ್ನಾಗಿಸಿದೆ. ಇಷ್ಟಾದರೂ ಕಾನೂನಿನ ಕಣ್ಣಿಗೆ ಮಣ್ಣೆರಚುವ ಘಟನೆಗಳು ನಡೆಯುತ್ತಲೇ ಇವೆ. ಬಾಲ್ಯವಿವಾಹ ಅಪರಾಧಕ್ಕೆ 2 ವರ್ಷಗಳವರೆಗಿನ ಕಠಿಣ ಜೈಲು ಶಿಕ್ಷೆ ಅಥವಾ 1 ಲಕ್ಷ ರೂಪಾಯಿವರೆಗೆ ದಂಡ ವಿಧಿಸಬಹುದಾಗಿದೆ. ಜೈಲುವಾಸ ಹಾಗೂ ದಂಡ ಎರಡನ್ನೂ ವಿಧಿಸಬಹುದಾಗಿದೆ.

ಬಾಲ್ಯವಿವಾಹ ನಡೆಸಲು ಹಲವು ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾದುದು, ಹೆಣ್ಣುಮಕ್ಕಳ ಶಿಕ್ಷಣದ ಬಗೆಗಿನ ಅಸಡ್ಡೆ. ಹಲವಾರು ಯೋಜನೆಗಳ ಹೊರತಾಗಿಯೂ ಗುಣಮಟ್ಟದ ಶಿಕ್ಷಣವನ್ನು ಗ್ರಾಮೀಣ ಭಾಗದ ಬಾಲೆಯರಿಗೆ ಒದಗಿಸುವಲ್ಲಿ ಸರ್ಕಾರ ಯಶಸ್ವಿಯಾಗಿಲ್ಲ. ಶಿಕ್ಷಣಾಭ್ಯಾಸದ ನಡುವೆಯೇ ಶಾಲೆಯಿಂದ ಹೊರಗುಳಿಯುವ ಹೆಣ್ಣು ಮಕ್ಕಳು ಹಾಗೂ ಅವರಿಗೆ ಮದುವೆ ಮಾಡಿ ತಮ್ಮ ಜವಾಬ್ದಾರಿ ಕಳೆದುಕೊಳ್ಳಲು ಹಾತೊರೆಯುವ ಪೋಷಕರು ಬಹಳಷ್ಟು ಮಂದಿಯಿದ್ದಾರೆ. ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡುತ್ತಿರುವಾಗಲೂ ಒಳ್ಳೆಯ ಕಡೆ ಸಂಬಂಧ ಸಿಕ್ಕಿದೆ ಎನ್ನುವ ಕಾರಣದಿಂದಾಗಿ ಅಥವಾ ಹುಡುಗಿ ಹೆಚ್ಚು ಓದಿದಲ್ಲಿ ಹುಡುಗನನ್ನು ಹುಡುಕುವುದು ಕಷ್ಟವಾಗುತ್ತದೆ ಎನ್ನುವ ಪೂರ್ವಗ್ರಹದಿಂದ ಬಾಲಕಿಯರಿಗೆ ಕಿಶೋರಾವಸ್ಥೆಯಲ್ಲೇ ಮದುವೆ ಮಾಡಲಾಗುತ್ತದೆ. ಅನಾರೋಗ್ಯಕ್ಕೆ ತುತ್ತಾದ ಅಜ್ಜಿ ಅಥವಾ ತಾತನ ಕೊನೆಯಾಸೆಯ ಈಡೇರಿಕೆ ಇಲ್ಲವೇ ತಂದೆ–ತಾಯಿಯ ಆಸೆ ಪೂರೈಸಬೇಕು ಎನ್ನುವ ಭಾವನಾತ್ಮಕ ಒತ್ತಡಗಳಿಂದಾಗಿಯೂ ಬಾಲ್ಯವಿವಾಹಗಳು ನಡೆಯುತ್ತವೆ.

> ಕಾನೂನು ವಿಧಿಸಿರುವ ನಿರ್ಬಂಧಗಳ ನಡುವೆಯೂ ಬಾಲ್ಯವಿವಾಹಗಳು ನಡೆಯುತ್ತಿವೆ. ಈ ಪಿಡುಗನ್ನು ತಡೆಗಟ್ಟಲು, ಪೋಷಕರಲ್ಲಿ ಅರಿವು ಮೂಡಿಸುವುದು ಪರಿಣಾಮಕಾರಿ ಮಾರ್ಗ. ಬಾಲ್ಯವಿವಾಹದ ವಿರುದ್ಧ ದೊಡ್ಡ ಆಂದೋಲನವೇ ರೂಪುಗೊಳ್ಳಬೇಕಾದುದು ಸದ್ಯದ ತುರ್ತು. ಇದಕ್ಕೆ ಸಮಾಜದ ಎಲ್ಲರೂ ಕೈಜೋಡಿಸಬೇಕು

ಬಾಲ್ಯವಿವಾಹಕ್ಕೆ ಮತ್ತೊಂದು ಪ್ರಮುಖ ಕಾರಣ, ಹದಿಹರೆಯದವರ ಪ್ರೇಮ ಪ್ರಕರಣಗಳು. ವಯೋಸಹಜ ಆಕರ್ಷಣೆಯ ಕಾರಣದಿಂದ ಪ್ರೀತಿಯಲ್ಲಿ ಸಿಲುಕುವ ಹದಿಹರೆಯದವರು ಮನೆಯವರಿಗೆ ನುಂಗಲಾಗದ ತುತ್ತಾಗುತ್ತಾರೆ. ಪ್ರೇಮದ ಕಾರಣದಿಂದಾಗಿ ಮಗ ಅಥವಾ ಮಗಳು ವಿವೇಚನೆಯಿಲ್ಲದೆ ಮನೆ ಬಿಟ್ಟುಹೋಗುವ ಸಂದರ್ಭಗಳಲ್ಲಿ ಉಂಟಾಗಬಹುದಾದ 'ಸಾಮಾಜಿಕ ಅವಮಾನ'ದಿಂದ ತಪ್ಪಿಸಿಕೊಳ್ಳಲು ಪೋಷಕರು ಅಪ್ರಾಪ್ತ ವಯಸ್ಸಿನ ತಮ್ಮ ಮಕ್ಕಳಿಗೆ ಮದುವೆ ಮಾಡುತ್ತಾರೆ. ಕಾರಣ ಅಥವಾ ಸಂಪ್ರದಾಯ ಏನೇ ಇದ್ದರೂ ಬಾಲ್ಯವಿವಾಹವು ಮಕ್ಕಳ ಮಾನಸಿಕ, ದೈಹಿಕ ಆರೋಗ್ಯದ ಮೇಲೆ ಉಂಟು ಮಾಡುವ ಪರಿಣಾಮವು ತೀವ್ರತರವಾದುದು. ಅತಿ ಸಣ್ಣ ವಯಸ್ಸಿಗೆ, ಜೀವನದ ಬಗೆಗೆ ಏನೂ ಗೊತ್ತಿಲ್ಲದವರಿಗೆ ಮದುವೆಯ ಜವಾಬ್ದಾರಿ ಹೊರಿಸುವಂತಹ ಕೆಲಸವನ್ನು ನಿಲ್ಲಿಸಬೇಕಾದ ತುರ್ತು ಪ್ರಜ್ಞಾವಂತ ಸಮಾಜದ ಮೇಲಿದೆ.

ಅಪ್ರಾಪ್ತ ವಯಸ್ಸಿನಲ್ಲಿ ನಡೆಸುವ ವಿವಾಹದಿಂದಾಗಿ ದೈಹಿಕ ಆರೋಗ್ಯದ ಮೇಲಾಗುವ ಪರಿಣಾಮಗಳು ಒಂದೆರಡಲ್ಲ. ಗರ್ಭಕೋಶ ಸಂಪೂರ್ಣ ಬೆಳವಣಿಗೆಯಾಗದಿರುವಾಗ ಗರ್ಭಿಣಿಯಾಗುವುದು ಹೆರಿಗೆ ಸಮಯದ ತೊಂದರೆಗಳಿಗೆ ಹಾಗೂ ಅಕಾಲಿಕ ಮರಣಕ್ಕೂ ಕಾರಣವಾಗಬಹುದಾಗಿದೆ. ಜನಿಸುವ ಮಕ್ಕಳ ಆರೋಗ್ಯದಲ್ಲಿ ವ್ಯತ್ಯಯ, ರಕ್ತಹೀನತೆ, ಶಿಶುಗಳ ಮರಣ, ಗರ್ಭಪಾತ ಮತ್ತು ಗರ್ಭಚೀಲ ಹಾನಿಯಂತಹ ಸಮಸ್ಯೆಗಳು ಸಂಭವಿಸಬಹುದು. ಅನಾರೋಗ್ಯದ ಸನ್ನಿವೇಶಗಳನ್ನು ಎದುರಿಸುವ ಸಂದರ್ಭದಲ್ಲಿನ ಮಾನಸಿಕ ಒತ್ತಡ ಹಾಗೂ ಅದರ ನಿರ್ವಹಣೆಯಲ್ಲಿ ಬಾಲಕಿಯರು ವಿಫಲರಾಗುವ ಸಾಧ್ಯತೆಯೇ ಹೆಚ್ಚು.

ಬಾಲ್ಯವಿವಾಹದ ಬಂಧನಕ್ಕೆ ಸಿಲುಕುವ ಬಾಲಕಿಯರು ತಮ್ಮ ಬದುಕಿನ ಕುರಿತಂತೆ ನಿರ್ಧಾರಗಳನ್ನು ತೆಗೆದುಕೊಳ್ಳಲೇ ಸಾಧ್ಯವಿಲ್ಲದಿರುವಾಗ, ತಮ್ಮ ಮಕ್ಕಳ ಬದುಕು ಹಾಗೂ ಅವರ ಶಿಕ್ಷಣದ ಕುರಿತಂತೆ ಸಮರ್ಪಕ ನಿರ್ಣಯಗಳನ್ನು ತೆಗೆದುಕೊಳ್ಳಲು ಅಸಮರ್ಥರಾಗುತ್ತಾರೆ. ಕ್ರಮಬದ್ಧ ಶಿಕ್ಷಣ, ಬಾಲ್ಯದಿಂದ ವಂಚಿತರಾಗುವ ಇವರು ಕೌಟುಂಬಿಕ ಒತ್ತಡಕ್ಕೆ ಒಳಗಾಗಿ, ತಮ್ಮ ಮೇಲಾಗಬಹುದಾದ ದೌರ್ಜನ್ಯವನ್ನು ಪ್ರತಿಭಟಿಸುವ ಸಾಮರ್ಥ್ಯವನ್ನೂ ಕಳೆದುಕೊಳ್ಳುತ್ತಾರೆ. ಬಾಲ್ಯವಿವಾಹಗಳಲ್ಲಿ ಸಾಮಾನ್ಯವಾಗಿ ವಯಸ್ಸಿನ ಅಂತರ ಹೆಚ್ಚಾಗಿರುತ್ತದೆ. ಆ ಕಾರಣಕ್ಕಾಗಿ ದಾಂಪತ್ಯದಲ್ಲಿ ಹೊಂದಾಣಿಕೆಯ ಸಮಸ್ಯೆ ಕಂಡುಬರಬಹುದು; ಎಳೆವಯಸ್ಸಿನಲ್ಲಿ ವಿಧವೆಯರಾಗುವ ದೌರ್ಭಾಗ್ಯ ಎದುರಾಗಬಹುದಾದ ಸಾಧ್ಯತೆಯೂ ಇದೆ.

2024ರಲ್ಲಿ ರಾಜ್ಯದಲ್ಲಿ ದಾಖಲಾದ ಬಾಲ್ಯವಿವಾಹಗಳ ಸಂಖ್ಯೆ 165. ಪ್ರಸಕ್ತ ವರ್ಷ ಮೇ ಮೂರನೇ ವಾರದ ವೇಳೆಗೆ 56 ಪ್ರಕರಣಗಳು ದಾಖಲಾಗಿವೆ. ಇದು ದಾಖಲಾದ ಪ್ರಕರಣಗಳ ಲೆಕ್ಕ. ದಾಖಲಾಗದೇ ಉಳಿದವು, ಜನನ ದಾಖಲಾತಿಗಳ ವ್ಯತ್ಯಯದಿಂದ ಉಂಟಾದ ಪ್ರಕರಣಗಳು ಹಾಗೂ ಪೋಕ್ಸೊ ಕಲಂ ಅಡಿಯಲ್ಲಿ ದಾಖಲಾದ ಬಾಲಗರ್ಭಿಣಿಯರ ಪ್ರಕರಣಗಳ ಲೆಕ್ಕವನ್ನೂ ಸೇರಿಸಿದಲ್ಲಿ ಬಾಲ್ಯವಿವಾಹ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುವುದರಲ್ಲಿ ಸಂಶಯವಿಲ್ಲ. 2025ರ ಮೇ ಅಂತ್ಯದವರೆಗೆ ಸುಮಾರು 700 ಬಾಲಗರ್ಭಿಣಿಯರಿಗೆ ಸಂಬಂಧಿಸಿದ ಮೊಕದ್ದಮೆಗಳು ರಾಜ್ಯದಾದ್ಯಂತ ವಿವಿಧ ಠಾಣೆಗಳಲ್ಲಿ ದಾಖಲಾಗಿವೆ. ಚಾಮರಾಜನಗರ ಜಿಲ್ಲೆಯಲ್ಲಿ ಈ ವರ್ಷ ಇಲ್ಲಿಯವರೆಗೆ ದಾಖಲಾಗಿರುವ ಬಾಲಗರ್ಭಿಣಿಯರ ಸಂಖ್ಯೆ 42.

ಬಾಲ್ಯವಿವಾಹವನ್ನು ತಡೆಗಟ್ಟುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮ ಹಾಗೂ ಜಾಗೃತಿ ಕಾರ್ಯಕ್ರಮಗಳು, ಒಂದೇ ಒಂದು ಬಾಲ್ಯವಿವಾಹವೂ ನಡೆಯಬಾರದಷ್ಟು ಬಿಗಿಯಾಗಿವೆ. ಆದರೂ ರಂಗೋಲಿ ಕೆಳಗೆ ನುಸುಳುವ ಪೋಷಕರ ಕಾರಣದಿಂದಾಗಿ ಬಾಲ್ಯವಿವಾಹಗಳು ನಡೆದೇ ಇವೆ.

ಗ್ರಾಮ ವ್ಯಾಪ್ತಿಯ ಶಾಲಾ ಮುಖ್ಯೋಪಾಧ್ಯಾಯರು, ಪಿ.ಡಿ.ಒ.ಗಳು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ತಳಮಟ್ಟದಲ್ಲಿ ಕಾರ್ಯನಿರ್ವಹಿಸುವ ಸರ್ಕಾರದ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು ಬಾಲ್ಯವಿವಾಹ ನಿಷೇಧ ಅಧಿಕಾರಿಗಳೆಂದು ಸರ್ಕಾರ ಗುರುತಿಸಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ, ಪೊಲೀಸ್ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಕಂದಾಯ ಇಲಾಖೆಯ ಅಧಿಕಾರಿಗಳು ಬಾಲ್ಯವಿವಾಹ ತಡೆಗಟ್ಟುವ ಹೊಣೆಗಾರಿಕೆಯನ್ನು ಹೊಂದಿದ್ದಾರೆ.

ಬಾಲ್ಯವಿವಾಹ ತಡೆಗಟ್ಟುವ ದಿಸೆಯಲ್ಲಿನ ಪ್ರಾಥಮಿಕ ಹೊಣೆಗಾರಿಕೆ ಪೋಷಕರದು. ತಮ್ಮ ಮಗುವಿಗೆ ಇರುವ ಒಂದೇ ಒಂದು ಬದುಕನ್ನು ಅತ್ಯಂತ ಸಂತೋಷದಿಂದ ಹಾಗೂ ಸಾರ್ಥಕವಾಗಿ ರೂಪಿಸಿಕೊಳ್ಳುವ ಅವಕಾಶವನ್ನು ಕಲ್ಪಿಸುವ ನಿಟ್ಟಿನಲ್ಲಿ ತಂದೆ–ತಾಯಿ ಜಾಗೃತರಾಗುವ ಅಗತ್ಯವಿದೆ. ವಿವಾಹವೇ ಬದುಕಲ್ಲ; ಮದುವೆಯು ಬದುಕಿನ ಒಂದು ಭಾಗ ಎನ್ನುವುದನ್ನು ಅರ್ಥೈಸಿಕೊಂಡು, ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಸರ್ಕಾರ ಹಾಗೂ ಪೋಷಕರು ಕೈಜೋಡಿಸಿದಾಗಷ್ಟೇ 'ಬಾಲ್ಯವಿವಾಹ' ವಿರುದ್ಧದ ಹೋರಾಟ ಪರಿಣಾಮಕಾರಿ ಆಗಲಿದೆ.

ಲೇಖಕಿ: ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ
ಚಾಮರಾಜನಗರ

ವಾಚಕರ ವಾಣಿ

₹5 ನೋಟು: ಅಪನಂಬಿಕೆ ನಿವಾರಿಸಿ

ಭಾರತೀಯ ರಿಸರ್ವ್ ಬ್ಯಾಂಕ್ ಅನುಸಾರ ಐದು ರೂಪಾಯಿ ನೋಟು ಒಪ್ಪಿಕೊಳ್ಳಬೇಕಾದ ಕರೆನ್ಸಿ (ಲೀಗಲ್ ಟೆಂಡರ್). ಆದರೆ ಕೆಲವು ಊರುಗಳಲ್ಲಿನ ಅಂಗಡಿ, ಹೋಟೆಲ್‌ಗಳು ಈ ನೋಟುಗಳನ್ನು ಸ್ವೀಕರಿಸುತ್ತಿಲ್ಲ. ಆ ಮೌಲ್ಯದ ನಾಣ್ಯಗಳೇ ಚಲಾವಣೆ ಆಗುತ್ತಿವೆ. ಹತ್ತು ರೂಪಾಯಿ ನಾಣ್ಯದ ಬಗೆಗೆ ಇದೇ ಅಪನಂಬಿಕೆಯ ಪ್ರವೃತ್ತಿ ಇತ್ತು. ರಿಸರ್ವ್ ಬ್ಯಾಂಕ್ ಹಲವು ಬಾರಿ ಸ್ಪಷ್ಟೀಕರಣ ನೀಡಿದ ನಂತರ ವ್ಯಾಪಾರಿಗಳು ಈಗ ಸ್ವೀಕರಿಸತೊಡಗಿದ್ದಾರೆ. ನೋಟ್ ಮುದ್ರಣಕ್ಕಿಂತ ನಾಣ್ಯ ಟಂಕಿಸುವುದೇ ಹೆಚ್ಚಾಗಿರಬಹುದು. ಈಗಾಗಲೇ ಇರುವ ಐದು ರೂಪಾಯಿ ನೋಟುಗಳನ್ನು ಚಲಾವಣೆಯಿಂದ ಹಿಂಪಡೆದಿಲ್ಲ ಎಂದು ರಿಸರ್ವ್ ಬ್ಯಾಂಕ್ ಪ್ರಕಟಣೆ ನೀಡುವ ಅಗತ್ಯ ಇದೆ. ಸ್ವೀಕರಿಸಲು ನಿರಾಕರಿಸುವವರ ವಿರುದ್ಧ ಕ್ರಮ ಕೈಗೊಳ್ಳಲೂ ಯೋಚಿಸಬೇಕು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಸರತಿ ಸಾಲಿನ ಮಹತ್ವ ಅರಿಯೋಣ

ನಮ್ಮ ದೇಶದಲ್ಲಿ ನೂಕುನುಗ್ಗಲಿನಿಂದಾಗುವ ಕಾಲ್ತುಳಿತದಲ್ಲಿ ಸಾವು–ನೋವು ಆಗುವಂತಹ ದುರಂತಗಳು ಆಗಿಂದಾಗ್ಗೆ ಸಂಭವಿಸುತ್ತಲೇ ಇರುತ್ತವೆ. ಆದರೂ ಜನ ಎಚ್ಚೆತ್ತುಕೊಳ್ಳದಿರುವುದು ವಿಷಾದನೀಯ. ಶಬರಿಮಲೆಯಲ್ಲಿ ಮಕರ ಜ್ಯೋತಿ ನೋಡಲು ಬೆಟ್ಟ ಹತ್ತುವ ಸಂದರ್ಭದಲ್ಲಿ, ತಿರುಮಲ ತಿರುಪತಿಯಲ್ಲಿ ವೈಕುಂಠ ಏಕಾದಶಿಯ ದಿನ ಇಂತಹ ಅವಘಡಗಳು ಸಂಭವಿಸಿವೆ.

ದೊಡ್ಡ ದೊಡ್ಡ ದೇವಸ್ಥಾನಗಳಲ್ಲಿ ನಡೆಯುವ ರಥೋತ್ಸವ, ಕೊಂಡೋತ್ಸವಗಳಲ್ಲಿ ಕಾಲ್ತುಳಿತ ಉಂಟಾದ ನಿದರ್ಶನಗಳಿವೆ. ಈಗ ಬೆಂಗಳೂರಿನಲ್ಲಿ ಕ್ರಿಕೆಟ್ ಗೆಲುವಿನ ಸಂಭ್ರಮಾಚರಣೆ ಸಂದರ್ಭದಲ್ಲಿ ಕಾಲ್ತುಳಿತದಿಂದ ಸಾವು–ನೋವು ಆಗಿದೆ.

ಇಂತಹ ಅವಘಡಗಳಿಗೆ ಮುಖ್ಯ ಕಾರಣವೆಂದರೆ, ನಮ್ಮಲ್ಲಿ ಸರತಿ ಸಾಲಿನಲ್ಲಿ ಹೋಗುವಂಥ ಕನಿಷ್ಠ ಶಿಸ್ತು ಪಾಲಿಸದಿರುವುದು. ನಾ ಮುಂದು ತಾ ಮುಂದು ಎಂದು ಒಮ್ಮೆಲೇ ನುಗ್ಗುವ ದುರಭ್ಯಾಸವು ದುರಂತಗಳಿಗೆ ಕಾರಣ. ಶಾಲೆ, ಕಾಲೇಜು ಶಿಕ್ಷಣದ ಹಂತದಲ್ಲೇ ಸರತಿ ಸಾಲಿನ ಮಹತ್ವ, ಒಮ್ಮೆಲೇ ನುಗ್ಗುವುದರಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಮನವರಿಕೆ ಮಾಡಿಕೊಡಬೇಕು.

ಟಿ. ಶಿವಮೂರ್ತಿ ಉಪ್ಪಾರ, ಕೆಸ್ತೂರು, ಯಳಂದೂರು

ಯಕ್ಷಗಾನದ ಪಾವಿತ್ರ್ಯ ಅಳಿಯದಿರಲಿ

ಕರಾವಳಿ ಕರ್ನಾಟಕದ ಯಕ್ಷಗಾನ ಕಲೆಯು ರಾಜಕೀಯ ಪಕ್ಷವೊಂದರ ಮತ್ತು ಅದರ ನಾಯಕನ ವೈಭವೀಕರಣದ (ಗುಣ)ಗಾನಸುಧೆಯನ್ನು ಹರಿಸುವ ದುರಂತದೆಡೆಗೆ ಇಷ್ಟಿಷ್ಟಾಗಿ ಸಾಗುತ್ತಿರುವ ವಾಸ್ತವವನ್ನು ಅಲ್ಲಿಯ ಮೂಲದವರೇ ಆದ ನಾರಾಯಣ ಎ. ಅವರು ತಮ್ಮ ಅಂಕಣ ಬರಹದಲ್ಲಿ (ಪ್ರ.ವಾ., ಜೂನ್ 11) ಸಮರ್ಥವಾಗಿ ತಿಳಿಸಿದ್ದಾರೆ.

ಯಕ್ಷಗಾನವೆಂಬ ಶುದ್ಧ ಕಲೆಗೆ ಮೆತ್ತಿಕೊಳ್ಳುತ್ತಿರುವ ಈ ಕಳಂಕದ ಕಲೆಯನ್ನು ಹೀಗೆಯೇ ಬಿಟ್ಟರೆ ಅದು ಮುಂದೆ ಯಕ್ಷಗಾನ ಕಲೆಯ ಪಾವಿತ್ರ್ಯವನ್ನೂ ಮೌಲ್ಯವನ್ನೂ ಹಾಳುಮಾಡುತ್ತದೆ. ಮಾತ್ರವಲ್ಲ, ಜನಮಾನಸದಲ್ಲಿ ಹಲವು ಬಗೆಯ ವಿಷಮಭಾವಗಳನ್ನು ಬಿತ್ತಿ ಪೋಷಿಸತೊಡಗುತ್ತದೆ. ಯಾವುದೇ ಕಲೆಯು ಮನವನ್ನು ಪ್ರಫುಲ್ಲಗೊಳಿಸಬೇಕೇ ವಿನಾ ಪ್ರಕ್ಷುಬ್ಧಗೊಳಿಸಬಾರದು, ಪ್ರಸನ್ನಗೊಳಿಸಬೇಕೇ ವಿನಾ ಪ್ರಕೋಪಕ್ಕೆ ಈಡುಮಾಡಬಾರದು, ಆತ್ಮಗಳನ್ನು ಬೆಸೆಯಬೇಕೇ ವಿನಾ ಆತ್ಮೀಯತೆಯನ್ನು ಕಸಿಯಬಾರದು, ದಿವ್ಯಾನುಭೂತಿ ನೀಡಬೇಕೇ ವಿನಾ ಅಸಹನೆಯ ಅನುಭವ ನೀಡಬಾರದು.

ಆಗಬಹುದಾದ ಈ ಎಲ್ಲ ಅವಘಡಗಳಿಂದ ಯಕ್ಷಗಾನ ಕಲೆಯನ್ನು ಪಾರು ಮಾಡಲು ಕಲಾವಿದರು, ವಿದ್ವಾಂಸರು, ಚಿಂತಕರು ಸೂಕ್ತ ಪ್ರಯತ್ನಗಳನ್ನು ದೊಡ್ಡ ಸ್ತರದಲ್ಲಿ ಮಾಡಬೇಕಾದ ಅನಿವಾರ್ಯ ಈಗ ಉಂಟಾಗಿದೆ.

ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಜಾತಿಯ ಕಸ ತಲೆಯಿಂದ ತೆಗೆಯಬೇಕಿದೆ

ಸಾಮಾಜಿಕ ಜಾಲತಾಣ ಇನ್‌ಸ್ಟಾಗ್ರಾಮ್‌ನಲ್ಲಿ ಪರಿಚಯವಾದ ಯುವತಿಯನ್ನು ಕುಟುಂಬದ ವಿರೋಧ ಲೆಕ್ಕಿಸದೆ ಅಂತರ್ಜಾತಿ ವಿವಾಹವಾದ ಕೆಎಸ್‌ಆರ್‌ಟಿಸಿ ಬಸ್ ಚಾಲಕರೊಬ್ಬರು, ವರ್ಷದ ಬಳಿಕ ಜಾತಿ ಕಾರಣಕ್ಕೆ ಯುವತಿಗೆ ಕೈಕೊಟ್ಟು ತಲೆ ಮರೆಸಿಕೊಂಡಿರುವ ಸುದ್ದಿ (ಪ್ರ.ವಾ., ಜೂನ್ 12) ಸಾಮಾಜಿಕ ಕಳಕಳಿ ಇರುವ ಪ್ರಜ್ಞಾವಂತರಿಗೆ ಬಹಳ ನೋವುಂಟು ಮಾಡಿದೆ. ನ್ಯಾಯಕ್ಕಾಗಿ ಆಗ್ರಹಿಸುತ್ತಿರುವ ಧರಣಿ ಕುಳಿತ ರಕ್ಷಿತಾ ಅವರ ಪರವಾಗಿ ಸರ್ಕಾರ ಸಹಿತ ಇಡೀ ಪ್ರಜ್ಞಾವಂತ ಸಮಾಜ ನಿಲ್ಲಬೇಕು.

ಈ ಜಾತಿ, ಧರ್ಮ, ದೇವರು, ಪಾಪ– ಪುಣ್ಯದಂತಹ ಕಲ್ಪನೆಗಳು, ನಮ್ಮ ಪೋಷಕರು ಮತ್ತು ಸುತ್ತಲಿನ ಮನುಷ್ಯ ಸಮಾಜದ ಮೂಲಕವೇ ನಮ್ಮ ಆಳದ ಮೆದುಳಿನೊಳಗೆ ಹೋಗಿ ನೆಲೆ ನಿಂತಿವೆ. ಬಾಲ್ಯದ ಮತ್ತು ಬೆಳೆಯುವ ಕಾಲಘಟ್ಟದಲ್ಲಿ, ಯಾವು ಯಾವುದೋ ಕಾರಣದಿಂದಾಗಿ ತಲೆಯೊಳಗೆ ತುಂಬಿಕೊಳ್ಳುವ ಮತ್ತು ಅನೇಕರಲ್ಲಿ ಮೌಢ್ಯವಾಗಿ ರೂಪಾಂತರಗೊಳ್ಳುವ ಕಸವನ್ನು ತಲೆಯಿಂದ ಹೊರಹಾಕಿ, ಆ ಜಾಗದಲ್ಲಿ ಬೆಳಕನ್ನು ತುಂಬಿಸುವುದೇ ಶಿಕ್ಷಣ.

ಯುವಕರಿಗೆ ಶಿಕ್ಷಣ ಕೊಡುವ ಶಾಲೆ, ಕಾಲೇಜು ಆ ಕೆಲಸವನ್ನು ಮಾಡಬೇಕು. ಮದುವೆ ಅನ್ನುವುದು ಒಂದು ವರ್ಷ ಜೊತೆಯಲ್ಲಿದ್ದು ಅನುಭವಪಟ್ಟು ಆನಂತರ ಹಿಂದಿರುಗುವುದಲ್ಲ. ಅದೊಂದು ಪೂರ್ಣಪ್ರಜ್ಞೆ. ಆ ವಿಧಿಗೆ ಒಳಗಾಗುವ ಮೊದಲೇ ಯೋಚಿಸಬೇಕಿತ್ತು. ಈಗ ಕಾಲ ಮುಗಿದಿದೆ. ತಲೆಯೊಳಗೆ ತುಂಬಿರುವ ಜಾತಿಯ ಕಸವನ್ನು ತೆಗೆದು, ಹೊಸ ಬದುಕು ನಡೆಸುವುದೊಂದೇ ಉಳಿದಿರುವ ಮಾರ್ಗ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಚುರುಮುರಿ

ಸಿಂಗಪುರದ ಕನಸು

• ಸುಮಂಗಲಾ

ಪತ್ರಿಕೆಯಲ್ಲಿ ಸುದ್ದಿ ಓದುತ್ತಾ ಕುಳಿತಿದ್ದ ಬೆಕ್ಕಣ್ಣ ಬೆರಳು ಮಡಚಿ ತೆಗೆದು ಎಣಿಸುತ್ತಲೇ ಇತ್ತು. ಕೊನೆಗೊಮ್ಮೆ ತಲೆ ಕೊಡವಿ, 'ಅಲ್ಲಾ, ₹1.15 ಲಕ್ಷ ಕೋಟಿ ರೂಪಾಯಿ ಅಂದರೆ ನೂರಾಹದಿನೈದರ ಮುಂದೆ ಎಷ್ಟ್ ಸೊನ್ನೆ ಬರತೈತಿ?' ಎಂದು ಕೇಳಿತು.

'ಲಕ್ಷ ಕೋಟಿ ಅಂದ್ರೆ ಅದು ಭಾಳ ದೊಡ್ಡ ಸಂಖ್ಯೆ, ಹಂಗೆಲ್ಲ ಥಟ್ ಅಂತ ಹೇಳೂದು ಕಷ್ಟ' ಎಂದು ಹೇಳಿ ನಾನೂ ಲೆಕ್ಕ ಮಾಡತೊಡಗಿದೆ.

'₹1.15 ಲಕ್ಷ ಕೋಟಿ ಅಂದರೆ 115ರ ಮುಂದೆ 9 ಸೊನ್ನೆ ಬರತಾವು. ಬೆಳ್‌ಬೆಳಗ್ಗೆ ಈ ಲೆಕ್ಕವೆಲ್ಲಾ ಎದಕ್ಕೆ?' ಎಂದು ಬೆಕ್ಕಣ್ಣನಿಗೆ ಕೇಳಿದೆ.

'ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿ ಮಾಡಾಕೆ ಅಷ್ಟ್ ರೊಕ್ಕ ಬೇಕು ಅಂತ ಸಿದ್ದು ಅಂಕಲ್ಲು ಹಣಕಾಸು ಆಯೋಗಕ್ಕೆ ಕೇಳ್ಯಾರೆ' ಎಂದು ಬೆಕ್ಕಣ್ಣ ವರದಿ ಒಪ್ಪಿಸಿತು.

'ಹಂಗಾರೆ ರಸ್ತೆಗಳ ಹೊಂಡಾಗುಂಡಿ ಮುಚ್ಚತಾರೆ. ಎಲ್ಲಾ ಕಡೆ ಫುಟ್‌ಪಾತಿನ ಕಲ್ಲು ತೆಗೆದು, ಮತ್ತೆ ಹೊಸಾದು ಹಾಕತಾರೆ'.

'ಫುಟ್‌ಪಾತಿನ ಕಲ್ಲು ತೆಗೆದು, ಅದರ ಜಾಗಕ್ಕೆ ಹೊಸ ಕಲ್ಲು ಹಾಕೋ ಕೆಲಸ ಬೆಂಗಳೂರಾಗೆ ವರ್ಷವಿಡೀ ನಡೀತೈತೆ. ಹೊಂಡಾಗುಂಡಿಯನ್ನು ಮುಚ್ಚೋದೆಲ್ಲ ಚಿಲ್ಲರೆ ಕೆಲಸ. ಮೂಲಸೌಕರ್ಯ ಅಭಿವೃದ್ಧಿ ಅಂದ್ರ ಎಲ್ಲಾ ಕಡಿಗಿ ಫ್ಲೈಓವರ್, ಎಲ್ಲಾ ಕಡಿಗಿ ಟನೆಲ್, ಎಲ್ಲಾ ಕಡಿಗಿ ಮೆಟ್ರೋ... ಅಂದ್ರ ಕಾಮಗಾರಿ, ಭ್ರಷ್ಟಾಚಾರ ಎಲ್ಲಾನೂ ದೊಡ್ಡ ಪ್ರಮಾಣದಲ್ಲಿ ನಡೀತೈತೆ ಅಂತ ಅರ್ಥ' ಎಂದು ಬೆಕ್ಕಣ್ಣ ವಿವರಿಸುತ್ತಾ ಹೋಯಿತು.

'ಸಿದ್ದು ಅಂಕಲ್ಲು ಹೇಳಿರೋದೇನೋ ಖರೇನೇ... ನಾವು ಕೇಂದ್ರಕ್ಕೆ ಒಂದ್ ರೂಪಾಯಿ ತೆರಿಗೆ ಕೊಟ್ಟರೆ, ಅವ್ರು ನಮಗೆ ಬರೇ ಹದಿನೈದು ಪೈಸೆ ಕೊಡತಾರಂತೆ. ಆದರೆ ಬೆಂಗಳೂರನ್ನ ಸಿಂಗಪುರ ಮಾಡೋ ಭರಾಟೆಯಲ್ಲಿ ರಾಜ್ಯದ ಉಳಿದ ಭಾಗದ ಕಥಿ ಏನು?' ಎಂದು ಕೇಳಿದೆ.

'ಅದಕ್ಕೇ ಮತ್ತೆ ಖರ್ಗೆ ಅಜ್ಜಾರು ಗರಂ ಆಗ್ಯಾರೆ. ಇಷ್ಟ್ ವರ್ಷದಿಂದ ಎಲ್ಲಾ ಮುಖ್ಯಮಂತ್ರಿಗಳೂ ಬೆಂಗಳೂರನ್ನ ಸಿಂಗಪುರ ಮಾಡತೀವಂತ ಹಾರಾಡಿದ್ದೇ ಬಂತು. ಮೊದ್ಲು ನಮ್ ಕಲ್ಯಾಣ ಕರ್ನಾಟಕನ ಬೆಂಗಳೂರು ಥರಾ ಮಾಡ್ರಿ ಸಾಕು ಅಂತ ಬೈದಿದಾರೆ' ಎಂದು ಹೇಳುತ್ತಾ ಬೆಕ್ಕಣ್ಣ ನಕ್ಕಿತು.

ಸಂಗತ

'ನೆಟ್ ಜೀರೊ' ಮತ್ತು ಪವನ ವಿದ್ಯುತ್

ಅಡೆತಡೆಗಳ ನಡುವೆಯೂ ಗಾಳಿಗಿರಣಿಗಳ ಉದ್ಯಮದ ಸಾಧನೆ ಗಮನಾರ್ಹ. ಕಂಪನಿಗಳು ಈಗ ಹೆಚ್ಚು ವಿದ್ಯುತ್ ಉತ್ಪಾದಿಸುವ ಉಮೇದಿನಲ್ಲಿವೆ

• ಗುರುರಾಜ್ ಎಸ್. ದಾವಣಗೆರೆ

ಪವನ ವಿದ್ಯುತ್ ಸ್ಥಾವರಗಳ ರೆಕ್ಕೆಗಳಿಗೆ ಭರಪೂರ ಗಾಳಿಯ ಮೇವು ನೀಡುವ ಮುಂಗಾರು ಚುರುಕಾಗುತ್ತಿದ್ದಂತೆ, ಗಾಳಿಯಿಂದ ವಿದ್ಯುತ್ ಉತ್ಪಾದಿಸುವ ಕಂಪನಿಗಳು ಹೆಚ್ಚಿನ ಉತ್ಪಾದನೆಯ ಉಮೇದಿನಲ್ಲಿವೆ. ದೇಶದಲ್ಲಿ ಒಟ್ಟು ಪವನ ವಿದ್ಯುತ್ ಉತ್ಪಾದನೆಯ ಮುಕ್ಕಾಲು ಭಾಗ ಮುಂಗಾರಿನ ಐದು ತಿಂಗಳಲ್ಲೇ ಆಗುತ್ತದೆ. ಪ್ಯಾರಿಸ್ ಒಪ್ಪಂದದಂತೆ 'ಶೂನ್ಯ ಇಂಗಾಲ ಉತ್ಸರ್ಜನೆ' (ನೆಟ್ ಜೀರೊ ಎಮಿಷನ್ಸ್) ಸಾಧಿಸುವ ನಮ್ಮ ಗುರಿಸಾಧನೆಗೆ ಪವನ ವಿದ್ಯುತ್ ಶಕ್ತಿಯು ಪೂರಕವಾಗಿದೆ.

ಇನ್ನೈದು ವರ್ಷಗಳಲ್ಲಿ ನಮ್ಮ ಒಟ್ಟು ವಿದ್ಯುತ್ ಉತ್ಪಾದನೆಯ ಶೇಕಡ 40ರಷ್ಟು ಬಿಸಿಲು ಮತ್ತು ಗಾಳಿಯಿಂದ ಲಭಿಸಬೇಕಿದೆ. ಈಗ ಲಭಿಸುತ್ತಿರುವುದು ಶೇ 20ರಷ್ಟು ಮಾತ್ರ. ಹೀಗಾದಲ್ಲಿ ಗಾಳಿ ವಿದ್ಯುತ್ ಉತ್ಪಾದನೆ ನೂರು ಗಿಗಾ ವಾಟ್ ತಲಪುವುದೂ ಕಷ್ಟ. ಸರ್ಕಾರದ ಅಪಕ್ವ ನೀತಿಗಳು ಸೇರಿದಂತೆ, ಬಂಡವಾಳದ ಕೊರತೆ ಮತ್ತು ಉದ್ಯಮಿಗಳ ನಿರುತ್ಸಾಹ ಪವನ ವಿದ್ಯುತ್ ಕ್ಷೇತ್ರದ ಹಿನ್ನಡೆಗೆ ಕಾರಣವಾಗಿವೆ. ಗಾಳಿಗಿರಣಿ ನಿರ್ಮಿಸಲು ಎತ್ತರದ, ಹೆಚ್ಚು ಗಾಳಿ ಬೀಸುವ ವಿಶಾಲವಾದ ಜಾಗ ಬೇಕು. ಈ ಜಾಗಗಳು ಕಾಡಿನ ಅಥವಾ ಸಂರಕ್ಷಿತ ಅರಣ್ಯಗಳ ಹತ್ತಿರ ಇರಬಾರದು. ಗಾಳಿಗಿರಣಿ ನಿರ್ಮಾಣಕ್ಕೆ ಪರಿಸರ ಇಲಾಖೆಯ ಪರವಾನಗಿ ಮತ್ತು ಕ್ಲಿಯರೆನ್ಸ್ ಎರಡೂ ಬೇಕು.

ಪವನ ವಿದ್ಯುತ್ ಉತ್ಪಾದನೆಯಲ್ಲಿ ಗುಜರಾತ್ (12 ಗಿ.ವಾ) ದೇಶದಲ್ಲಿ ಪ್ರಥಮ ಸ್ಥಾನದಲ್ಲಿದೆ. ತಮಿಳುನಾಡು 11.3 ಗಿ.ವಾ ಮತ್ತು ಕರ್ನಾಟಕ 6.7 ಗಿ.ವಾ ಉತ್ಪಾದನೆಯೊಂದಿಗೆ ನಂತರದ ಸ್ಥಾನಗಳಲ್ಲಿವೆ. ಜಗತ್ತಿನ ಗಾಳಿವಿದ್ಯುತ್ ಉತ್ಪಾದನೆಯ ಒಟ್ಟು ಸ್ಥಾಪಿತ ಸಾಮರ್ಥ್ಯವು 1,174 ಗಿ.ವಾ ದಾಟಿದೆ. 'ಕ್ಲೀನ್ ಆ್ಯಂಡ್ ಗ್ರೀನ್ ಎನರ್ಜಿ' ಖ್ಯಾತಿಯ ಪವನ ವಿದ್ಯುತ್ ಕ್ಷೇತ್ರದಲ್ಲಿ ಚೀನಾ 561.5 ಗಿ.ವಾ ಸ್ಥಾಪಿತ ಸಾಮರ್ಥ್ಯದೊಂದಿಗೆ ವಿಶ್ವದಲ್ಲಿ ನಂಬರ್ 1 ಸ್ಥಾನದಲ್ಲಿದೆ. ಅಮೆರಿಕ (154.5 ಗಿ.ವಾ) ಮತ್ತು ಜರ್ಮನಿ (72.5 ಗಿ.ವಾ) ನಂತರದಲ್ಲಿ ಭಾರತದ್ದು (48.55 ಗಿ.ವಾ) ನಾಲ್ಕನೇ ಸ್ಥಾನ.

ನಮ್ಮ 7,600 ಕಿ.ಮೀ. ಉದ್ದದ ಕರಾವಳಿಯ, ಹನ್ನೆರಡು ನಾಟಿಕಲ್ ಮೈಲ್ ಒಳಗಿನ ಹೆಚ್ಚು ಆಳವಿರದ ಸಮುದ್ರದ ನೀರಿನಲ್ಲಿ ಲೆಕ್ಕವಿಲ್ಲದಷ್ಟು ಗಾಳಿಗಿರಣಿ ನಿರ್ಮಿಸಲು ಅವಕಾಶವಿದೆ. ಇದನ್ನು 'ಆಫ್‌ಶೋರ್ ವಿಂಡ್ ಮಿಲ್' ಎನ್ನುತ್ತೇವೆ. ಇವುಗಳಿಂದ ನೂರು ಗಿ.ವಾ ವಿದ್ಯುತ್ ಶಕ್ತಿ ಉತ್ಪಾದಿಸಬಹುದು. ಈ ವಿದ್ಯುತ್ ಉತ್ಪಾದಿಸಿದ ಜಾಗದಲ್ಲೇ ಬಳಕೆಯಾದರೆ ಸಾಗಣೆಯ ಅನಗತ್ಯ ಖರ್ಚು ಮತ್ತು ಮಾಲಿನ್ಯ ತಪ್ಪುತ್ತವೆ.

ಮೊದಲ ಗಾಳಿಗಿರಣಿಯು 1180ರಲ್ಲಿ ಯುರೋಪಿನ ನಾರ್ಮಂಡಿಯಲ್ಲಿ ಬಳಕೆಯಲ್ಲಿತ್ತು. 1887ರಲ್ಲಿ ಸ್ಕಾಟ್ಲೆಂಡಿನ ಜೇಮ್ಸ್ ಬ್ಲಿತ್ ಪ್ರಥಮ ಬಾರಿಗೆ ಸುಧಾರಿತ ಗಾಳಿಗಿರಣಿ ರಚಿಸಿ ವಿದ್ಯುತ್ ಉತ್ಪಾದಿಸಿದ್ದ. 1920–30ರ ದಶಕದಲ್ಲಿ ಅಮೆರಿಕದ ಗ್ರಾಮೀಣ ಪ್ರದೇಶಗಳಲ್ಲಿ ಒಂದು ಕಿಲೊವಾಟ್‌ಗಿಂತ ಕಡಿಮೆ ಸಾಮರ್ಥ್ಯದ ಗಾಳಿಗಿರಣಿಗಳು ಕೆಲಸ ಮಾಡುತ್ತಿದ್ದವು. 1930ರಲ್ಲಿ ವಿದ್ಯುತ್ ಪ್ರಸರಣಕ್ಕಾಗಿ ತಂತಿ ವ್ಯವಸ್ಥೆ ಬಂದಾಗ ಗಾಳಿಗಿರಣಿಗಳನ್ನು ಗ್ರಿಡ್‌ಗೆ ಸಂಪರ್ಕಿಸುವುದು ಅಸಾಧ್ಯ ಎಂದು ನಿರ್ಧರಿಸಿ ಬಂದ್ ಮಾಡಲಾಯಿತು. 1970ರಲ್ಲಿ ತೈಲ ಬಿಕ್ಕಟ್ಟು ಉಂಟಾದಾಗ ಗಾಳಿಗಿರಣಿಗಳು ಮತ್ತೆ ಮುನ್ನೆಲೆಗೆ ಬಂದವು.

ಭಾರತದ ಪ್ರಥಮ ಗಾಳಿ ಗಿರಣಿಯು ಗುಜರಾತಿನ ವೇರಾವಲ್‌ನಲ್ಲಿ 1980ರಲ್ಲಿ ಪರೀಕ್ಷಾರ್ಥವಾಗಿ ಕಾರ್ಯಾರಂಭ ಮಾಡಿತು. ಆರು ವರ್ಷಗಳ ನಂತರ ಖೇಮ್ಕಾ ಕುಟುಂಬದವರು ಮದ್ರಾಸ್‌ನಲ್ಲಿ ಎನ್‌ಇಪಿಸಿ–ಮೈಕಾನ್ ಕಂಪನಿ ಸ್ಥಾಪಿಸಿ, ಗಾಳಿಗಿರಣಿಗೆ ಉದ್ಯಮದ ರೂಪ ನೀಡಿದರು. 1990ರಲ್ಲಿ ತುಳಸಿ ತಂತಿ ಎಂಬ ಉದ್ಯಮಿ ಆರಂಭಿಸಿದ ಸುಜ್ಲನ್ ಕಂಪನಿಯು ದೇಶದ ಗಾಳಿಗಿರಣಿ ಉದ್ಯಮಕ್ಕೆ ಭದ್ರ ಬುನಾದಿ ಒದಗಿಸಿತು. 2010–11ರಲ್ಲಿ ಸೌರವಿದ್ಯುತ್ ಯೋಜನೆಗಳು ಪ್ರಾರಂಭವಾಗುವವರೆಗೆ ಗಾಳಿವಿದ್ಯುತ್ ಯೋಜನೆಗಳು ಮುಂಚೂಣಿಯಲ್ಲಿದ್ದವು.

ಗಾಳಿಗಿರಣಿಗಳಿಂದ ಸಮಸ್ಯೆಗಳೂ ಇವೆ. ನಿರ್ವಹಿಸುವಾಗ ಮಾಲಿನ್ಯ ಉಂಟಾಗದಿದ್ದರೂ ಆಯಸ್ಸು ಮುಗಿದ ನಂತರ ಯಂತ್ರದಿಂದ ದೊರೆಯುವ ಅಪಾರ ಉಕ್ಕು, ತಾಮ್ರ ಮತ್ತು ಫೈಬರ್ ಗ್ಲಾಸ್‌ಗಳನ್ನು ಸರಿಯಾಗಿ ರೀಸೈಕಲ್ ಮಾಡದಿದ್ದರೆ ಮಾಲಿನ್ಯ ತಪ್ಪಿದ್ದಲ್ಲ. ರೆಕ್ಕೆಗಳ ಸದ್ದಿನಿಂದ ಅದರ ಬಳಿ ಕೆಲಸ ಮಾಡುವ ಕೆಲಸಗಾರರು ನಿದ್ರಾಹೀನತೆಯಿಂದ ಬಳಲುತ್ತಿರುವುದು ಪತ್ತೆಯಾಗಿದೆ. ಒಂದೇ ಜಾಗದಲ್ಲಿ ಹಲವು ಗಾಳಿಗಿರಣಿಗಳ ರೆಕ್ಕೆಗಳು ತಿರುಗುವುದರಿಂದ ಸುತ್ತಲಿನ ಹೊಲಗಳ ಮಣ್ಣಿನ ತೇವಾಂಶ ಕಡಿಮೆಯಾಗಿರುವುದು ವರದಿಯಾಗಿದೆ. ಕೆಲವು ಜಾತಿಯ ಬಾವಲಿಗಳಿಗೆ ಮತ್ತು ಪಕ್ಷಿಗಳಿಗೆ ಗಾಳಿಗಿರಣಿಯ ರೆಕ್ಕೆಗಳಿಂದ ಅಪಾಯವಿದೆ.

'ಇಂಟರ್‌ಸ್ಟೇಟ್ ಟ್ರಾನ್ಸ್‌ಮಿಷನ್ ಸಿಸ್ಟಮ್' ಮೇಲಿನ ಶುಲ್ಕವನ್ನು ತೆಗೆದು ಹಾಕಿರುವುದರಿಂದ ಖಾಸಗಿ ಉದ್ಯಮ ದೊಡ್ಡದಾಗಿ ತಲೆ ಎತ್ತುವ ಸೂಚನೆ ದೊರಕಿದೆ. ಗುಜರಾತ್‌ನಲ್ಲಿ ಗಾಳಿ ಹೆಚ್ಚು ಮತ್ತು ಸ್ಥಾವರಕ್ಕೆ ಬೇಕಾದ ಸ್ಥಳವೂ ಸುಲಭವಾಗಿ ದೊರಕುತ್ತದೆ. ಹಾಗಾಗಿ, ಉದ್ಯಮಿಗಳ ಗಮನ ಅತ್ತ ಕಡೆಗಿದೆ. ಜನರು ಡಿಶ್ ಆಂಟೆನಾ ಗಾತ್ರದ ಗಾಳಿಗಿರಣಿಗಳಿಂದ ಮನೆಗೆ ಬೇಕಾದ ವಿದ್ಯುತ್ತನ್ನು ಕಡಿಮೆ ಖರ್ಚಿನಲ್ಲಿ ಉತ್ಪಾದಿಸಿ ಬಳಸಬಹುದು. ಹೆಚ್ಚಿನದನ್ನು ಗ್ರಿಡ್‌ಗೆ ವರ್ಗಾಯಿಸಿ ಹಣ ಗಳಿಸಬಹುದು. ಇದೆಲ್ಲದರಿಂದಾಗಿ, ಪವನ ವಿದ್ಯುತ್ ಕ್ಷೇತ್ರಕ್ಕೆ ಸುಗ್ಗಿಕಾಲ ಬರಬಹುದೇ?

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಡಿಎಪಿ ಸಿಗದೇ ರೈತರ ಸಂಕಷ್ಟ; ಕೆಲವೆಡೆ ಹೆಚ್ಚಿನ ಬೆಲೆಗೆ ಮಾರಾಟ

ರಸಗೊಬ್ಬರ ಕೊರತೆ ಬಿತ್ತನೆ ಬೀಜ ನಕಲಿ

ರಾಜ್ಯದಾದ್ಯಂತ ಮುಂಗಾರು ಮಳೆ ಬಿರುಸು ಪಡೆದಿರುವಂತೆಯೇ ಕೃಷಿ ಚಟುವಟಿಕೆಗಳು ಗರಿಗೆದರಿವೆ. ಕೆಲವು ಕಡೆ ಬಿತ್ತನೆ ಕಾರ್ಯ ಚುರುಕುಗೊಂಡಿದೆ. ಆದರೆ, ಸಕಾಲದಲ್ಲಿ ರಸಗೊಬ್ಬರ, ಬಿತ್ತನೆ ಬೀಜಗಳು ಲಭ್ಯವಾಗದೇ ರೈತರು ಪರದಾಡುತ್ತಿದ್ದಾರೆ. ಡಿಎಪಿ ಕೊರತೆ ಅಂತೂ ರೈತರನ್ನು ಹೆಚ್ಚು ಬಾಧಿಸುತ್ತಿದೆ. ಈ ಬಾರಿ ಉತ್ತಮ ಮಳೆ ಬೀಳುತ್ತದೆ ಎಂಬ ಮುನ್ಸೂಚನೆಯಿಂದ ರೈತರು ಖುಷಿಯಾಗಿದ್ದರು. ಆದರೆ, ಬಿತ್ತನೆ ಬೀಜ ಮತ್ತು ರಸಗೊಬ್ಬರ ಅಗತ್ಯ ಪ್ರಮಾಣದಲ್ಲಿ ಸಿಗದೇ ಅವರು ಮುಂಗಾರಿನ ಆರಂಭದಲ್ಲೇ ಸಂಕಷ್ಟಕ್ಕೀಡಾಗಿದ್ದಾರೆ. ಇದು ಪ್ರತಿವರ್ಷದ ಸಮಸ್ಯೆಯಾಗಿದ್ದು, ಸರ್ಕಾರ ಕೂಡಲೇ ಅನ್ನದಾತರ ಸಮಸ್ಯೆಗಳಿಗೆ ಸ್ಪಂದಿಸಬೇಕಿದೆ ಎಂದು ರೈತರು ಆಗ್ರಹಿಸಿದ್ದಾರೆ

• ಗಾಣಧಾಳು ಶ್ರೀಕಂಠ

ರಾಜ್ಯದಲ್ಲಿ ಮುಂಗಾರು ಚಟುವಟಿಕೆಗಳಿಗೆ ಅತ್ಯವಿರುವಷ್ಟು ರಸಗೊಬ್ಬರ ದಾಸ್ತಾನಿದೆ ಎಂದು ಕೃಷಿ ಇಲಾಖೆ ಅಂಕಿ ಅಂಶಗಳನ್ನು ತೋರಿಸುತ್ತಿದೆ. ಆದರೆ, ರೈತರು ಅದಕ್ಕೆ ವ್ಯತಿರಿಕ್ತ ಕಥೆ ಹೇಳುತ್ತಿದ್ದು, ಬೀಜ ಮತ್ತು ರಸಗೊಬ್ಬರ ಸಕಾಲದಲ್ಲಿ ಪೂರೈಕೆಯಾಗುತ್ತಿಲ್ಲ ಎಂದು ಆರೋಪಿಸುತ್ತಿದ್ದಾರೆ.

ಹಾವೇರಿ, ಬೀದರ್, ಬಾಗಲಕೋಟೆ ಸೇರಿದಂತೆ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಡಿಎಪಿ ರಸಗೊಬ್ಬರದ ಕೊರತೆ ಇದೆ ಎಂದು ರೈತರು ಪ್ರತಿಭಟನೆ ನಡೆಸಿದ್ದಾರೆ. 'ಕೃಷಿ ಇಲಾಖೆ ಅಧಿಕಾರಿಗಳು ಅಂಕಿ–ಅಂಶಗಳಲ್ಲಿ ಮಾತ್ರ ಡಿಎಪಿಯ ದಾಸ್ತಾನು ತೋರಿಸುತ್ತಾರೆ. ಪರ್ಯಾಯ ಗೊಬ್ಬರಗಳನ್ನು ಖರೀದಿಸಿದರೆ (ಲಿಂಕ್ ಮಾಡಿ) ಮಾತ್ರವೇ ಡಿಎಪಿ ಕೊಡುತ್ತೇವೆ ಎಂದು ನಿಬಂಧನೆ ಹಾಕುತ್ತಿದ್ದಾರೆ' ಎಂಬುದು ಹಾವೇರಿ ರೈತರೊಬ್ಬರ ದೂರು.

'ಬಿತ್ತನೆ ನಂತರ ಬೀಜಗಳು ಮೊಳಕೆಯೊಡೆಯಲು ಡಿಎಪಿ ಅಗತ್ಯವಾಗಿದೆ. ಒಂದು ಎಕರೆಗೆ ಒಂದೂವರೆ ಚೀಲದಷ್ಟು ಡಿಎಪಿ ಬೇಕು. ಬಿತ್ತನೆಯಾದ ಮೇಲೆ ಡಿಎಪಿ ಹಾಕದಿದ್ದರೆ, ಬೀಜ ಮೊಳೆಯುವುದಿಲ್ಲ. ಈಗ ಬಿತ್ತನೆ ಮುಗಿದಿದ್ದು ಡಿಎಪಿ ಗೊಬ್ಬರದ ಕೊರತೆಯಿಂದ ಸಮಸ್ಯೆಯಾಗಿದೆ' ಎಂದು ರೈತರು ಹೇಳುತ್ತಿದ್ದಾರೆ.

ಡಿಎಪಿ ಕೊರತೆಯನ್ನು ಲಾಭವಾಗಿಸಿಕೊಂಡು, ಕೆಲವರು ಡಿಎಪಿ ಖರೀದಿಸಿ ಅಕ್ರಮವಾಗಿ ದಾಸ್ತಾನು ಮಾಡಿಕೊಂಡಿದ್ದಾರೆ. ಹೆಚ್ಚಿನ ಬೆಲೆಗೆ ಮಾರುತ್ತಿದ್ದಾರೆ ಎಂದೂ ರೈತರು ಆರೋಪಿಸುತ್ತಾರೆ.

'ಹಾವೇರಿ ತಾಲ್ಲೂಕಿನಲ್ಲಿ ಡಿಎಪಿ ಗೊಬ್ಬರಕ್ಕೆ ರೈತರಿಂದ ಹೆಚ್ಚಿನ ಬೇಡಿಕೆ ಇದೆ. ಮೇ ತಿಂಗಳಲ್ಲಿ 4,800 ಟನ್ ಡಿಎಪಿಗೆ ಬೇಡಿಕೆ ಸಲ್ಲಿಸಲಾಗಿತ್ತು. 1,800 ಟನ್ ಡಿಎಪಿ ಪೂರೈಸಲಾಗಿದೆ. ಇದರಿಂದಾಗಿ ಡಿಎಪಿ ಕೊರತೆ ಉಂಟಾಗಿದ್ದು, ಪರ್ಯಾಯ ಗೊಬ್ಬರ ಬಳಸುವಂತೆ ರೈತರಿಗೆ ತಿಳಿಸುತ್ತಿದ್ದೇವೆ' ಎಂದು ಕೃಷಿ ಇಲಾಖೆ ಅಧಿಕಾರಿ ಜೂನ್ 4ರಂದು ನಡೆದ ಕೆಡಿಪಿ ಸಭೆಗೆ ತಿಳಿಸಿದ್ದರು.

ನಕಲಿ ಡಿಎಪಿ ಮಾರಾಟ: ಗದಗ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲೂ ಡಿಎಪಿ ಕೊರತೆಯಿದ್ದು, ಇದರ ಲಾಭ ಪಡೆಯಲು ವಂಚಕರು ನಕಲಿ ಡಿಎಪಿ ತಯಾರಿಸಿ (ಮಣ್ಣಿಗೆ ಬಣ್ಣ ಬಳಿದು) ಮಾರಾಟ ಮಾಡಿ ರೈತರನ್ನು ವಂಚಿಸುತ್ತಿದ್ದಾರೆ. ರೋಣ ತಾಲ್ಲೂಕಿನ ಮಾಡಲಗೇರಿಯಲ್ಲಿ 475 ಚೀಲ ಹಾಗೂ ಶಿರಹಟ್ಟಿ ತಾಲ್ಲೂಕಿನ ಕಡಕೋಳ ಗ್ರಾಮದಲ್ಲಿ 45 ಚೀಲ ನಕಲಿ ಡಿಎಪಿಯನ್ನು ಇಲಾಖೆಯ ಅಧಿಕಾರಿಗಳು ಪತ್ತೆ ಮಾಡಿದ್ದಾರೆ.

ಬಾಗಲಕೋಟೆ ಸಿಮಿಕೇರಿ ಬಳಿ ಕೆಲ ದಿನಗಳ ಹಿಂದೆ ಡಿಎಪಿ ಹೆಸರಿನಲ್ಲಿ ಮಾರಲಾಗುತ್ತಿದ್ದ ₹6 ಲಕ್ಷ ಮೌಲ್ಯದ 250 ಚೀಲ ರಸಗೊಬ್ಬರ ವಶಪಡಿಸಿಕೊಳ್ಳಲಾಗಿದೆ. ಮಹಾರಾಷ್ಟ್ರ ರಾಜ್ಯದಿಂದ ಬಾಗಲಕೋಟೆಗೆ ತರಲಾಗಿತ್ತು ಎಂದು ಹೇಳಲಾಗಿದೆ.

ಅಧಿಕ ಬೆಲೆಗೆ ಮಾರಾಟ: '50 ಕೆ.ಜಿಯ ಒಂದು ಚೀಲ ಡಿಎಪಿಯನ್ನು ₹1,370 ದರಕ್ಕೆ ಮಾರಲು ಅವಕಾಶವಿದೆ. ಆದರೆ, ಹಲವು ಸೊಸೈಟಿ ಹಾಗೂ ಮಳಿಗೆಗಳಲ್ಲಿ ₹1,400 ವರೆಗೂ ಮಾರಾಟ ಮಾಡುತ್ತಿದ್ದಾರೆ' ಎಂದೂ ಹಾವೇರಿಯ ಕೆಲವು ರೈತರು ಆರೋಪಿಸಿದ್ದಾರೆ.

ಪೂರಕ ಮಾಹಿತಿ: ವಿವಿಧ ಬ್ಯೂರೊಗಳಿಂದ

ರಸಗೊಬ್ಬರ: ಬೇಡಿಕೆ, ಪೂರೈಕೆ ದಾಸ್ತಾನು ವಿವರ (ಟನ್‌ಗಳಲ್ಲಿ) (ಜೂ 11ರವರೆಗೆ)

ರಸಗೊಬ್ಬರ	ಬೇಡಿಕೆ (ಏ.–ಸೆ.)	ಬೇಡಿಕೆ (ಏ–ಜೂನ್)	ಕೇಂದ್ರದ ಹಂಚಿಕೆ (ಏ–ಜೂನ್)	ದಾಸ್ತಾನು*	ಮಾರಾಟ	ಉಳಿಕೆ
ಎಂಒಪಿ	1,30,000	63,180	90,300	1,20,342	38,826	81,516
ಕಾಂಪ್ಲೆಕ್ಸ್	9,90,000	4,76,816	5,13,250	8,64,920	3,33,966	5,30,954
ಯೂರಿಯಾ	11,17,000	4,54,869	4,56,600	6,33,222	3,16,254	3,16,698
ಎಸ್‌ಎಸ್‌ಪಿ	40,000	19,138	32,605	45,252	13,476	31,776

* ಹಳೆಯ ದಾಸ್ತಾನು ಸೇರಿ

ಕಳಪೆ ಬೀಜದ ಹಾವಳಿ

ಹಾವೇರಿ ಜಿಲ್ಲೆಯಲ್ಲಿ ಕಳಪೆ ಬೀಜದ ಹಾವಳಿ ಹೆಚ್ಚಿದೆ. ಬ್ಯಾಡಗಿಯಲ್ಲಿ ಮೆಣಸಿನಕಾಯಿಯ ಕಳಪೆ ಬೀಜಗಳನ್ನು ಮಾರಿದ್ದ ಆರೋಪದಡಿ ಮಾರಾಟಗಾರ ಮಂಜುನಾಥ ಬಿದರಿ ಎಂಬವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಆರೋಪಿ ಮಂಜುನಾಥ ತಮ್ಮ ಮಳಿಗೆಯಲ್ಲಿ ಹೈದರಾಬಾದ್‌ನ ಧನಾ ಕ್ರಾಪ್ ಸೈನ್ಸ್ ಲಿಮಿಟೆಡ್ ಕಂಪನಿಯ ರಾಹಿಲ್ (ಡಿಸಿಎಚ್–30) ತಳಿಯ ಮೆಣಸಿನಕಾಯಿ ಬೀಜಗಳನ್ನು ಮಾರುತ್ತಿದ್ದರು. ಹಿರೇಹಳ್ಳಿ, ಚಿಕ್ಕಳ್ಳಿ ಹಾಗೂ ಬಡಮಲ್ಲಿ ಗ್ರಾಮದ ಹಲವು ರೈತರು 2024ರ ಡಿಸೆಂಬರ್–2025ರ ಜನವರಿಯಲ್ಲಿ ರಾಹಿಲ್ ಬೀಜ ಖರೀದಿಸಿ ನಾಟಿ ಮಾಡಿದ್ದರು. ಆದರೆ, ಮೆಣಸಿನಕಾಯಿ ಗಿಡಗಳಲ್ಲಿ ಕಾಯಿ ಬಂದಿರಲಿಲ್ಲ. ಬೆಳೆಯೂ ಕುಂಠಿತವಾಗಿತ್ತು. ನೊಂದ ರೈತರು, ಕೃಷಿ ಇಲಾಖೆಗೆ ಮಾಹಿತಿ ನೀಡಿದ್ದರು. ಪರಿಶೀಲನೆ ನಡೆಸಿದ್ದ ಅಧಿಕಾರಿಗಳು, ಮಳಿಗೆ ಮಾಲೀಕನ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದರು. ಅದೇ ಪ್ರಕರಣದ ತನಿಖೆ ಮುಂದುವರಿದಿದೆ.

ಹಾನಗಲ್ ಹಾಗೂ ಶಿಗ್ಗಾವಿ ತಾಲ್ಲೂಕಿನ ಕೆಲ ಗ್ರಾಮಗಳಲ್ಲೂ ಇಂತಹ ದೂರುಗಳು ಬಂದಿವೆ. ಇವುಗಳ ಪರಿಶೀಲನೆ ನಡೆದಿದ್ದು, ಕೃಷಿ ತಜ್ಞರಿಂದ ವರದಿ ಬರುವುದು ಬಾಕಿಯಿದೆ. ರಾಣೆಬೆನ್ನೂರಿನಲ್ಲಿ ನಕಲಿ ಬೀಜ ಹಾಗೂ ಗೊಬ್ಬರ ಮಾರುತ್ತಿರುವ ಬಗ್ಗೆ ಶಾಸಕ ಪ್ರಕಾಶ ಕೋಳಿವಾಡ ಅವರೇ ಆರೋಪಿಸಿದ್ದಾರೆ. ಜೊತೆಗೆ, ಈ ಬಗ್ಗೆ ಪರಿಶೀಲನೆ ನಡೆಸುವಂತೆಯೂ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

2000 ಎಕರೆಯಲ್ಲಿ ಚಿಗುರೊಡೆಯದ ಸೋಯಾಬೀನ್

ಬೆಳಗಾವಿ ಜಿಲ್ಲೆಯ ಹಲವು ಕಡೆಗಳಲ್ಲಿ ನಕಲಿ ಬೀಜದಿಂದಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಜಿಲ್ಲೆಯಲ್ಲಿ 2,000 ಎಕರೆಯಲ್ಲಿ ಬಿತ್ತನೆ ಮಾಡಿದ ಸೋಯಾಬೀನ್ ಬೀಜಗಳು ಮೊಳಕೆ ಒಡೆದಿಲ್ಲ. ಚನ್ನಮ್ಮನ ಕಿತ್ತೂರು ತಾಲ್ಲೂಕಿನ ತುರಕರ ಶೀಗಿಹಳ್ಳಿ ಗ್ರಾಮದಲ್ಲಿ ಕೃಷಿ ಇಲಾಖೆಯಿಂದ ವಿತರಿಸಿದ ಸೋಯಾಬೀನ್ ಬೀಜಗಳು ನಕಲಿ ಆಗಿದ್ದು, 1,500 ಎಕರೆ ಪ್ರದೇಶದಲ್ಲಿ ಮೊಳಕೆ ಒಡೆದಿಲ್ಲ. ಇದರಿಂದ 900ಕ್ಕೂ ಹೆಚ್ಚು ರೈತರು ಕಂಗಾಲಾಗಿದ್ದಾರೆ.

ಬೈಲಹೊಂಗಲ, ರಾಮದುರ್ಗ, ಬೆಳಗಾವಿ ತಾಲ್ಲೂಕಿನಲ್ಲೂ ಇಂಥ ಪ್ರಕರಣಗಳು ಇವೆ. ಬಿತ್ತಿದ 12 ದಿನಗಳವರೆಗೆ ಬೀಜಗಳು ಮೊಳಕೆ ಒಡೆಯಲಿಲ್ಲ. ಅಕ್ಕಪಕ್ಕದ ಗ್ರಾಮಗಳಲ್ಲೂ ಈ ಸಮಸ್ಯೆಯಿದೆ.

'ನಾವೆಲ್ಲ ಹೋರಾಟ ಮಾಡಿದ ಬಳಿಕ ಕೃಷಿ ಅಧಿಕಾರಿಗಳು ಪರಿಶೀಲಿಸಿದರು' ಎಂದು ಹಿರೇಬಾಗೇವಾಡಿ ರೈತರು ಆರೋಪಿಸಿದ್ದಾರೆ. ಅಲ್ಲದೇ, ರೈತರಿಗೆ ಇನ್ನೊಮ್ಮೆ ಬೇರೆ ತಳಿಯ ಬೀಜಗಳನ್ನು ವಿತರಿಸಿದ್ದಾರೆ. ಆದರೆ, ಗೊಬ್ಬರ ನೀಡುತ್ತಿಲ್ಲ. ಅಷ್ಟೇ ಅಲ್ಲ, ಈಗ ಉಂಟಾದ ಹಾನಿ ಹಾನಿಗೆ ಪರಿಹಾರವನ್ನೂ ನೀಡಿಲ್ಲ ಎಂಬುದು ರೈತರ ಗೋಳು.

ಗದಗ ಜಿಲ್ಲೆಯಲ್ಲಿ ನಕಲಿ ರಸಗೊಬ್ಬರ ಮಾರಾಟ ಪ್ರಕರಣಗಳು ಪತ್ತೆಯಾಗಿದೆ. 'ನಕಲಿ ಡಿಎಪಿಯಲ್ಲಿ ಸಾರಜನಕ ಶೇ 0, ರಂಜಕ ಶೇ.9 ಇರುವುದು ದೃಢಪಟ್ಟಿದ್ದು, ಇದು ಮಣ್ಣಲ್ಲದೇ ಮತ್ತೇನೂ ಅಲ್ಲ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಡಿಎಪಿ: ಬೇಡಿಕೆ, ಪೂರೈಕೆ ಎಷ್ಟು?

(ಟನ್‌ಗಳಲ್ಲಿ) (ಜೂನ್ 11ರವರೆಗೆ)

- **4 ಲಕ್ಷ** ಏಪ್ರಿಲ್ –ಸೆಪ್ಟೆಂಬರ್ ಅವಧಿಯ ಬೇಡಿಕೆ
- **2.34 ಲಕ್ಷ** ಏಪ್ರಿಲ್–ಜೂನ್ ನಡುವೆ ಇರುವ ಬೇಡಿಕೆ
- **2.35 ಲಕ್ಷ** ಏಪ್ರಿಲ್–ಜೂನ್ ಅವಧಿಯಲ್ಲಿ ಕೇಂದ್ರ ಸರ್ಕಾರ ಮಾಡಿದ ಹಂಚಿಕೆ
- **1.90 ಲಕ್ಷ** ದಾಸ್ತಾನು * ಮಾಡಲಾದ ಡಿಎಪಿ
- **1.13 ಲಕ್ಷ** ಮಾರಾಟ ಮಾಡಲಾದ ಡಿಎಪಿ
- **0.77 ಲಕ್ಷ** ಉಳಿಕೆ ದಾಸ್ತಾನು

*ಹಳೆಯ ದಾಸ್ತಾನು ಸೇರಿ

'ಪೂರೈಕೆ ಕಡಿಮೆ, ಕೊರತೆಯಿಲ್ಲ'

ಕೇಂದ್ರ ಸರ್ಕಾರ ಪ್ರತಿ ವರ್ಷ ರಾಜ್ಯಕ್ಕೆ ಪೂರೈಸುವಷ್ಟು ಪ್ರಮಾಣದಲ್ಲಿ ಈ ವರ್ಷ ಡಿಎಪಿ ಪೂರೈಸಿಲ್ಲ. ಕೇಂದ್ರವು ಜಾಗತಿಕ ಮಾರುಕಟ್ಟೆಯಿಂದ ಆಮದು ಮಾಡಿಕೊಳ್ಳುವ ಪ್ರಮಾಣದಲ್ಲೂ ಕಡಿಮೆಯಾಗಿರುವುದರಿಂದ, ದೇಶದಾದ್ಯಂತ ಡಿಎಪಿ ಕೊರತೆಯಾಗಿದೆ. ಇದು ಗೊತ್ತಿದ್ದರಿಂದಲೇ ಪರ್ಯಾಯ ರಸಗೊಬ್ಬರಗಳನ್ನು ಬಳಸುವಂತೆ ರೈತರಿಗೆ ಅರಿವು ಮೂಡಿಸಲಾಗುತ್ತಿದೆ. ಇದರ ನಡುವೆಯೂ ಪ್ರಸ್ತುತ ರಾಜ್ಯದಲ್ಲಿ ಡಿಎಪಿ ಸೇರಿದಂತೆ ಯಾವುದೇ ರಸಗೊಬ್ಬರಗಳ ಕೊರತೆಯಿಲ್ಲ

ಎನ್. ಚಲುವರಾಯಸ್ವಾಮಿ, ಕೃಷಿ ಸಚಿವ

ಡಿಎಪಿ ಉತ್ಪಾದನೆಯಲ್ಲೇ 'ಕೊರತೆ'

ರಾಜ್ಯದಲ್ಲಿ ಡಿಎಪಿ ರಸಗೊಬ್ಬರದ ಕೊರತೆಯಿಲ್ಲ. ಈವರೆಗೆ 77,154 ಟನ್‌ನಷ್ಟು ಡಿಎಪಿ ದಾಸ್ತಾನಿದೆ ಎಂದು ರಾಜ್ಯ ಕೃಷಿ ಇಲಾಖೆ ಹೇಳಿದೆ.

ಭಾರತದಲ್ಲಿ ವಾರ್ಷಿಕ 100 ಲಕ್ಷ ಟನ್ ಡಿಎಪಿ ಅಗತ್ಯವಿದೆ. ಇದರಲ್ಲಿ 48 ಲಕ್ಷ ಟನ್ ಸ್ಥಳೀಯವಾಗಿ ಉತ್ಪಾದನೆಯಾದರೆ, ಉಳಿದಿದ್ದು ಆಮದಾಗುತ್ತದೆ. ಜಾಗತಿಕ ಮಾರುಕಟ್ಟೆಯಲ್ಲಿ ಡಿಎಪಿ ತಯಾರಿಕೆಗೆ ಅಗತ್ಯವಾದ ಪಾಸ್ಫರಸ್‌ನ ಬೆಲೆ ಏರಿಕೆಯಾಗಿದೆ. ಜೊತೆಗೆ, ಸಾಗಾಟ ವೆಚ್ಚವೂ ಸೇರಿ, ಸ್ಥಳೀಯ ಕಂಪನಿಗಳಿಗೆ 50 ಕೆ.ಜಿಯ ಒಂದು ಚೀಲ ಡಿಎಪಿ ಉತ್ಪಾದಿಸಿ ಮಾರಾಟ ಮಾಡಿದಾಗ ₹500ವರೆಗೂ ನಷ್ಟವಾಗುತ್ತಿದೆ. ಈ ಕಾರಣಕ್ಕೆ ಕಂಪನಿಗಳೂ ಉತ್ಪಾದಿಸಲು ಹಿಂದೇಟು ಹಾಕುತ್ತಿವೆ ಎಂದು ಹೇಳುತ್ತಾರೆ ಅಧಿಕಾರಿಗಳು.

ಪರ್ಯಾಯ ರಸಗೊಬ್ಬರ ಬಳಸಿ: 'ಡಿಎಪಿಯಲ್ಲಿ ಬೆಳೆಗಳಿಗೆ ಅಗತ್ಯವಾದ ಎನ್‌ಪಿಕೆ ಪೋಷಕಾಂಶಗಳು ಪೂರ್ಣ ಪ್ರಮಾಣದಲ್ಲಿ ಇರುವುದಿಲ್ಲ. ಇದರಲ್ಲಿ ಸಾರಜನಕ, ರಂಜಕವಷ್ಟೇ ಇರುತ್ತದೆ. ಹಾಗಾಗಿ, ಡಿಎಪಿಗೆ ಪರ್ಯಾಯವಾಗಿ, ಆಯಾ ಮಣ್ಣಿಗೆ, ಬೆಳೆಗಳಿಗೆ ಹೊಂದಿಕೊಳ್ಳುವ ಕಾಂಪ್ಲೆಕ್ಸ್ ರಸಗೊಬ್ಬರಗಳನ್ನು ಬಳಸಲು ರೈತರಿಗೆ ಶಿಫಾರಸು ಮಾಡಲಾಗುತ್ತಿದೆ. ಈ ಕುರಿತು ನಿರಂತರವಾಗಿ ಪ್ರಚಾರ ಕೈಗೊಳ್ಳಲಾಗುತ್ತಿದೆ. ಡಿಎಪಿಗೆ ಹೋಲಿಸಿದರೆ ಕಾಂಪ್ಲೆಕ್ಸ್ ರಸಗೊಬ್ಬರದ ದರ ತುಸು ಹೆಚ್ಚಾಗಿರುವ ಕಾರಣ, ರೈತರು ಅದನ್ನು ಖರೀದಿಸಲು ಹಿಂಜರಿಯುತ್ತಿದ್ದಾರೆ' ಎಂಬುದು ಅಧಿಕಾರಿಗಳ ಹೇಳಿಕೆ.

ಬಿತ್ತನೆ ಬೀಜ: ಬೇಡಿಕೆ, ವಿತರಣೆ ಎಷ್ಟು?

(ಜೂನ್ 13ರವರೆಗೆ)

- **4.32 ಲಕ್ಷ ಕ್ವಿಂಟಲ್** 2025–26ರ ಮುಂಗಾರು ಹಂಗಾಮಿಗೆ ಬಿತ್ತನೆ ಬೀಜಗಳಿಗೆ ಇರುವ ಬೇಡಿಕೆ
- **1.27 ಲಕ್ಷ ಕ್ವಿಂಟಲ್** ಇದುವರೆಗೆ ಮಾಡಲಾದ ವಿತರಣೆ
- **29%** ಬೀಜ ವಿತರಣೆಯ ಸಾಧನೆ
- **0.82 ಲಕ್ಷ ಕ್ವಿಂಟಲ್** ದಾಸ್ತಾನು ಇರುವ ಬಿತ್ತನೆ ಬೀಜ ಪ್ರಮಾಣ

ಗೊಬ್ಬರ ದಾಸ್ತಾನಿದೆ ಎಂದು ಇಲಾಖೆ ಹೇಳುತ್ತಿದೆ. ಆದರೆ, ಜಿಲ್ಲೆ, ತಾಲ್ಲೂಕುಗಳಲ್ಲಿ ರೈತರಿಗೆ ಸಿಗುತ್ತಿಲ್ಲ. ಇದರಿಂದ ಕೃಷಿಗೆ ಅಡ್ಡಿಯಾಗಿದೆ

ಬಡಗಲಪುರ ನಾಗೇಂದ್ರ, ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ

ಡಿಎಪಿ ಪೂರೈಕೆ ಆಗುತ್ತಿಲ್ಲ. ಇದರ ಬದಲು ನ್ಯಾನೊ ಡಿಎಪಿ ಖರೀದಿಸಿ ಎಂದು ಅಂಗಡಿಯವರು ಹೇಳುತ್ತಿದ್ದಾರೆ. ಲಿಂಕ್ ಗೊಬ್ಬರ ನಮಗೆ ಬೇಡ. ಡಿಎಪಿಯೇ ಬೇಕು

ಪಂಪಣ್ಣ ನಾಯಕ, ಕೊಪ್ಪಳ ಜಿಲ್ಲೆ

ಬೇಡಿಕೆಗೆ ತಕ್ಕಷ್ಟು ಪೂರೈಕೆ ಇಲ್ಲ

ಹಳೆ ಮೈಸೂರು ಭಾಗದ ಜಿಲ್ಲೆಗಳಲ್ಲಿ ಬಿತ್ತನೆ ಬೀಜ ಮಾತ್ರವೇ ಬೇಡಿಕೆಯಷ್ಟು ದಾಸ್ತಾನಿದೆ. ರಸಗೊಬ್ಬರ ಪ್ರಮಾಣ ಬೇಡಿಕೆಯ ಅರ್ಧದಷ್ಟು ಮಾತ್ರ ಸಂಗ್ರಹವಿದೆ. ಹಂಚಿಕೆಯೂ ವೇಗವಾಗಿ ನಡೆಯುತ್ತಿಲ್ಲ.

ಚಾಮರಾಜನಗರ ಜಿಲ್ಲೆಯಲ್ಲಿ ಮುಂಗಾರು ಅವಧಿಯಲ್ಲಿ 46,901 ಟನ್ ರಸಗೊಬ್ಬರಕ್ಕೆ ಬೇಡಿಕೆ ಇದ್ದು, 6,665 ಟನ್ ಮಾತ್ರ ಪೂರೈಸಲಾಗಿದೆ. ಬಿತ್ತನೆ ಬೀಜವನ್ನು ರೈತರಿಗೆ ಅರ್ಧದಷ್ಟು ಮಾತ್ರ ಪೂರೈಕೆ ಮಾಡಲಾಗಿದೆ. ಹಾಸನ ಜಿಲ್ಲೆಯಲ್ಲಿ ಡಿಎಪಿ ಗೊಬ್ಬರ ಅಗತ್ಯ ಪ್ರಮಾಣದಲ್ಲಿ ಲಭ್ಯವಿಲ್ಲ. ಹೀಗಾಗಿ, ಪರ್ಯಾಯವಾಗಿ ಇತರೆ ಗೊಬ್ಬರವನ್ನು ಬಳಸಲು ರೈತರಿಗೆ ತಿಳಿವಳಿಕೆ ನೀಡಬೇಕು ಎಂದು ಜಿಲ್ಲಾಧಿಕಾರಿ ಸಿ.ಸತ್ಯಭಾಮಾ ಅವರು ಕೃಷಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಕೊಡಗಿನಲ್ಲಿ 1,709.76 ಕ್ವಿಂಟಲ್ ಬಿತ್ತನೆ ಬೀಜಕ್ಕೆ ಬೇಡಿಕೆಯಿದ್ದು, ವಿತರಣೆ ಆಗಿರುವುದು 1.5 ಕ್ವಿಂಟಲ್ ಮಾತ್ರ. 88,667 ಟನ್ ರಸಗೊಬ್ಬರಕ್ಕೆ ಬೇಡಿಕೆಯಿದ್ದು, ವಿತರಣೆ ಆಗಿರುವುದು 13,206 ಟನ್.

ಸಿಗುತ್ತಿಲ್ಲ 'ಸಹ್ಯಾದ್ರಿ ಪಂಚಮುಖಿ: ದಕ್ಷಿಣ ಕನ್ನಡದಲ್ಲಿ ಎಂಒ4 ತಳಿಯ ಭತ್ತಕ್ಕೆ ಬೇಡಿಕೆ ಇದ್ದು, ಬೇಡಿಕೆಯಷ್ಟು ಪೂರೈಕೆಯಾಗಿದೆ. 'ಜಯ', 'ಜ್ಯೋತಿ' ಹಾಗೂ ಈಚಿನ ವರ್ಷಗಳಲ್ಲಿ ಪರಿಚಯಿಸಿರುವ 'ಸಹ್ಯಾದ್ರಿ ಪಂಚಮುಖಿ' ಬೀಜಕ್ಕೂ ಬೇಡಿಕೆ ಇದ್ದು, 'ಸಹ್ಯಾದ್ರಿ ಪಂಚಮುಖಿ' ಪೂರೈಕೆಯಾಗಿಲ್ಲ.

ಪಿಟಿಐ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಹುಮಹಡಿ ಕಟ್ಟಡವೊಂದು ಹೊತ್ತಿ ಉರಿಯುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದು ಅಹಮದಾಬಾದ್‌ನಲ್ಲಿ ಜೂನ್ 12ರಂದು ನಡೆದ ಏರ್ ಇಂಡಿಯಾ ವಿಮಾನದ ಅಪಘಾತದ ವಿಡಿಯೊ ಎಂದು ಪ್ರತಿಪಾದಿಸಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ಇನ್‌ವಿಡ್ ಟೂಲ್ ಮೂಲಕ ವಿಡಿಯೊದ ಕೀಫ್ರೇಮ್‌ಗಳನ್ನು ಪ್ರತ್ಯೇಕಿಸಿ, ಒಂದು ಕೀಫ್ರೇಮ್ ಅನ್ನು ಗೂಗಲ್ ಲೆನ್ಸ್ ಮೂಲಕ ಪರಿಶೀಲನೆ ನಡೆಸಿದಾಗ, ಒಂದೇ ವಿಡಿಯೊ ಅನ್ನು ಹಲವರು ಹಂಚಿಕೊಂಡಿರುವುದು ಕಂಡುಬಂತು. ಈ ಸಂಬಂಧ ಗೂಗಲ್ ರಿವರ್ಸ್ ಇಮೇಜ್ ಸರ್ಚ್ 'ದಿ ಇಂಡಿಯನ್ ಎಕ್ಸ್‌ಪ್ರೆಸ್'ನ ಜೂನ್ 10ರ ಯೂಟ್ಯೂಬ್ ಚಾನೆಲ್‌ಗೆ ಸಂಪರ್ಕ ಕಲ್ಪಿಸಿತು. ಅದರಲ್ಲಿನ ವಿಡಿಯೊ ಮತ್ತು ಪೋಸ್ಟ್‌ನಲ್ಲಿ ಹಂಚಿಕೊಳ್ಳಲಾಗುತ್ತಿರುವ ವಿಡಿಯೊ ಬಹುತೇಕ ಒಂದೇ ಆಗಿರುವುದು ಕಂಡಿತು. ದೆಹಲಿಯ ದ್ವಾರಕಾ ಸೆಕ್ಟರ್ 13ರ ಅಪಾರ್ಟ್‌ಮೆಂಟ್‌ವೊಂದರಲ್ಲಿ ಅಗ್ನಿ ಅವಘಡ ನಡೆದಿದೆ ಎಂದು ವಿಡಿಯೊ ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ನಿರ್ದಿಷ್ಟ ಪದಗಳ ಮೂಲಕ ಗೂಗಲ್ ಸರ್ಚ್ ಮಾಡಿದಾಗ, ಅಗ್ನಿ ಅವಘಡದ ಪೂರ್ಣ ವಿವರಗಳು ಮತ್ತು ಚಿತ್ರಗಳು ದೊರಕಿದವು. ದೆಹಲಿಯ ಅಗ್ನಿ ಅವಘಡದ ವಿಡಿಯೊ ಅನ್ನು ವಿಮಾನ ದುರಂತದ ವಿಡಿಯೊ ಎಂದು ಹಂಚಿಕೊಳ್ಳುವ ಮೂಲಕ ಕೆಲವರು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ಪ್ರಕಟಿಸಿದೆ.

ನುಡಿ ಬೆಳಗು

ಯುಗದ ಮನೋಧರ್ಮ ಬದಲಾಗಬಾರದು

ದಾದಾಪೀರ್ ನವಿಲೇಹಾಳ್

ಧರ್ಮರಾಯ ನಾಳೆ ಬನ್ನಿ ಎಂದು ಹೇಳಿ ಕಳಿಸಿದ ರೈತರು ಹೇಳಿದ ಸಮಯಕ್ಕೆ ಬಂದರು. ಧರ್ಮರಾಯ ಏನಾದರೂ ಹೇಳುವ ಮೊದಲೇ ಜಮೀನು ಮಾರಿದ್ದ ರೈತ ಹೇಳುತ್ತಾನೆ: 'ತಾನು ಜಮೀನು ಮಾರಿದ್ದೇನೆ ನಿಜ, ಅದರಲ್ಲಿ ದೊರೆತ ನಿಧಿಯನ್ನಲ್ಲ. ಕೇಳಿದರೆ ಆತ ಕೊಡುತ್ತಿಲ್ಲ. ಅದನ್ನು ತನಗೇ ಕೊಡಿಸಬೇಕು'.

ಜಮೀನು ಕೊಂಡ ರೈತ ಹೇಳುತ್ತಾನೆ: 'ಅದು ಹೇಗಾಗುತ್ತದೆ? ಜಮೀನು ಖರೀದಿಸಿದ ಮೇಲೆ ಮುಗಿಯಿತು. ಅದರಲ್ಲಿ ಸಿಗುವ ಎಲ್ಲದೂ ನನ್ನದೇ. ನನಗೇ ನಿಧಿ ಬೇಕು, ಕೊಡಿಸಿ' ಅಂತ ಅಹವಾಲು ಮಂಡಿಸಿದ. ಇಬ್ಬರೂ ರೈತರ ಮಾತು ಆಲಿಸಿದ ಧರ್ಮರಾಯ ತಲೆ ಮೇಲೆ ಕೈಹೊತ್ತು ಕುಳಿತ.

ನಿನ್ನೆ ಇದೇ ರೈತರು ಆಡಿದ ಮಾತು ಕೇಳಿಸಿಕೊಂಡು ಒಳಗೊಳಗೇ ಹಿಗ್ಗಿದ್ದ. ರಾತ್ರಿ ಬೆಳಗಾಗುವುದರೊಳಗೆ ಅವರ ಮಾತು, ಮನೋಧರ್ಮ ತದ್ವಿರುದ್ಧವಾಗಿದೆ. ಹೇಗೆ ಸಾಧ್ಯ? ಏನಾಗುತ್ತಿದೆ? ಎಂದು ಚಿಂತಿತನಾಗುತ್ತಾನೆ. ಅದೇ ಹೊತ್ತಿಗೆ ಕೃಷ್ಣ ದರ್ಬಾರನ್ನು ಪ್ರವೇಶಿಸುತ್ತಾನೆ. ಧರ್ಮರಾಯನ ಚಿಂತೆಗೆ ಕಾರಣವೇನು ಎಂದು ತಿಳಿದು ಕೃಷ್ಣ ನಸುನಗುತ್ತಾನೆ. ರೈತರ ಮಾತು ಮತ್ತು ಮನೋಧರ್ಮದ ಬದಲಾವಣೆಗೆ ಕಾರಣವೇನು ಎಂಬುದು ಕೃಷ್ಣನಿಗೆ ಮೊದಲೇ ತಿಳಿದಿದೆ. ಆದರೆ ಆತ ಅದನ್ನು ಎಲ್ಲಿಯೂ ಪ್ರಕಟಿಸಿಲ್ಲ. ಪಟ್ಟಾಭಿಷೇಕವಾಗಿ ಹಲವು ದಿನ ಕಳೆದರೂ ಧರ್ಮರಾಯನಿಗೂ ಹೇಳಿಲ್ಲ. ಈಗ ಹೇಳುವ ಸಂದರ್ಭ ಬಂದಿದೆ. ಹೇಳುತ್ತಾನೆ: 'ಧರ್ಮರಾಯ, ರಾತ್ರಿ ಬೆಳಗಾಗುವುದರೊಳಗೆ ಈ ರೈತರ ಮನೋಧರ್ಮದಲ್ಲಿ ಉಂಟಾದ ವಿಚಿತ್ರ ಬದಲಾವಣೆ ಸಹಜವಾಗಿದೆ. ನಿನ್ನೆ ರಾತ್ರಿಗೆ ನಿನ್ನ ದ್ವಾಪರಯುಗ ಮುಗಿದು ಕಲಿಯುಗ ಕಾಲಿಟ್ಟಿದೆ'.

ನಾವು ಕಾಲ ಬದಲಾಗಿದೆ ಅನ್ನುತ್ತೇವೆ, ಕಾಲ ಕೆಟ್ಟು ಹೋಯಿತು ಅಂತಲೂ ಹಪಹಪಿಸುತ್ತೇವೆ. ವಾಸ್ತವದಲ್ಲಿ ಕಾಲ ಬದಲಾಗುವುದಿಲ್ಲ. ಸಕಲ ಚರಾಚರ ವಸ್ತುಗಳಿಗೆಲ್ಲ ಅದೇ ಹಗಲು ರಾತ್ರಿಗಳು. ಬಡವನಿಗೂ ಧನಿಕನಿಗೂ ಇಪ್ಪತ್ನಾಲ್ಕು ಗಂಟೆಗಳೇ. ಹಕ್ಕಿಗಳ ಇಂಚರದಲ್ಲಿ, ನದಿಗಳ ಕಲರವದಲ್ಲಿ, ಬೆಟ್ಟ ಗುಡ್ಡಗಳ ಅಗಾಧತೆಯಲ್ಲಿ, ಕಡಲ ಸೌಂದರ್ಯದಲ್ಲಿ ನಿನ್ನೆಯತನ ಇಂದೂ ಉಳಿದಿದೆ, ಎಂದೆಂದೂ ಮುಂದುವರಿಯುತ್ತದೆ.

ನಿನ್ನೆ ಎನ್ನುವುದು ಎಷ್ಟು ಹಿಂದಕ್ಕೆ ಬೇಕಾದರೂ ಎಳೆದೊಯ್ಯುವ ಗತಕಾಲದ ಚರಿತ್ರೆಯೂ ಹೌದು, ಕೆಲವೇ ಕ್ಷಣಗಳ ಹಿಂದೆ ಸರಿದು ಹೋದ ಗಳಿಗೆಯೂ ಹೌದು. ಇನ್ನೆಂದೂ ಸಿಗದ ನಿನ್ನೆಯನ್ನು ಹಿಂತಿರುಗಿ ನೋಡಿದರೆ ಅದು ಸತ್ಯ, ನ್ಯಾಯ, ಪ್ರಾಮಾಣಿಕತೆ, ನಿರ್ಮೋಹದಿಂದ ಕೂಡಿತ್ತು ಅಂತ ಅನಿಸುತ್ತದೆ. ಇವತ್ತು ಅನ್ನುವ ವರ್ತಮಾನಕ್ಕೆ ನಿನ್ನೆಯನ್ನು ಒಳಗೊಳ್ಳುವ ಹಂಬಲವಿರಬೇಕು. ಅಂದರೆ ನಿನ್ನೆಯನ್ನು ಯಾವ ಮೌಲ್ಯಗಳು ನೈತಿಕ ಸದೃಢತೆಯಿಂದ ಚರಿತ್ರೆಯನ್ನಾಗಿ ರೂಪಿಸಿದವೋ ಅವೇ ಮೌಲ್ಯಗಳು ಇವತ್ತನ್ನೂ ಅಷ್ಟೇ ಅಥವಾ ಅದಕ್ಕಿಂತ ಗಟ್ಟಿಯಾಗಿ ಕಟ್ಟಲಾರವೇ ಎಂಬುದು ನಮ್ಮ ಚಿಂತನೆಯ ಮೂಲವಾಗಬೇಕು.

ಯುಗದ ಹೆಸರು ಬದಲಾದರೇನಂತೆ? ಯುಗಮನೋಧರ್ಮ ಬದಲಾಗಬೇಕಿಲ್ಲ. ಸತ್ಯ, ನ್ಯಾಯ, ಪ್ರಾಮಾಣಿಕತೆ, ನಿರ್ಮೋಹ ಇವು ಎಲ್ಲ ಕಾಲದ ಮೌಲ್ಯಗಳು. ಸತ್ಯ ಒಂದು ಯುಗಕ್ಕೆ ಮುಗಿಯಬೇಕಿಲ್ಲ. ಸುಳ್ಳು ಇನ್ನೊಂದು ಯುಗವನ್ನು ಆಳಬೇಕಿಲ್ಲ. ಆಳುವವನು ಸತ್ಯ ಅಹಿಂಸೆಗಳಂತಹ ಆಚಾರಕ್ಕೆ ಅರಸನಾಗಬೇಕೆಂತಲೇ ಕೃಷ್ಣ ದ್ವಾಪರ ಮುಗಿದು ಕಲಿ ಕಾಲಿಟ್ಟಿದ್ದಾನೆ ಎಂದು ಸೂಚಿಸುತ್ತಾನೆ. ಸತ್ಯವೇ ಕಲಿತನ ಎಂದು ಕಲಿಗೆ ಕಲಿಸುವ ಆಚಾರ್ಯಬುದ್ಧಿ ರಾಜನಿಗೂ ಪ್ರಜೆಗೂ ಸಮನಾಗಿರಬೇಕು. ಎಲ್ಲರ ಬದುಕಿಗೂ ಅದೇ ಶ್ರೇಯಸ್ಸು.

ಗುಂಡಣ್ಣ

© 2025 by King Features Syndicate, Inc. World Rights reserved

ಪದಬಂಧ 6075

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಇದು ಮನುಷ್ಯ ಶಕ್ತಿಗೆ ಮೀರಿದುದು (5)
4.ಅಕ್ಕ ಕಲಿಸಿದ ಗಣಿತ ಸಮಸ್ಯೆ (2)
5.ಎರಡು ಹಗಲುಗಳ ನಡುವಣ ಅವಧಿ (2)
6.ನಿಯಮಿತವಾಗಿ ಕಾಣಿಸುವ ಸ್ತ್ರೀ (3)
7.ಬಾಯಿಯ ಕೊನೆ (4)
8.ಏನೂ ಬೆಳೆಯದ ಬಂಜರು ನೆಲವಿದು (5)
11.ಪದ ಹೇಳಿ ಅಧಿಕಾರ ಕಳೆದುಕೊಳ್ಳುವಿಕೆ (4)
12.ಅಕ್ಕನ ಗಂಡನಿಂದ ಮೂಡಿರುವ ಕಲ್ಪನೆ (3)
13.ವರನಿಗೆ ಕೇಳಿದ ಧ್ವನಿ (2)
14.ಮುನಿ ಇಲ್ಲಿದ್ದಾನೆ (2)
15.ಹಳೆಯದನ್ನು ಪುನಃ ಹೊಸದು ಮಾಡುವಿಕೆ (5)

ಮೇಲಿಂದ ಕೆಳಕ್ಕೆ

1.ಆವರಣವನ್ನು ತೆಗೆಯುವುದು (5)
2.ಲೆಕ್ಕ ಕಲಿಸಿದ ಹಿರಿಯ ಸಹೋದರಿ! (2)
3.ಷರಾ ಬರೆದ ಗಂಡಸು ತೊಟ್ಟಿರುವ ಉಡುಪು (3)
4.ಬೋಳು ಶಿರಾ ಉಲ್ಟಾಪಲ್ಟಾ ಕಾಣುತ್ತಿದೆಯಲ್ಲಾ? (4)
7.ಕರದಲ್ಲಿ ಹಿಡಿದಿರುವ ಕಬ್ಬಾಪ್ರತಿ (5)
9.ಕಡಿಮೆ ಮಾತನಾಡುವವನು (4)
10.ಮಧುರವಾದ ಸ್ಮರಣೆ (5)
11.ವನದ ಬಳಿ ಬೀಸಿದ ಗಾಳಿ (3)
14.ಸಾಲ ಅಥವಾ ಹಂಗು (2)



6074 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಅಂತರಂಗ 3.ತಡಸಲು
5.ಜವಾನ 7.ದಾರಿ
8.ಕುಚೇಲ 9.ಗೆಳೆಯ
10.ಸುಮ್ಮಾನ 11.ಟಗರು
13.ರಾಶಿ 14.ಕಳಂಕ
15.ಜಾತವೇದ 16.ಪರಿಮಿತಿ

ಮೇಲಿಂದ ಕೆಳಕ್ಕೆ:

2.ತಪರಾಕು 4.ಸಮುದಾಯ
5.ಜಲಜನಕ 6.ನಗೆನಾಟಕ
10.ಸುಶಿಕ್ಷಿತ 12.ರುದ್ರಭೂಮಿ

ಸುಡೊಕು 6459

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	2			3		4		
4		1	5		2		8	
				4			5	1
	9				4	6		
6		2		8				5
		4	2			3		
				2				9
	1	3	8		5			
	4		6		3	8		2

6458 ಸುಡೊಕು

5	3	1	4	8	6	2	9	7
7	8	4	2	3	9	1	5	6
2	9	6	1	5	7	8	4	3
8	1	7	5	4	2	3	6	9
3	6	2	9	7	1	5	8	4
9	4	5	8	6	3	7	1	2
1	7	8	3	9	4	6	2	5
4	2	3	6	1	5	9	7	8
6	5	9	7	2	8	4	3	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

16 ಜೂನ್ 2025, ಸೋಮವಾರ ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಪಂಚಮಿ ಗಂ. 15-32 ನಕ್ಷತ್ರ: ಧನಿಷ್ಠ ಗಂ. 25-14 ಯೋಗ: ವೈಧೃತಿ ಗಂ. 11-07 ಕರಣ: ತೈತಿಲ ಗಂ. 15-32, ಮಿಥುನ ಮಾಸದ 02 ನೇ ದಿನ. ಮಳೆ ನಕ್ಷತ್ರ : ಮೃಗಶಿರ 3 ನೇ ಪಾದ. ರಾಹುಕಾಲ: ಬೆಳಿಗ್ಗೆ 07-30 –09-00, ಸೂರ್ಯೋದಯ: 06-08 ಸೂರ್ಯಾಸ್ತ : 06-55 ಮುಸ್ಲಿಂ ದಿನಾಂಕ: 19 ಜುಲ್‌ಹಿಜಾ , ಅದೃಷ್ಟ ಸಂಖ್ಯೆ: 1, 4

ಮೇಷ: ಜೀವನದಲ್ಲಿ ಸುಖ-ದುಃಖವನ್ನು ಅನುಭವಿಸಿ ಈಗ ನೆಲೆ ಕಂಡ ಸಂತೃಪ್ತಿ ಭಾವ ಮೂಡಲಿದೆ. ಸಹೋದ್ಯೋಗಿಗಳ ಮಾತಿನಂತೆ ನಡೆದುಕೊಳ್ಳುವುದು ಉತ್ತಮ. ಸಂಜೆಯೊಳಗೆ ಅಚ್ಚರಿಯ ಸುದ್ದಿ ಕೇಳಲಿರುವಿರಿ.

ವೃಷಭ: ಕೈಗೆತ್ತಿಕೊಂಡಿರುವ ಕೆಲಸಗಳು ಖರ್ಚಿಗೆ ಕಾರಣವಾದರೂ ಪ್ರಯೋಜನಕಾರಿ. ಭವಿಷ್ಯದ ದಿನಗಳು ನಿಮ್ಮದಾಗಲಿವೆ. ಪಾಲುದಾರರೊಂದಿಗೆ ಎಚ್ಚರಿಕೆಯಿಂದ ವ್ಯವಹರಿಸಿ.

ಮಿಥುನ: ವೃತ್ತಿಯಲ್ಲಿ ಸಿಬ್ಬಂದಿ ವರ್ಗದವರಿಂದ ಹೆಚ್ಚಿನ ಸಹಕಾರ ನಿರೀಕ್ಷಿಸಬೇಡಿ. ಕೋರ್ಟ್ ಕಚೇರಿಗಳ ಸಮಸ್ಯೆ ಇದ್ದಲ್ಲಿ ಬಗೆಹರಿಸಿಕೊಳ್ಳಲು ಸೂಕ್ತ ಸಮಯ. ಮಕ್ಕಳ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಶುಭ ಸುದ್ದಿ ಕೇಳುವಿರಿ.

ಕರ್ಕಾಟಕ: ಬದಲಾವಣೆ ಬಯಸಿದಲ್ಲಿ ಕಾಯುವುದು ಅವಶ್ಯ. ಉದ್ಯೋಗದಲ್ಲಿನ ಪ್ರಯತ್ನಗಳು ವ್ಯಕ್ತಿಯೊಬ್ಬರ ಬೆಂಬಲದಿಂದ ನೆರವೇರುವುದು. ವೃತ್ತಿಪರವಾಗಿ ವಿದೇಶಕ್ಕೆ ತೆರಳುವ ಬಗ್ಗೆ ಸ್ಪಷ್ಟ ಮಾತುಗಳಲ್ಲಿ ತಿಳಿಯಪಡಿಸಿ.

ಸಿಂಹ: ಯಾವುದೇ ಕೆಲಸವನ್ನು ಮಾಡಿದರೂ ಆಲೋಚಿಸಿ ಮಾಡುವುದು ಒಳ್ಳೆಯದು. ಹೊಸ ಜವಾಬ್ದಾರಿ ನಿಭಾಯಿಸಬೇಕಾಗುವುದು. ಪ್ರಯಾಣ ಮಾಡುವ ಅನಿವಾರ್ಯತೆ ಬಂದಲ್ಲಿ ರಾಹುಕಾಲದ ನಂತರ ಪ್ರಯಾಣ ಬೆಳೆಸಿ.

ಕನ್ಯಾ: ಸಂಸಾರದಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ಋಣ ಪರಿಹಾರವಾಗಿ ಕುಟುಂಬದಲ್ಲಿ ಸಂತೋಷ ಮೂಡುವುದು, ಯಶಸ್ಸಿನ ಅಲೆಯಲ್ಲಿ ತೇಲುತ್ತಿರುವಿರಿ. ಅತಿಯಾಗಿ ಬೀಗದಿರುವುದು ಲೇಸು.

ತುಲಾ: ಸಮಸ್ಯೆಗಳ ಪರಿಹಾರಕ್ಕಾಗಿ ಹಿತಚಿಂತಕರೊಡನೆ ಮಾತುಕತೆ ನಡೆಸುವುದು ಒಳ್ಳೆಯದು. ಲೇವಾದೇವಿ ವ್ಯವಹಾರಗಳಿಂದ ನಷ್ಟ ಪ್ರಾಪ್ತಿಯಾಗಲಿದೆ. ಬುದ್ಧಿಶಕ್ತಿಯನ್ನು ಉಪಯೋಗಿಸಿಕೊಂಡು ಯಶಸನ್ನು ಸಾಧಿಸಿ.

ವೃಶ್ಚಿಕ: ಮುಂದಾಲೋಚನೆಯಿಲ್ಲದೆ ಮುಂದುವರಿಯುವುದರ ಬದಲು ಸೂಕ್ತ ಮಾರ್ಗವನ್ನು ಕಂಡುಕೊಳ್ಳಿ. ಇತರರಿಗೆ ಮಾದರಿಯಾಗುವಂತೆ ಜೀವನ ನಡೆಸಬೇಕೆಂಬ ಆಸೆಗೆ ಪುಷ್ಟಿಕೊಡುವ ವಾತಾವರಣ ಸಿಗಲಿದೆ.

ಧನು: ಅಭ್ಯುದಯದತ್ತಲೇ ಗಮನವಿರುವುದು. ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿ ಕೊಳ್ಳುವಿರಿ. ನೆರೆಯವರೊಂದಿಗೆ ಸೌಹಾರ್ದಯುತವಾಗಿ ವರ್ತಿಸಿ. ಶೀತಬಾಧೆಯಿಂದ ಮುಕ್ತರಾಗಲು ಕಷಾಯವನ್ನು ಸೇವಿಸಿ.

ಮಕರ: ಯಾವುದೇ ವಿಷಯದಲ್ಲೂ ಆಸೆ ತೋರಬೇಡಿ. ಆಸೆ ನಿರಾಸೆಯಾಗುವ ಲಕ್ಷಣಗಳಿವೆ. ಅಚ್ಚರಿಯೆನಿಸುವ ಸುದ್ದಿಯೊಂದು ಅನ್ಯರ ಮೂಲಕ ತಿಳಿಯಲಿದೆ. ಅದನ್ನು ಯಾರಲ್ಲೂ ಹೇಳಿಕೊಳ್ಳದೇ ಇರುವುದು ಉತ್ತಮ.

ಕುಂಭ: ಕೈಕೆಳಗಿನ ನೌಕರರ ನೆರವು ಅಗತ್ಯವೆನಿಸಲಿದೆ. ಶ್ರಮದ ದುಡಿಮೆಗೆ ಉತ್ತಮ ಫಲ ದೊರೆಯಲಿದೆ. ನಷ್ಟ ಸಂಭವಿಸುವ ಲಕ್ಷಣವಿರುವುದರಿಂದ ಹೆಚ್ಚು ಕಾಲ ವ್ಯವಹಾರದಿಂದ ದೂರವಿರುವುದು ಉತ್ತಮ.

ಮೀನ: ಸಾಮಾಜಿಕ ಕಳಕಳಿ ಹೆಚ್ಚಲಿದೆ. ವ್ಯವಹಾರಗಳಲ್ಲಿದ್ದ ಗೊಂದಲಗಳನ್ನು ನಿವಾರಿಸಿಕೊಳ್ಳುವಿರಿ. ವ್ಯವಹಾರಿಕ ಸಂಬಂಧಗಳು ಹುಡುಕಿಕೊಂಡು ಬರಲಿವೆ. ಮನಸ್ಸು ಉಲ್ಲಾಸಭರಿತವಾಗಿರುತ್ತದೆ.

ತೈಲ ಘಟಕಗಳ ಮೇಲೆ ಇಸ್ರೇಲ್ ದಾಳಿ

ಎರಡು ಕಡೆಗಳಲ್ಲಿ ಮುಂದುವರಿದ ಕ್ಷಿಪಣಿ ದಾಳಿ; ಮೂರನೇ ದಿನಕ್ಕೆ ಕಾಲಿಟ್ಟ ಯುದ್ಧ

ಜೆರುಸಲೇಂ (ಎಪಿ): ಇರಾನ್ ಮೇಲೆ ಇಸ್ರೇಲ್ ಭಾನುವಾರ ಕ್ಷಿಪಣಿ ದಾಳಿಯನ್ನು ತೀವ್ರಗೊಳಿಸಿದ್ದು, ರಕ್ಷಣಾ ಕೇಂದ್ರಗಳು, ತೈಲ ಘಟಕಗಳನ್ನು ಗುರಿಯಾಗಿರಿಸಿಕೊಂಡೇ ದಾಳಿ ನಡೆಸುತ್ತಿದೆ. ಇದಕ್ಕೆ ಪ್ರತಿಯಾಗಿ, ಇರಾನ್ ರಾತ್ರಿಯಿಡೀ ನಡೆಸಿದ ಕ್ಷಿಪಣಿ ದಾಳಿಗೆ ಇಸ್ರೇಲ್‌ನ 10 ಮಂದಿ ನಾಗರಿಕರು ಮೃತಪಟ್ಟಿದ್ದಾರೆ.

ಉಭಯ ರಾಷ್ಟ್ರಗಳ ನಡುವಿನ ಸಂಘರ್ಷ ಭಾನುವಾರ ಮೂರನೇ ದಿನಕ್ಕೆ ಕಾಲಿಟ್ಟಿದ್ದು, 'ಇರಾನ್ ಪಾಲಿಗೆ ಕೆಟ್ಟದ್ದು ಇನ್ನಷ್ಟೇ ಬರಲಿದೆ' ಎಂದು ಇಸ್ರೇಲ್ ಎಚ್ಚರಿಸಿದೆ.

ಇರಾನ್‌ನ ಪರಮಾಣು ಕಾರ್ಯಕ್ರಮದೊಂದಿಗೆ ಸಂಬಂಧ ಹೊಂದಿದೆ ಎಂದು ಆರೋಪಿಸಿ, ಟೆಹರಾನ್‌ನಲ್ಲಿರುವ ಇರಾನ್ ರಕ್ಷಣಾ ಸಚಿವಾಲಯದ ಪ್ರಧಾನ ಕಚೇರಿ ಮೇಲೆ ಇಸ್ರೇಲ್ ಭಾನುವಾರ ಕ್ಷಿಪಣಿ ದಾಳಿ ನಡೆಸಿತು. ಇದಕ್ಕೆ ಪ್ರತಿಯಾಗಿ ಇರಾನ್‌ನ ಕ್ಷಿಪಣಿಗಳು, ಇಸ್ರೇಲ್ ವಾಯುರಕ್ಷಣಾ ವ್ಯವಸ್ಥೆಯನ್ನು ಭೇದಿಸಿ, ಅಲ್ಲಿನ ಹಲವು ಕಟ್ಟಡಗಳನ್ನು ನಾಶಗೊಳಿಸಿವೆ.

ಟೆಹರಾನ್‌ನಲ್ಲಿ ಸ್ಫೋಟ: ಭಾನುವಾರ ಬೆಳಿಗ್ಗೆ ಟೆಹರಾನ್‌ನ ವಿವಿಧೆಡೆ ಸ್ಫೋಟಗಳು ಸಂಭವಿಸಿವೆ. ಮೂರು ದಿನಗಳ ಸಂಘರ್ಷದಲ್ಲಿ ದೇಶದಲ್ಲಿ 78 ಮಂದಿ ಮೃತಪಟ್ಟಿದ್ದು, 320ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ ಎಂದು ಇರಾನ್‌ನ ವಿಶ್ವಸಂಸ್ಥೆಯ ರಾಯಭಾರಿ ತಿಳಿಸಿದ್ದಾರೆ.

'ಇರಾನ್‌ನ ತೈಲ ಹಾಗೂ ನೈಸರ್ಗಿಕ ಅನಿಲ ಉದ್ಯಮಗಳನ್ನು ಗುರಿಯಾಗಿರಿಸಿಕೊಂಡು ಇಸ್ರೇಲ್ ಮೊದಲ ಬಾರಿಗೆ ಡ್ರೋನ್ ದಾಳಿ ನಡೆಸಿದ್ದರಿಂದ ಭಾರಿ ಸ್ಫೋಟ ಸಂಭವಿಸಿದೆ' ಎಂದು ಇರಾನ್‌ನ ಸುದ್ದಿಸಂಸ್ಥೆಗಳು ವರದಿ ಮಾಡಿವೆ.

ತಕ್ಷಣವೇ ಎರಡೂ ರಾಷ್ಟ್ರಗಳು ಸಂಘರ್ಷ ಕೊನೆಗಾಣಿಸಲು ಮುಂದಾಗಬೇಕು ಎಂದು ವಿಶ್ವದ ಪ್ರಮುಖ ನಾಯಕರು ಒತ್ತಾಯಿಸಿದ್ದಾರೆ.

ಇಸ್ರೇಲ್-ಸಾವಿನ ಸಂಖ್ಯೆ 13ಕ್ಕೆ ಏರಿಕೆ: 'ಟೆಲ್ ಅವೀವ್ ಸೇರಿದಂತೆ ವಿವಿಧ ನಗರಗಳನ್ನು ಗುರಿಯಾಗಿರಿಸಿಕೊಂಡು ಇರಾನ್ ನಡೆಸಿದ ಕ್ಷಿಪಣಿ ದಾಳಿಯಲ್ಲಿ ಭಾನುವಾರ ಒಂದೇ ದಿನ 10 ಮಂದಿ ಮೃತಪಟ್ಟಿದ್ದಾರೆ' ಎಂದು ಇಸ್ರೇಲ್ ರಕ್ಷಣಾ ಸೇವಾ ವಿಭಾಗ 'ಮ್ಯಾಗನ್ ಡೇವಿಡ್ ಆ್ಯಡಂ' ತಿಳಿಸಿದೆ.

'ಟೆಲ್ ಅವೀವ್ ಸಮೀಪದ ಬ್ಯಾಟ್ ಯಾಮ್‌ನ ಅಪಾರ್ಟ್‌ಮೆಂಟ್ ಮೇಲೆ ಅಪ್ಪಳಿಸಿದ ಕ್ಷಿಪಣಿ ದಾಳಿಯಿಂದ ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ. 180 ಮಂದಿಗೆ ಗಾಯಗಳಾಗಿದ್ದು, 7 ಮಂದಿ ಕಣ್ಮರೆಯಾಗಿದ್ದಾರೆ' ಎಂದು ಸ್ಥಳೀಯ ಪೊಲೀಸ್ ಕಮಾಂಡರ್ ಡೇನಿಯಲ್ ಹಡಾಡ್ ತಿಳಿಸಿದ್ದಾರೆ.

ಉತ್ತರ ಇಸ್ರೇಲ್‌ನ ತಮ್ರಾ ಪಟ್ಟಣದ ಕಟ್ಟಡದ ಮೇಲೆ ಕ್ಷಿಪಣಿ ದಾಳಿಯಿಂದ ನಾಲ್ಕು ಮಂದಿ ಮೃತಪಟ್ಟಿದ್ದು, 24 ಮಂದಿ ಗಾಯಗೊಂಡಿದ್ದಾರೆ.

ಪರಮಾಣು ಮಾತುಕತೆ ಬಂದ್: ಇರಾನ್‌ನ ಪರಮಾಣು ಕಾರ್ಯಕ್ರಮದ ಕುರಿತು ನಿಗದಿಯಾಗಿದ್ದ ಸಭೆ ರದ್ದುಗೊಂಡಿದೆ. ಅಮೆರಿಕ ಹಾಗೂ ಇರಾನ್‌ನ ನಡುವೆ 6ನೇ ಸುತ್ತಿನ ಪರೋಕ್ಷ ಮಾತುಕತೆಯು ಭಾನುವಾರ ಒಮನ್‌ನಲ್ಲಿ ನಡೆಯಬೇಕಿತ್ತು.

'ಇಸ್ರೇಲ್‌ನ ದಾಳಿ ಬಳಿಕ ಮಾತುಕತೆ ನಡೆಸುವುದರಲ್ಲಿ ಅರ್ಥವಿಲ್ಲ. ವಾಷಿಂಗ್ಟನ್‌ನ ಪರೋಕ್ಷ ಬೆಂಬಲದಿಂದ ಈ ದಾಳಿ ನಡೆದಿದೆ' ಎಂದು ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಘಿ ತಿಳಿಸಿದ್ದಾರೆ.

ಇಸ್ರೇಲ್‌ನ ಬ್ಯಾಟ್ ಯಾಮ್‌ನ ಜನವಸತಿ ಪ್ರದೇಶದ ಮೇಲೆ ಇರಾನ್ ಕ್ಷಿಪಣಿ ದಾಳಿ ಬಳಿಕ ಕಟ್ಟಡಗಳು ನಾಶಗೊಂಡಿವೆ —ಎಪಿ/ಪಿಟಿಐ ಚಿತ್ರ

ಇಸ್ರೇಲ್ ವಾಯುಮಾರ್ಗ ಬಂದ್

ಇಸ್ರೇಲ್‌ನ ವಾಯುಮಾರ್ಗ ಹಾಗೂ ಬೆನ್ ಗುರಿಯಾನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಭಾನುವಾರವೂ ಮುಚ್ಚಲಾಗಿತ್ತು. ನಿಲ್ದಾಣದಿಂದ ಯಾವುದೇ ವಿಮಾನ ಹಾರಾಟ ನಡೆಸಿಲ್ಲ.

'ಹೊರದೇಶಗಳಲ್ಲಿ ಸಿಲುಕಿರುವ ಇಸ್ರೇಲ್ ನಾಗರಿಕರನ್ನು ಕರೆತರಲು ಇಸ್ರೇಲ್ ವಿಮಾನಯಾನ ಸಂಸ್ಥೆಗಳು ಕೆಲಸ ಮಾಡುತ್ತಿದೆ' ಎಂದು ಸರ್ಕಾರ ತಿಳಿಸಿದೆ.

ಇಸ್ರೇಲ್ ಪಡೆಗಳು ಭವಿಷ್ಯದಲ್ಲಿ ನಡೆಸುವ ದಾಳಿಗೆ ಹೋಲಿಸಿದರೆ, ಇರಾನ್ ಮೇಲೆ ಇದುವರೆಗಿನ ದಾಳಿ ಏನೂ ಅಲ್ಲ

ಬೆಂಜಮಿನ್ ನೆತನ್ಯಾಹು, ಇಸ್ರೇಲ್ ಪ್ರಧಾನಿ

ಟ್ರಂಪ್ ಎಚ್ಚರಿಕೆ

'ಇರಾನ್ ಮೇಲಿನ ದಾಳಿಗೂ ನಮಗೂ ಯಾವುದೇ ಸಂಬಂಧವಿಲ್ಲ. ಯಾವುದೇ ಪ್ರತೀಕಾರದ ಕ್ರಮವಾಗಿ ಅಮೆರಿಕದ ಮೇಲೆ ಇರಾನ್ ದಾಳಿ ನಡೆಸಿದರೆ, ತಕ್ಕ ಶಾಸ್ತಿ ಮಾಡಲಾಗುವುದು' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಭಾರತೀಯ ವಿದ್ಯಾರ್ಥಿಗಳನ್ನು ಕರೆತನ್ನಿ: ಕಾಂಗ್ರೆಸ್

ನವದೆಹಲಿ (ಪಿಟಿಐ): 'ಇರಾನ್‌ನಲ್ಲಿ ಸಿಲುಕಿರುವ 1,500 ಭಾರತದ ವಿದ್ಯಾರ್ಥಿಗಳನ್ನು ಮರಳಿ ಭಾರತಕ್ಕೆ ಕರೆತರಲು ವಿದೇಶಾಂಗ ಇಲಾಖೆಯು ತ್ವರಿತವಾಗಿ ಕ್ರಮ ಕೈಗೊಳ್ಳಬೇಕು' ಎಂದು ಕಾಂಗ್ರೆಸ್ ಒತ್ತಾಯಿಸಿದೆ. 'ಇರಾನ್‌ನಲ್ಲಿರುವ ಭಾರತದ ವಿದ್ಯಾರ್ಥಿಗಳು ನೆರವಿಗಾಗಿ ಮನವಿ ಮಾಡುತ್ತಿದ್ದಾರೆ. ಆಕಾಶದಲ್ಲಿ ಕ್ಷಿಪಣಿಗಳ ಸುರಿಮಳೆ ಆಗುತ್ತಿದ್ದರೂ ಸರ್ಕಾರ ಪ್ರತಿಕ್ರಿಯಿಸುತ್ತಿಲ್ಲ' ಎಂದು ಕಾಂಗ್ರೆಸ್‌ನ ಮಾಧ್ಯಮ ಹಾಗೂ ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಹೇಳಿದ್ದಾರೆ.

ಇಸ್ರೇಲ್‌ನಲ್ಲಿ ಸಿಲುಕಿದ 'ಬಿ– ಪ್ಯಾಕ್' ತಂಡ

ಪ್ರಜಾವಾಣಿ ವಾರ್ತೆ

ಇಸ್ರೇಲ್‌ನಲ್ಲಿ 'ಬಿ– ಪ್ಯಾಕ್' ತಂಡ

ಬೆಂಗಳೂರು: ಇಸ್ರೇಲ್‌ಗೆ ಅಧ್ಯಯನ ಪ್ರವಾಸ ತೆರಳಿದ ನಗರದ 'ಪೊಲಿಟಿಕಲ್ ಆ್ಯಕ್ಷನ್ ಕಮಿಟಿ'ಯ (ಬಿ–ಪ್ಯಾಕ್) 18 ಮಂದಿ ಟೆಲ್ ಅವೀವ್‌ನಲ್ಲಿ ಸಿಲುಕಿಕೊಂಡಿದ್ದು, ವಿಮಾನ ಹಾರಾಟ ಸ್ಥಗಿತಗೊಂಡ ಕಾರಣ ಭಾರತಕ್ಕೆ ವಾಪಸಾಗಲು ಪರದಾಡುತ್ತಿದ್ದಾರೆ.

ಕೆಪಿಸಿಸಿ ಮುಖ್ಯ ವಕ್ತಾರ ಎ.ಎನ್. ನಟರಾಜ್ ಗೌಡ, ಮಹಾಲಕ್ಷ್ಮಿ ಲೇಔಟ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಜಿ. ಸುಧೀಂದ್ರ, ಕಾಂಗ್ರೆಸ್ ನಾಯಕಿ ಮೆಟಿಲ್ಡಾ ಡಿಸೋಜ ಈ ತಂಡದಲ್ಲಿದ್ದಾರೆ.

ಟೆಲ್ ಅವೀವ್‌ನಲ್ಲಿ ವಾಸ್ತವ್ಯ ಹೂಡಿರುವ ಹೋಟೆಲ್‌ನಿಂದ 'ಪ್ರಜಾವಾಣಿ' ಜೊತೆ ಮಾತನಾಡಿದ ನಟರಾಜ್ ಗೌಡ, 'ಇಸ್ರೇಲ್– ಇರಾನ್ ನಡುವೆ ಯುದ್ಧದ ಕಾರ್ಮೋಡ ಕವಿದ ಕಾರಣ ಇಸ್ರೇಲ್‌ನಲ್ಲಿ ಜೂನ್ 12ರಂದು ಮಧ್ಯರಾತ್ರಿಯಿಂದ ತುರ್ತು ಪರಿಸ್ಥಿತಿ ಘೋಷಣೆಯಾಗಿದೆ. ಹೀಗಾಗಿ ವಿಮಾನ ಹಾರಾಟವೂ ಸೇರಿದಂತೆ ಎಲ್ಲ ಸಾರಿಗೆ ವ್ಯವಸ್ಥೆ ಸಂಪೂರ್ಣ ಸ್ಥಗಿತಗೊಂಡಿದೆ. ನಾವು ಎಲ್ಲರೂ ಜೂನ್ 13ರಂದು ಬೆಳಿಗ್ಗೆ 11ಗಂಟೆಯ ವಿಮಾನದಲ್ಲಿ ಭಾರತಕ್ಕೆ ಪ್ರಯಾಣ ಆರಂಭಿಸಬೇಕಿತ್ತು' ಎಂದರು.

'ಇಸ್ರೇಲ್ ಕಾನ್ಸುಲೇಟ್‌ನವರು ಹೋಟೆಲ್‌ನಲ್ಲಿ ನಮಗೆ ಎಲ್ಲ ವ್ಯವಸ್ಥೆ ಮಾಡಿದ್ದಾರೆ. ಹೋಟೆಲ್‌ನಿಂದ ಸುಮಾರು 5 ಕಿ.ಮೀ ದೂರದಲ್ಲಿ ಇರಾನ್‌ನ ಕ್ಷಿಪಣಿಗಳು ಬಂದು ಬಿದ್ದಿವೆ. ಕ್ಷಿಪಣಿ ದಾಳಿಯ ಮುನ್ಸೂಚನೆ ಬರುತ್ತಿದ್ದಂತೆ ಸೈರನ್ ಮೊಳಗುತ್ತದೆ. ತಕ್ಷಣ ಎಲ್ಲರೂ ಹೋಟೆಲ್‌ನಲ್ಲಿರುವ ಬಂಕರ್‌ನ ಒಳಗೆ ಹೋಗಬೇಕು. ಕಳೆದ ಎರಡು ದಿನಗಳಲ್ಲಿ ರಾತ್ರಿ 2–3 ಬಾರಿ ಸೈರನ್ ಮೊಳಗಿದೆ' ಎಂದೂ ವಿವರಿಸಿದರು.

'ನಮ್ಮ ತಂಡ ಜೂನ್ 6ರಂದು ಸಂಜೆ ಬೆಂಗಳೂರಿನಿಂದ ಹೊರಟು ದುಬೈ ಮೂಲಕ 7ರಂದು ಇಸ್ರೇಲ್ ತಲುಪಿದೆ. ಇಸ್ರೇಲ್ ಸರ್ಕಾರದ ನೆರವಿನಲ್ಲಿ ಈ ಪ್ರವಾಸ ಕೈಗೊಂಡಿದ್ದು, ಇನೋವೇಟಿವ್ ಟೆಕ್ನೊ ಪಾರ್ಕ್, ಸ್ಟಾರ್ಟ್ ಅಪ್ ಸೆಂಟರ್ ಸೇರಿದಂತೆ ವಿವಿಧೆಡೆಗೆ ಭೇಟಿ ನೀಡಿದ್ದೇವೆ. ಬೆಂಗಳೂರಿಗೆ ವಾಪಸಾಗಲು ವಿಮಾನ ಟಿಕೆಟ್ ಕೂಡಾ ಆಗಿತ್ತು' ಎಂದರು.

'ನಾವು ಸಿಲುಕಿಕೊಂಡಿರುವುದು ಗೊತ್ತಾಗುತ್ತಿದ್ದಂತೆ ಗೃಹ ಸಚಿವ ಜಿ. ಪರಮೇಶ್ವರ ಮತ್ತು ಮುಖ್ಯಮಂತ್ರಿಯ ಆಪ್ತ ಕಾರ್ಯದರ್ಶಿ ವೆಂಕಟೇಶಯ್ಯ ಅವರು ದೂರವಾಣಿ ಮೂಲಕ ಸಂಪರ್ಕಿಸಿದ್ದಾರೆ. ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಭಾರತೀಯ ವಿದೇಶಾಂಗ ಸಚಿವಾಲಯದ ಅಧಿಕಾರಿಗಳನ್ನು ಸಂಪರ್ಕಿಸಿದ್ದಾರೆ. ಇಲ್ಲಿರುವ ಭಾರತೀಯ ರಾಯಭಾರಿ ಕಚೇರಿಯ ಅಧಿಕಾರಿಗಳು ಬಂದು ಭೇಟಿ ಮಾಡಿದ್ದಾರೆ. ಆದರೆ, ವಿಮಾನ ಹಾರಾಟ ಪುನರಾರಂಭಗೊಳ್ಳುವರೆಗೆ ನಾವು ಇಲ್ಲಿಯೇ ಉಳಿಯಬೇಕಾಗಬಹುದು' ಎಂದೂ ತಿಳಿಸಿದರು.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹585
12 ಕ್ಕೆ	₹78
ಮೈಸೂರು: 100 ಕ್ಕೆ	₹590

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹285-516
ದ್ವಿತಳಿ (ಬಿ.ವಿ)	₹385-666

ಇರಾನ್–ಇಸ್ರೇಲ್ ಸಮರ: ಸಾಗಣೆ ವೆಚ್ಚ ಏರಿಕೆ?

ನವದೆಹಲಿ (ಪಿಟಿಐ): ಇರಾನ್ ಮತ್ತು ಇಸ್ರೇಲ್ ನಡುವಿನ ಸಂಘರ್ಷವು ಜಾಗತಿಕ ಆರ್ಥಿಕ ಅನಿಶ್ಚಿತತೆಗಳನ್ನು ಹೆಚ್ಚಿಸಿದೆ, ಇದರಿಂದಾಗಿ ಭಾರತದಿಂದ ಆಗುವ ರಫ್ತಿನ ಮೇಲೆಯೂ ಪರಿಣಾಮ ಉಂಟಾಗುವ ಭೀತಿ ವ್ಯಕ್ತವಾಗಿದೆ. ಸಂಘರ್ಷದ ಪರಿಣಾಮವಾಗಿ ಸರಕು ಸಾಗಣೆ ವೆಚ್ಚಗಳು ಹೆಚ್ಚಾಗುವ ಸಾಧ್ಯತೆ ಇದೆ.

ಭಾರತದಿಂದ ಯುರೋಪಿಗೆ ಮತ್ತು ರಷ್ಯಾಕ್ಕೆ ಆಗುವ ರಫ್ತಿನ ಮೇಲೆ ಈ ಸಮರವು ಪರಿಣಾಮ ಬೀರಲಿದೆ ಎಂದು ರಫ್ತುದಾರರು ಆತಂಕ ವ್ಯಕ್ತಪಡಿಸಿದ್ದಾರೆ. ಯುದ್ಧವು ದೀರ್ಘಾವಧಿಗೆ ನಡೆದರೆ ಇರಾನ್ ಮತ್ತು ಯುಎಇ ನಡುವೆ ಇರುವ ಹೊರ್ಮುಜ್ ಜಲಸಂಧಿ ಹಾಗೂ ಕೆಂಪು ಸಮುದ್ರದ ಮೂಲಕ ನಡೆಯುವ ವ್ಯಾಪಾರಕ್ಕೆ ತೊಂದರೆ ಆಗಲಿದೆ.

'ಸಮರವು ಜಾಗತಿಕ ವ್ಯಾಪಾರಕ್ಕೆ ಇನ್ನಷ್ಟು ಪೆಟ್ಟು ನೀಡಲಿದೆ. ಸರಕು ಸಾಗಣೆ ವೆಚ್ಚ ಮತ್ತು ವಿಮಾ ವೆಚ್ಚವು ಹೆಚ್ಚಾಗುವ ಅಂದಾಜು ಇದೆ' ಎಂದು ಭಾರತೀಯ ರಫ್ತುದಾರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಸ್.ಸಿ. ರಲ್ಹಾನ್ ಹೇಳಿದರು.

ಸರಕು ಸಾಗಣೆ ಹಡಗುಗಳು ಕೆಂಪು ಸಮುದ್ರ ಮಾರ್ಗವನ್ನು ಮತ್ತೆ ಬಳಸಲು ಆರಂಭಿಸಿದ್ದವು. ಇದರಿಂದಾಗಿ ಭಾರತ ಹಾಗೂ ಏಷ್ಯಾದ ಇತರ ಕಡೆಗಳಿಂದ ಯುರೋಪ್ ಮತ್ತು ಅಮೆರಿಕಕ್ಕೆ ತೆರಳುವಾಗ 15–20 ದಿನಗಳು ಉಳಿಯುತ್ತಿದ್ದವು.

'ಇನ್ನು ಈ ಹಡಗುಗಳು ಕೆಂಪು ಸಮುದ್ರ ಮಾರ್ಗದಿಂದ ಮತ್ತೆ ದೂರ ಉಳಿಯಲಿವೆ. ಸಾಗಣೆ ವೆಚ್ಚದಲ್ಲಿನ ಹೆಚ್ಚಳವನ್ನು ವರ್ತಕರು ಹೊರಬೇಕಾಗುತ್ತದೆ. ವಾರಕ್ಕೂ ಹೆಚ್ಚಿನ ಅವಧಿಗೆ ಯುದ್ಧ ಮುಂದುವರಿದರೆ ಸಾಗಣೆ ವೆಚ್ಚವು ಶೇಕಡ 50ರಷ್ಟು ಹೆಚ್ಚಾಗುತ್ತದೆ' ಮುಂಬೈ ಮೂಲದ ರಫ್ತುದಾರ ಎಸ್.ಕೆ. ಸರಾಫ್ ತಿಳಿಸಿದರು.

ಆ್ಯಕ್ಟಿವ್, ಪ್ಯಾಸಿವ್: ಯಾವುದು ಉತ್ತಮ?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

ಮ್ಯೂಚುವಲ್ ಫಂಡ್‌ಗಳಲ್ಲಿ (ಎಂ.ಎಫ್) ಹೂಡಿಕೆ ಮಾಡುವಾಗ ನಮ್ಮ ಪೋರ್ಟ್‌ಫೋಲಿಯೋ ಹೇಗಿರಬೇಕು? ಆ್ಯಕ್ಟಿವ್ ಫಂಡ್‌ಗಳಲ್ಲಿ ಹೆಚ್ಚು ಹೂಡಿಕೆ ಮಾಡಬೇಕಾ, ಪ್ಯಾಸಿವ್ ಫಂಡ್‌ಗಳ ಆಯ್ಕೆ ಪರಿಗಣಿಸಬೇಕಾ? ಯಾವ ಮಾದರಿಯಿಂದ ಹೆಚ್ಚು ಲಾಭ? ಇಂಥದ್ದೊಂದು ಪ್ರಶ್ನೆ ಪ್ರತಿ ಹೂಡಿಕೆದಾರನನ್ನೂ ಕಾಡುತ್ತದೆ.

ಯಾವೆಲ್ಲ ಮ್ಯೂಚುವಲ್ ಫಂಡ್‌ಗಳನ್ನು ಫಂಡ್ ಮ್ಯಾನೇಜರ್ ಮುಂದಾಳತ್ವದಲ್ಲಿ ನಿರ್ವಹಿಸಲಾಗುತ್ತವೆಯೋ ಅವನ್ನು ಆ್ಯಕ್ಟಿವ್ ಫಂಡ್ ಎನ್ನಲಾಗುತ್ತದೆ. ಆ್ಯಕ್ಟಿವ್ ಫಂಡ್‌ನಲ್ಲಿ ಹೂಡಿಕೆದಾರರ ಹಣವನ್ನು ಯಾವ ಮಾದರಿಯ ಹೂಡಿಕೆ ಉತ್ಪನ್ನದ ಮೇಲೆ ತೊಡಗಿಸಬೇಕು ಎನ್ನುವ ತೀರ್ಮಾನವನ್ನು ಫಂಡ್ ಮ್ಯಾನೇಜರ್ ಮಾಡುತ್ತಾನೆ. ಯಾವಾಗ ಯಾವ ಕಂಪನಿಯ ಷೇರು ಖರೀದಿಸಬೇಕು ಮತ್ತು ಯಾವ ಸಂದರ್ಭದಲ್ಲಿ ಅವನ್ನು ಮಾರಾಟ ಮಾಡಬೇಕು ಎನ್ನುವ ನಿರ್ಧಾರವೂ ಫಂಡ್ ಮ್ಯಾನೇಜರ್‌ನದ್ದೇ ಆಗಿರುತ್ತದೆ. ಷೇರು ಮಾರುಕಟ್ಟೆಯ ಏರಿಳಿತ ಆಧರಿಸಿ ಫಂಡ್ ಮ್ಯಾನೇಜರ್ ಕಾಲಕಾಲಕ್ಕೆ ಹೂಡಿಕೆ ತಂತ್ರಗಾರಿಕೆ ಬದಲಿಸುತ್ತಾನೆ. ಈಕ್ವಿಟಿ, ಡೆಟ್ ಮತ್ತು ಹೈಬ್ರಿಡ್ ಮ್ಯೂಚುವಲ್ ಫಂಡ್‌ಗಳು ಆ್ಯಕ್ಟಿವ್ ಫಂಡ್‌ಗಳಿಗೆ ಉತ್ತಮ ಉದಾಹರಣೆ.

ಪ್ಯಾಸಿವ್ ಫಂಡ್‌ಗಳಲ್ಲಿ ಯಾವ ಷೇರಿನಲ್ಲಿ ಹೂಡಿಕೆ ಮಾಡಬೇಕು, ಯಾವುದರಲ್ಲಿ ಹೂಡಿಕೆ ಮಾಡಬಾರದು ಎನ್ನುವ ನಿರ್ಧಾರವನ್ನು ಫಂಡ್ ಮ್ಯಾನೇಜರ್ ತೆಗೆದುಕೊಳ್ಳುವುದಿಲ್ಲ. ಇಲ್ಲಿ ಫಂಡ್ ಮ್ಯಾನೇಜರ್‌ಗಳ ಪಾತ್ರ ಅತ್ಯಲ್ಪ. ಸೆನ್ಸೆಕ್ಸ್ ಮತ್ತು ನಿಫ್ಟಿಯಲ್ಲಿರುವ ವಿವಿಧ ವಲಯಗಳ ಸೂಚ್ಯಂಕಗಳನ್ನು ಆಧರಿಸಿ ಇಲ್ಲಿ ಹೂಡಿಕೆ ಮಾಡಲಾಗುತ್ತದೆ. ಇಂಡೆಕ್ಸ್ ಮ್ಯೂಚುವಲ್ ಫಂಡ್, ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್ಸ್ (ಇಟಿಎಫ್), ಫಂಡ್ ಆಫ್ ಫಂಡ್ಸ್ (ಎಫ್‌ಒಎಫ್) ಪ್ಯಾಸಿವ್ ಫಂಡ್ಸ್‌ಗೆ ಉತ್ತಮ ಉದಾಹರಣೆ.

ಆ್ಯಕ್ಟಿವ್ ಮತ್ತು ಪ್ಯಾಸಿವ್ ಫಂಡ್‌ನ ಪ್ರಮುಖಾಂಶ

- **ಫಂಡ್ ನಿರ್ವಹಣೆ:** ಆ್ಯಕ್ಟಿವ್ ಮ್ಯೂಚುವಲ್ ಫಂಡ್‌ಗಳಲ್ಲಿ ಫಂಡ್ ಮ್ಯಾನೇಜರ್ ಹೂಡಿಕೆ ತೀರ್ಮಾನಗಳನ್ನು ಮಾಡುತ್ತಾನೆ. ಯಾವುದನ್ನು ಖರೀದಿಸಬೇಕು – ಮಾರಾಟ ಮಾಡಬೇಕು ಎಂಬುದನ್ನು ನಿರ್ಧರಿಸುತ್ತಾನೆ. ಪ್ಯಾಸಿವ್ ಮ್ಯೂಚುವಲ್ ಫಂಡ್‌ಗಳಲ್ಲಿ ಸೂಚ್ಯಂಕಗಳನ್ನು ಅನುಸರಿಸಿ ಹೂಡಿಕೆ ಮಾಡಲಾಗುತ್ತದೆ. ಹೂಡಿಕೆ ನಿರ್ಧಾರಗಳಲ್ಲಿ ಇಲ್ಲಿ ಫಂಡ್ ಮ್ಯಾನೇಜರ್ ಪಾತ್ರ ಇರುವುದಿಲ್ಲ.
- **ಹೂಡಿಕೆ ಗುರಿ:** ಷೇರುಪೇಟೆ ಸೂಚ್ಯಂಕ ಗಳು ನೀಡುವ ಲಾಭವನ್ನು ಮೀರಿ ಹೂಡಿಕೆದಾರನಿಗೆ ಲಾಭ ತಂದುಕೊಡುವುದು ಆ್ಯಕ್ಟಿವ್ ಫಂಡ್‌ಗಳ ಗುರಿಯಾಗಿರುತ್ತದೆ. ಷೇರುಪೇಟೆ ಸೂಚ್ಯಂಕದಲ್ಲಿ ಬರುವಷ್ಟೇ ಲಾಭವನ್ನ ಹೂಡಿಕೆದಾರನಿಗೆ ಸಿಗುವಂತೆ ಮಾಡುವುದು ಪ್ಯಾಸಿವ್ ಫಂಡ್‌ಗಳ ಗುರಿ.
- **ವೆಚ್ಚ ಅನುಪಾತ (ಎಕ್ಸ್‌ಪೆನ್ಸ್ ರೇಷಿಯೋ/ಕಮಿಷನ್):** ಆ್ಯಕ್ಟಿವ್ ಫಂಡ್‌ಗಳಲ್ಲಿ ಎಕ್ಸ್‌ಪೆನ್ಸ್ ರೇಷಿಯೋ/ ಕಮಿಷನ್ ಸಾಮಾನ್ಯವಾಗಿ ಜಾಸ್ತಿ ಇರುತ್ತದೆ. ಶೇ 0.5ರಿಂದ ಶೇ 2.5ರವರೆಗೂ ವೆಚ್ಚ ಅನುಪಾತವನ್ನು ಇಲ್ಲಿ ಪಡೆಯಲಾಗುತ್ತದೆ. ಆದರೆ ಪ್ಯಾಸಿವ್ ಫಂಡ್‌ಗಳಲ್ಲಿ ಎಕ್ಸ್‌ಪೆನ್ಸ್ ರೇಷಿಯೋ ಶೇ 1.25ರ ಒಳಗೇ ಇರುತ್ತದೆ.
- **ಯಾವುದರಲ್ಲಿ ಖರ್ಚು ಜಾಸ್ತಿ?:** ಆ್ಯಕ್ಟಿವ್ ಫಂಡ್‌ಗಳಲ್ಲಿ ವಿಶ್ಲೇಷಣೆ, ಅಧ್ಯಯನ, ಕಾಲಕಾಲಕ್ಕೆ ಖರೀದಿ ಮತ್ತು ಮಾರಾಟದ ನಿರ್ಧಾರಗಳನ್ನು ಮಾಡಬೇಕಿರುವುದರಿಂದ ಖರ್ಚು ಜಾಸ್ತಿ ಬರುತ್ತದೆ. ಆದರೆ ಪ್ಯಾಸಿವ್ ಫಂಡ್‌ಗಳು ಸೂಚ್ಯಂಕಗಳನ್ನು ಅನುಸರಿಸಬೇಕಿರುವ ಕಾರಣ ವೆಚ್ಚ ಕಡಿಮೆ.

ನಿಮಗೆ ಯಾವುದು ಸೂಕ್ತ?: ಹೂಡಿಕೆ ಮಾಡುವಾಗ ಆ್ಯಕ್ಟಿವ್ ಫಂಡ್ ಪರಿಗಣಿಸಬೇಕೋ ಅಥವಾ ಪ್ಯಾಸಿವ್ ಫಂಡ್ ಆಯ್ಕೆ ಮಾಡಿಕೊಳ್ಳ ಬೇಕೋ ಎಂಬ ಪ್ರಶ್ನೆ ಎದುರಾಗುತ್ತದೆ. ಹೂಡಿಕೆ ಬಗ್ಗೆ ನಿಮಗೆ ಎಷ್ಟು ತಿಳಿವಳಿಕೆ ಇದೆ ಎನ್ನುವುದರ ಆಧಾರದಲ್ಲಿ ಈ ಪ್ರಶ್ನೆಗೆ ಉತ್ತರ ಹುಡುಕಬೇಕಾಗುತ್ತದೆ. ಸಾಮಾನ್ಯವಾಗಿ ಹೂಡಿಕೆದಾರರನ್ನು ಎರಡು ರೀತಿಯಲ್ಲಿ ವರ್ಗೀಕರಿಸಬಹುದು, ಒಂದನೇ ವರ್ಗ ತಿಳಿವಳಿಕೆಯುಳ್ಳ ಹೂಡಿಕೆದಾರರು ಮತ್ತು ಎರಡನೇ ವರ್ಗ ತಿಳಿವಳಿಕೆಯ ಕೊರತೆಯಿರುವ ಹೂಡಿಕೆದಾರರು.

ತಿಳಿವಳಿಕೆಯುಳ್ಳ ಹೂಡಿಕೆದಾರರಿಗೆ ಪ್ರಚಲಿತ ವಿದ್ಯಮಾನಗಳು, ಷೇರು ಮಾರುಕಟ್ಟೆ ರಿಸ್ಕ್, ಜಾಗತಿಕ ಬೆಳವಣಿಗೆಗಳ ಬಗ್ಗೆ ಅರಿವಿರುತ್ತದೆ. ಯಾವ ರೀತಿಯ ಹೂಡಿಕೆ ರಿಸ್ಕ್ ತೆಗೆದುಕೊಳ್ಳಬೇಕು, ಯಾವ ಫಂಡ್ ಮ್ಯಾನೇಜರ್ ನಿರ್ವಹಣೆ ಮಾಡುವ ಫಂಡ್‌ಗಳನ್ನು ಪರಿಗಣಿಸಬೇಕು ಎಂಬ ಮಾಹಿತಿ ಅವರಿಗೆ ಇರುತ್ತದೆ. ಇಂತಹ ಹೂಡಿಕೆದಾರರು ಆ್ಯಕ್ಟಿವ್ ಫಂಡ್‌ಗಳತ್ತ ಹೆಚ್ಚು ಗಮನಹರಿಸಬಹುದು. ಜೊತೆಗೆ ಪ್ಯಾಸಿವ್ ಫಂಡ್‌ಗಳನ್ನೂ ಆಯ್ದುಕೊಳ್ಳಬಹುದು. ತಿಳಿವಳಿಕೆಯ ಕೊರತೆ ಇರುವ ಹೂಡಿಕೆದಾರರಿಗೆ ಮಾರುಕಟ್ಟೆಯ ಏರಿಳಿತದ ರಿಸ್ಕ್ ಮತ್ತು ಜಾಗತಿಕ ವಿದ್ಯಮಾನಗಳು ಹೆಚ್ಚು ಅರ್ಥವಾಗುವುದಿಲ್ಲ. ಇಂತಹ ಹೂಡಿಕೆದಾರರು ಹೆಚ್ಚು ತಲೆಕೆಡಿಸಿ ಕೊಳ್ಳದೆ ಷೇರು ಮಾರುಕಟ್ಟೆ ಸೂಚ್ಯಂಕವನ್ನು ಅನುಸರಿಸುವ ಪ್ಯಾಸಿವ್ ಫಂಡ್‌ಗಳನ್ನು ಪರಿಗಣಿಸಬಹುದು. ಸರಳವಾಗಿ ಹೇಳುವುದಾದರೆ, ಯಾರು ಷೇರು ಮಾರುಕಟ್ಟೆ ಮತ್ತು ಮ್ಯೂಚುವಲ್ ಫಂಡ್ ಹೂಡಿಕೆಗೆ ಹೊಸಬರೋ ಅವರು ಪ್ಯಾಸಿವ್ ಫಂಡ್‌ಗಳಿಂದ ಹೂಡಿಕೆ ಪಯಣ ಆರಂಭಿಸುವುದು ಒಳಿತು. ನಂತರದಲ್ಲಿ ನಿಧಾನಕ್ಕೆ ಆ್ಯಕ್ಟಿವ್ ಫಂಡ್‌ಗಳತ್ತಲೂ ಹೂಡಿಕೆ ವಿಸ್ತರಿಸಿಕೊಳ್ಳಬಹುದು.

ಸಣ್ಣ ಹೂಡಿಕೆದಾರರ ಪೋರ್ಟ್‌ಫೋಲಿಯೋ ಹೇಗಿರಬೇಕು?: ಷೇರು ಮಾರುಕಟ್ಟೆ ಆಧರಿಸಿದ ಹೂಡಿಕೆಗಳಿಗಾಗಿ ನಿಮ್ಮ ಬಳಿ ₹100 ಇದೆ ಎಂದಾದಲ್ಲಿ ₹50 ಲಾರ್ಜ್‌ಕ್ಯಾಪ್ ಪ್ಯಾಸಿವ್ ಫಂಡ್‌ಗಳ ಮೇಲೆ ಹೂಡಿಕೆ ಮಾಡುವುದು ಸೂಕ್ತವಾಗುತ್ತದೆ. ಇನ್ನುಳಿದ ₹50 ಆ್ಯಕ್ಟಿವ್ ಮಿಡ್ ಕ್ಯಾಪ್, ಸ್ಮಾಲ್ ಕ್ಯಾಪ್, ಫ್ಲೆಕ್ಸಿ ಕ್ಯಾಪ್, ಥಿಮ್ಯಾಟಿಕ್, ಸೆಕ್ಟೋರಲ್ ಫಂಡ್‌ಗಳಿಗೆ ಮೀಸಲಿಡಬಹುದು. ಇಂತಹ ಫಂಡ್‌ಗಳ ನಿರ್ವಹಣೆಯಲ್ಲಿ ಫಂಡ್ ಮ್ಯಾನೇಜರ್‌ನ ಪಾತ್ರ ದೊಡ್ಡದಿರುವುದರಿಂದ ಆ್ಯಕ್ಟಿವ್ ಮಾದರಿ ಹೆಚ್ಚು ಸೂಕ್ತ.

(ಗಮನಿಸಿ: ಸಣ್ಣ ಹೂಡಿಕೆದಾರರನ್ನು ಒಟ್ಟಾಗಿ ಗಮನದಲ್ಲಿಟ್ಟುಕೊಂಡು ಈ ಲೆಕ್ಕಾಚಾರ ನೀಡಲಾಗಿದೆ. ಹೂಡಿಕೆಗೆ ಮುನ್ನ ಹಣಕಾಸು ತಜ್ಞರ ಸಲಹೆ ಪಡೆಯಿರಿ.)

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

ಕುಸಿತ ಕಂಡ ಷೇರು ಸೂಚ್ಯಂಕಗಳು

ಷೇರುಪೇಟೆ

ಜೂನ್ 13ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಕುಸಿತ ಕಂಡಿವೆ. 81,118 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.3ರಷ್ಟು ಇಳಿಕೆ ಕಂಡಿದೆ. 24,718 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.13ರಷ್ಟು ಇಳಿಕೆ ಕಂಡಿದೆ. ಇಸ್ರೇಲ್–ಇರಾನ್ ಕದನ, ಕಚ್ಚಾ ತೈಲ ಬೆಲೆ ಹೆಚ್ಚಳ, ಅಮೆರಿಕ ಮತ್ತು ಚೀನಾ ನಡುವಿನ ವ್ಯಾಪಾರ ಒಪ್ಪಂದ ಮಾತುಕತೆಯಲ್ಲಿ ಅನಿಶ್ಚಿತತೆ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಷೇರುಗಳ ಮಾರಾಟದ ಒತ್ತಡ ಸೇರಿದಂತೆ ಹಲವು ಅಂಶಗಳು ಮಾರುಕಟ್ಟೆ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 3ರಷ್ಟು ಕುಸಿತ ಕಂಡಿದ್ದರೆ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 2.3, ಎಫ್‌ಎಂಸಿಜಿ ಶೇ 2, ಬ್ಯಾಂಕ್ ಶೇ 2 ಮತ್ತು ಲೋಹ ಶೇ 1.5ರಷ್ಟು ಕುಸಿದಿವೆ. ಆದರೆ ನಿಫ್ಟಿ ಮಾಹಿತಿ ತಂತ್ರಜ್ಞಾನ ಶೇ 3, ಮಾಧ್ಯಮ ಮತ್ತು ಫಾರ್ಮಾ ಶೇ 1ಕ್ಕಿಂತ ಹೆಚ್ಚು ಗಳಿಸಿಕೊಂಡಿವೆ.

ಮುನ್ನೋಟ: ಜೂನ್ 16ರಂದು ಭಾರತದ ಮೇ ತಿಂಗಳ ಆಮದು, ರಫ್ತಿನ ಅಂಕಿ-ಅಂಶ ಮತ್ತು ಬ್ಯಾಲೆನ್ಸ್ ಆಫ್ ಟ್ರೇಡ್ ಮಾಹಿತಿ ಪ್ರಕಟವಾಗಲಿದೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶಿಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾವಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ
ನರ್ಸರಿ ಟೀಚರ್ಸ್ ಟ್ರೈನಿಂಗ್ ಕೋರ್ಸ್
ಪ್ರೈಮರಿ ಟೀಚರ್ಸ್ ಟ್ರೈನಿಂಗ್ (PTT)
Diploma in Computer Teachers Training Course
DIPLOMA IN COMPUTER DATA ENTRY OPERATOR
6 ತಿಂಗಳ DIT, DCA, DOA ಇತ್ಯಾದಿ ಕೋರ್ಸುಗಳು [Qual: SSLC/PUC]
ಸರಕಾರದ PM ವಿಶ್ವಕರ್ಮ ಹಾಗೂ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Empanelled & Recognised by Govt. of India & Karnataka
The RCSS
Mob. 9008419955, 9901520055, 9449198555
Email: info@thercss.co, Web: www.thercss.com

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಸೌಂದರ್ಯ-ಆರೋಗ್ಯ

Beauty Parlour

ಸೆಲೆಬ್ರಿಟಿ ಸಲೂನ್ & ಸ್ಪಾ (MEN* WOMEN* CHILDREN) ಐಬ್ರೋ ಫೇಷಿಯಲ್ ಬ್ಲೀಚಿಂಗ್-ಕ್ಲೀನ್ ಆಫ್ ಹೇರ್ ಡೈ ಮೆನಿಕ್ಯೂರ್ ಪೆಡಿಕ್ಯೂರ್ ವಿವಿಧ ರೀತಿಯ ಹೇರ್ ಕಟ್ ವ್ಯಾಕ್ಸಿಂಗ್ ಉಚಿತವಾಗಿ ಕೂಡಲಾಗುವುದು - ವಿಳಾಸ: ಎಸ್ ಸಿ ರೋಡ್ ಕುಮಾರ್ ಕೀನೊ ಎದುರುಗಡೆ ಶೇಷಾದ್ರಿಪುರಂ, ಬೆಂಗಳೂರು. 9019626612

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಸೌಲಭ್ಯ ವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606384001, 9606385001.

ಉದ್ಯೋಗಾವಕಾಶ

Engg/ Production Technical

WE ARE looking for qualified Diploma, ITI & B.Sc. graduates to join our growing team as Production Engineer to a factory at Maddur. Contact: 9741156703

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424
+91 9731810277 | +91 9900428036
*Conditions apply

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

LOOKING TO BUILD, BUY OR SELL A PROPERTY
Please refer Classifieds on Sunday

6ನೇ ವರ್ಷದ ಪುಣ್ಯ ಸ್ಮರಣೆ

ಶ್ರೀಮತಿ ಎ. ಅನಸೂಯ
ಸಂಸ್ಥಾಪಕರು,
ನಿವೇದಿತಾ ಶಾಲೆ, ಗವಿಪುರಂ ಎಕ್ಸ್ಟೆನ್ಷನ್ ಹಾಗೂ ವಸಂತಪುರ.

ನೀವು ನಮ್ಮನ್ನು ಅಗಲಿ ಇಂದಿಗೆ ಆರು ವರ್ಷ ಕಳೆದರೂ ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ.

ತಮ್ಮ ಸ್ಮರಣೆಯಲ್ಲಿರುವ
ಕುಟುಂಬ ವರ್ಗ, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು.

ಎರಡನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಕುಸುಮಾ ರಾಮಚಂದ್ರ
ಜನನ: 20-4-1960 ಮರಣ: 16-6-2023

ಜೀವನವನ್ನು ಸಂಭ್ರಮಿಸುತ್ತ ಪ್ರತಿ ಮಾರ್ಗದಲ್ಲೂ ನಾವು ಬದುಕಿದೆವು; ಓರ್ವ ಸಮರ್ಪಿತ ಪತ್ನಿ, ಅಪರೂಪದ ತಾಯಿ, ಕರ್ತವ್ಯನಿಷ್ಠೆ ಮಗಳು ಮಮತೆ ವಾತ್ಸಲ್ಯಭರಿತ ಅಜ್ಜಿ ಮತ್ತು ಸ್ನೇಹಜೀವದೊಂದಿಗೆ ಸಕಲರಿಗೂ ಮಾರ್ಗದರ್ಶನ ನೀಡಿದ ನಿಮಗೆ, ನಾವು ಚಿರಋಣಿಯಾಗಿದ್ದೇವೆ.

ಇಂತಿ ದುಃಖತಪ್ತರು:
ಪತಿ: ರಾಮಚಂದ್ರಪ್ಪ ತಂದೆ: ವೇಣುಗೋಪಾಲ
ಮಕ್ಕಳು: ಡಾ. ಚೈತ್ರಾ ಮತ್ತು ಡಾ. ದೀಪಿಕಾ
ಮೊಮ್ಮಕ್ಕಳು: ರಕ್ಷಿತ್, ಚಿರಂತ್ ಹಾಗೂ ಕಿಯರಾ
ಅಳಿಯಂದಿರು, ಸಹೋದರ ಸಹೋದರಿಯರು ಮತ್ತು ಕುಟುಂಬ ಸದಸ್ಯರು.

OBITUARY

In Loving Memory of

N. Rajanna (Ex MLA)

(10th October 1940 – 15th June 2025

With heartfelt sorrow, we announce the passing of N. Rajanna, former Member of the Legislative Assembly, Karnataka; a dedicated public servant, a voice for rural communities, and a passionate organic farmer.

A true son of the soil, he lived with humility, integrity, and unwavering commitment to the people. Whether in office or on his farm, he served with quiet strength and deep compassion.

He leaves behind a legacy of service, wisdom, and kindness; a life that touched many and inspired more.

Lovingly remembered by
His Wife, Children, Grandchildren & Great-grandchildren

ಚಿಟಿಕೆ ಸುದ್ದಿ

ಲಂಕಾ ತಂಡಕ್ಕೆ ಡಿಸಿಲ್ವಾ ನಾಯಕ

ಧನಂಜಯ್ ಡಿಸಿಲ್ವಾ

ಕೊಲಂಬೊ(ಎಎಫ್‌ಪಿ): ಶ್ರೀಲಂಕಾ ತಂಡಕ್ಕೆ ಧನಂಜಯ್ ಡಿಸಿಲ್ವಾ ಅವರನ್ನು ನಾಯಕರನ್ನಾಗಿ ನೇಮಕ ಮಾಡಲಾಗಿದೆ. ಮಂಗಳವಾರ ಆರಂಭವಾಗಲಿರುವ ಬಾಂಗ್ಲಾದೇಶ ಎದುರಿನ ಟೆಸ್ಟ್ ಸರಣಿಯಲ್ಲಿ ಡಿಸಿಲ್ವಾ ನಾಯಕತ್ವದಲ್ಲಿ 18 ಜನರ ತಂಡ ಕಣಕ್ಕಿಳಿಯಲಿದೆ.

ಕುಶಾಲ ಮೆಂಡಿಸ್, ಕಮಿಂದು ಮೆಂಡಿಸ್, ಪ್ರಭಾತ್ ಜಯಸೂರ್ಯ, ದಿನೇಶ್ ಚಾಂಡಿಮಲ್ ಮತ್ತು ಏಂಜೆಲೊ ಮ್ಯಾಥ್ಯೂಸ್ ಅವರು ಸ್ಥಾನ ಪಡೆದಿದ್ದಾರೆ. ಈ ಸರಣಿಯಲ್ಲಿ ಉಭಯ ತಂಡಗಳು ಎರಡು ಟೆಸ್ಟ್ ಪಂದ್ಯಗಳನ್ನು ಆಡಲಿವೆ ಎಂದು ಶ್ರೀಲಂಕಾ ಕ್ರಿಕೆಟ್ ಮಂಡಳಿ ತಿಳಿಸಿದೆ.

ಯು ಮುಂಬಾಕ್ಕೆ ಯುಟಿಟಿ ಕಿರೀಟ

ಅಹಮದಾಬಾದ್ (ಪಿಟಿಐ): ಯು ಮುಂಬಾ ತಂಡವು ಅಲ್ಟಿಮೇಟ್ ಟೇಬಲ್ ಟೆನಿಸ್ (ಯುಟಿಟಿ) ಆರನೇ ಆವೃತ್ತಿಯ ಕಿರೀಟವನ್ನು ಮುಡಿಗೇರಿಸಿಕೊಂಡಿತು.

ಇಲ್ಲಿನ ಇ.ಕೆ.ಎ. ಅರೆನಾದಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಮುಂಬಾ ತಂಡವು 8-4 ಅಂತರದಿಂದ ಜೈಪುರ ಪೇಟ್ರಿಯಾಟ್ಸ್ ತಂಡವನ್ನು ಸೋಲಿಸಿ, ತನ್ನ ಚೊಚ್ಚಲ ಪ್ರಶಸ್ತಿಯನ್ನು ಗೆದ್ದುಕೊಂಡಿತು.

ಚಾಂಪಿಯನ್ ಆಗಿ ಹೊರಹೊಮ್ಮಿದ ಯು ಮುಂಬಾ ತಂಡವು ₹ 60 ಲಕ್ಷ ಮತ್ತು ರನ್ನರ್ ಅಪ್ ಜೈಪುರ ತಂಡ ₹40 ಲಕ್ಷ ಬಹುಮಾನ ತನ್ನದಾಗಿಸಿಕೊಂಡಿತು.

ಟಿಟಿ: ಸಾತ್ವಿಕ್, ಸಾಕ್ಷ್ಯಾಗೆ ಪ್ರಶಸ್ತಿ

ಬೆಂಗಳೂರು: ಸಾತ್ವಿಕ್ ಎಂ. ಮತ್ತು ಸಾಕ್ಷ್ಯಾ ಸಂತೋಷ್ ಅವರು ಕರ್ನಾಟಕ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 13 ವರ್ಷದೊಳಗಿನವರ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದರು.

ನಗರದ ವಿ.ವಿ.ಪುರಂನ ಮ್ಯಾಚ್ ಪಾಯಿಂಟ್ ಅಕಾಡೆಮಿಯಲ್ಲಿ ಟೂರ್ನಿಯ ಕೊನೆಯ ದಿನವಾದ ಭಾನುವಾರ ಫೈನಲ್ ಪಂದ್ಯದಲ್ಲಿ ಸಾತ್ವಿಕ್ 12-10, 11-13, 8-11, 11-6, 11-8ರಿಂದ ಸಿದ್ಧಾಂತ್ ಎಂ. ಅವರನ್ನು ಸೋಲಿಸಿದರು. ಬಾಲಕಿಯರ ಫೈನಲ್‌ನಲ್ಲಿ ಸಾಕ್ಷ್ಯಾ 11-7, 11-6, 11-4ರಿಂದ ಮಿಹಿಕಾ ಆರ್.ಉಡುಪ ಅವರನ್ನು ಮಣಿಸಿದರು.

ಹೋಪ್ಸ್ ಬಾಲಕರಲ್ಲಿ ಅರ್ಣವ್ ಮಿಥುನ್ ಮತ್ತು ಬಾಲಕಿಯರಲ್ಲಿ ಸಾಕ್ಷ್ಯಾ ಸಂತೋಷ್ ಪ್ರಶಸ್ತಿ ಗೆದ್ದರು.

ಅಂಧರ ಚೆಸ್: ಶಶಿಧರ್ ಚಾಂಪಿಯನ್

ಹೊಸಪೇಟೆ: ಮೈಸೂರಿನ ಕೆ.ಎಂ. ಶಶಿಧರ್ ಅವರು ಇಲ್ಲಿನ ಸೇವಿಯರ್ ಅಂಗವಿಕಲರ ಸೇವಾ ಸಮಿತಿ ಹಾಗೂ ರೋಟರಿ ಕ್ಲಬ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ನಾಲ್ಕನೇ ರಾಜ್ಯಮಟ್ಟದ ವಿಜಯನಗರ ಕಪ್ ಅಂಧರ ಮುಕ್ತ ಚೆಸ್ ಟೂರ್ನಿಯಲ್ಲಿ 7.5 ಅಂಕದೊಂದಿಗೆ ಚಾಂಪಿಯನ್ ಆಗಿದ್ದಾರೆ.

ಇಲ್ಲಿ ಭಾನುವಾರ ಕೊನೆಗೊಂಡ ಒಂಬತ್ತನೇ ಸುತ್ತಿನ ಕೊನೆಯಲ್ಲಿ ಶಶಿಧರ್ 7 ಅಂಕ ಗಳಿಸಿ ಪ್ರಶಸ್ತಿಯೊಂದಿಗೆ ₹18,001 ಬಹುಮಾನ ಗಳಿಸಿದರು. ಬೆಂಗಳೂರಿನ ರವಿಕಿರಣ್ ದ್ವಿತೀಯ, ಎ.ಆರ್.ರಮೇಶ ತೃತೀಯ ಸ್ಥಾನ ಪಡೆದರು.

ತಂಡ ಸಂಸ್ಕೃತಿ ಬೆಳೆಸುವ ಗುರಿ

ಭಾರತ ಟೆಸ್ಟ್ ಕ್ರಿಕೆಟ್ ತಂಡದ ಯುವ ಸರದಾರ ಶುಭಮನ್ ಗಿಲ್ ಆಶಯ

ಲಂಡನ್ (ಪಿಟಿಐ): ಭಾರತ ಕ್ರಿಕೆಟ್ ತಂಡದಲ್ಲಿ ಪ್ರತಿಯೊಬ್ಬ ಆಟಗಾರ 'ಸುರಕ್ಷಿತ ಮತ್ತು ಸಂತಸ'ದಿಂದ ಇರಬೇಕು. 'ತಂಡ ಸಂಸ್ಕೃತಿ' ನೆಲೆಗೊಳಿಸಬೇಕು ಎಂಬ ಗುರಿಯನ್ನು ಯುವ ನಾಯಕ ಶುಭಮನ್ ಗಿಲ್ ಇಟ್ಟುಕೊಂಡಿದ್ದಾರಂತೆ.

ಇದೇ 20ರಿಂದ ಇಂಗ್ಲೆಂಡ್ ವಿರುದ್ಧ ನಡೆಯಲಿರುವ ಐದು ಟೆಸ್ಟ್ ಪಂದ್ಯಗಳ ಸರಣಿಯಲ್ಲಿ ಭಾರತ ತಂಡವನ್ನು ಗಿಲ್ ಮುನ್ನಡೆಸಲಿದ್ದಾರೆ. ಮೊದಲ ಪಂದ್ಯವು ಲೀಡ್ಸ್‌ನಲ್ಲಿ ನಡೆಯಲಿದೆ. 2007ರ ನಂತರ ಇಂಗ್ಲೆಂಡ್ ನೆಲದಲ್ಲಿ ಭಾರತ ತಂಡವು ಪ್ರಶಸ್ತಿ ಜಯಿಸಿಲ್ಲ.

'ನಾನು ಇಷ್ಟು ಬೇಗ ತಂಡಕ್ಕೆ ನಾಯಕನಾಗುತ್ತೇನೆ ಎಂದು ಕನಸಿನಲ್ಲಿಯೂ ಅಂದುಕೊಂಡಿರಲಿಲ್ಲ. ಆಟಗಾರರಲ್ಲಿ ಭದ್ರತೆ ಮತ್ತು ಸಂತಸದ ಭಾವ ಮೂಡಿಸುವುದಕ್ಕೆ ನನ್ನ ಆದ್ಯತೆ. ಒಟ್ಟಿನಲ್ಲಿ ತಂಡದಲ್ಲಿ ಆರೋಗ್ಯಪೂರ್ಣ ವಾತಾವರಣವಿರುವಂತೆ ಮಾಡುವುದೇ ಪ್ರಮುಖ ಗುರಿ' ಎಂದು ಗಿಲ್ ಸ್ಕೈ ಸ್ಪೋರ್ಟ್ಸ್ ವಾಹಿನಿಗೆ ಹೇಳಿದರು.

'ಈ ಗುರಿಯನ್ನು ಸಾಧಿಸುವುದು ಇಂದಿನ ವಾತಾವರಣದಲ್ಲಿ ಎಷ್ಟು ಕಠಿಣ ಎಂಬುದರ ಅರಿವು ನನಗಿದೆ. ಪ್ರಸ್ತುತ ನಾವು ಆಡುವ ಪಂದ್ಯಗಳ ಸಂಖ್ಯೆ, ಅಪಾರ ಸ್ಪರ್ಧೆ ಇದೆ. ಒಂದೊಮ್ಮೆ ಅಂದುಕೊಂಡ ಗುರಿಯನ್ನು ಸಾಧಿಸಿದರೆ ಎಲ್ಲ ರೀತಿಯಿಂದಲೂ ಒಳ್ಳೆಯದು. ತಂಡದಲ್ಲಿ ಸುರಕ್ಷತಾ ಭಾವ ಇರಬೇಕು. ಪ್ರತಿಯೊಬ್ಬ ಆಟಗಾರನ ಸಾಮರ್ಥ್ಯವನ್ನು ಗುರುತಿಸುವ ಕಾರ್ಯವನ್ನು ನಾಯಕರಾದವರು ಮಾಡಬೇಕು' ಎಂದರು.

'ರೋಹಿತ್ (ಶರ್ಮಾ) ಅವರು ತಮ್ಮ ತಂತ್ರಗಾರಿಕೆಯಲ್ಲಿ ಬಹಳ ಆಕ್ರಮಣಶೀಲರಾಗಿದ್ದರು. ಪಂದ್ಯಗಳಿಗೂ ಮುನ್ನ ಅವರ ಸಂವಹನವು ಸ್ಪಷ್ಟತೆಯಿಂದ ಕೂಡಿರುತ್ತಿತ್ತು. ಸರಣಿ ನಡೆಯುವ ಹೊತ್ತಿನಲ್ಲಿ ಅವರು ತಾವು ನಾಯಕರಾಗಿ ತಂಡದ ಆಟಗಾರರಿಂದ ಏನು ನಿರೀಕ್ಷಿಸುತ್ತಿದ್ದಾರೆಂಬುದನ್ನು ಸ್ಪಷ್ಟವಾಗಿ ಹೇಳುತ್ತಿದ್ದರು. ಅವರು ತಂಡದಲ್ಲಿ ಸೌಹಾರ್ದ ವಾತಾವರಣ ಮೂಡಿಸಿದ್ದರು. ಅವರ ವ್ಯಕ್ತಿತ್ವವು ಎಲ್ಲರಿಗೂ ಹೃದಯಸ್ಪರ್ಶಿಯಾಗಿತ್ತು' ಎಂದು ಗಿಲ್ ಹೇಳಿದರು.

ರೋಹಿತ್ ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ ನಂತರ ಗಿಲ್ ಅವರಿಗೆ ತಂಡದ ನಾಯಕಪಟ್ಟ ಕಟ್ಟಲಾಗಿದೆ. 25 ವರ್ಷದ ಗಿಲ್ ಅವರಿಗೆ ನಾಯಕರಾಗಿ ಇಂಗ್ಲೆಂಡ್ ಸರಣಿ ಮೊದಲ ಸವಾಲಾಗಿದೆ.

ಕೋಚ್ ಗೌತಮ್ ಗಂಭೀರ್ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಗಿಲ್, 'ಅವರು (ಗಂಭೀರ್) ಅಪಾರ ಬದ್ಧತೆಯುಳ್ಳವರು. ಸ್ಪಷ್ಟ ಸಂವಹನಕಾರ. ಆಟಗಾರರಿಂದ ತಾವು ಇಟ್ಟುಕೊಂಡಿರುವ ನಿರೀಕ್ಷೆಯನ್ನು ನೇರವಾಗಿ ಹೇಳುತ್ತಾರೆ. ಆಟಗಾರರ ನಡವಳಿಕೆ, ಮನಸ್ಥಿತಿಯನ್ನು ಹೆಚ್ಚು ಗಮನಿಸುತ್ತಾರೆ' ಎಂದರು.

ಶುಭಮನ್ ಗಿಲ್

ಮುಖ್ಯಾಂಶಗಳು

- ಇದೇ 20ರಿಂದ ಇಂಗ್ಲೆಂಡ್ ವಿರುದ್ಧ ಐದು ಟೆಸ್ಟ್ ಪಂದ್ಯಗಳ ಸರಣಿ
- ಶುಭಮನ್ ಗಿಲ್‌ಗೆ ಇಂಗ್ಲೆಂಡ್ ಸರಣಿ ಮೊದಲ ಸವಾಲು

ಸ್ಪಿನ್ನರ್‌ಗಳಿಗೆ ಇಂಗ್ಲೆಂಡ್‌ನ ಪಿಚ್ ನೆರವು: ಕುಲದೀಪ್ ಯಾದವ್

ಬೆಕೆನ್‌ಹ್ಯಾಮ್ (ಪಿಟಿಐ): ಇಂಗ್ಲೆಂಡ್‌ನಲ್ಲಿರುವ ಪಿಚ್‌ಗಳು ಸ್ಪಿನ್ ಬೌಲರ್‌ಗಳಿಗೆ ನೆರವಾಗುವಂತೆ ಕಾಣುತ್ತಿವೆ. ಬ್ಯಾಟರ್‌ಗಳಿಗೂ ಅನುಕೂಲಕರವಾಗುವಂತಿವೆ ಎಂದು ಭಾರತ ತಂಡದ ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಹೇಳಿದರು.

ಇಲ್ಲಿ ನಡೆಯುತ್ತಿರುವ ಭಾರತ ಮತ್ತು ಭಾರತ ಎ ತಂಡಗಳ ನಡುವಣ ಅಭ್ಯಾಸ ಪಂದ್ಯದ ಸಂದರ್ಭದಲ್ಲಿ ಅವರು ಮಾತನಾಡಿದರು.

'ಪಂದ್ಯದ ಮೊದಲ ದಿನ ತೇವಾಂಶ ಜಾಸ್ತಿ ಇದ್ದು ವೇಗಿಗಳಿಗೆ ಹೆಚ್ಚು ನೆರವಾಗಬಹುದು. ಆಟ ಮುಂದುವರಿದಂತೆ ಸ್ಪಿನ್ನರ್‌ಗಳಿಗೆ ಹೆಚ್ಚು ಉಪಯುಕ್ತವಾಗುವ ಸಾಧ್ಯತೆ ಹೆಚ್ಚಿದೆ' ಎಂದು ಹೇಳಿದರು.

'ಇವತ್ತು ಪಂದ್ಯದ ಮೂರನೇ ದಿನವಾಗಿದೆ. ಈ ಪಿಚ್‌ನಲ್ಲಿ ಸ್ಪಿನ್ ಎಸೆತಗಳು ಬೌನ್ಸ್ ಆಗುತ್ತಿವೆ. ಚೆಂಡು ಸ್ವಲ್ಪ ತಿರುಗುತ್ತಿದೆ' ಎಂದು ವಿವರಿಸಿದರು.

'ರವೀಂದ್ರ ಜಡೇಜ ಅವರ ಜೊತೆಗೂಡಿ ಆಡುತ್ತಿರುವುದು ನನಗೆ ಗೌರವದ ಸಂಗತಿ. ಜಡೇಜ ಮತ್ತು ಅಶ್ವಿನ್ ಅವರು ಭಾರತ ತಂಡಕ್ಕೆ ನೀಡಿರುವ ಕಾಣಿಕೆ ದೊಡ್ಡದು. ನಾನು ಪದಾರ್ಪಣೆ ಮಾಡಿದಾಗ ಅವರು ಬಹಳ ಉತ್ತಮ ಮಾರ್ಗದರ್ಶನ ನೀಡಿದ್ದರು. ಜಡ್ಡು (ಜಡೇಜ) ಜೊತೆಗೆ ನಾನು ಪ್ರತಿದಿನವೂ ಆಟದ ಕುರಿತು ಮಾತನಾಡುತ್ತೇನೆ. ಅವರ ಅನುಭವದ ನುಡಿಗಳು ಬಹಳ ಉಪಯುಕ್ತವಾಗಿವೆ' ಎಂದು ಕುಲದೀಪ್ ಹೇಳಿದರು.

ಪ್ರಶಸ್ತಿಯೊಂದಿಗೆ ಮೌಂಟ್ಸ್ ಕ್ಲಬ್ ಬಾಲಕಿಯರ ತಂಡ. (ನಿಂತವರು) ಎಡದಿಂದ: ಅನನ್ಯಾ ಜೆ, ಝುರಾ ಡಿ, ನಿಧಿ ಉಮೇಶ್, ಜಯಂತಿ (ಕೋಚ್) ಕೆ. ಗೋವಿಂದರಾಜ್ (ಫಿಬಾ ಏಷ್ಯಾ ಅಧ್ಯಕ್ಷ), ನಿಲಾಯ ರೆಡ್ಡಿ (ನಾಯಕಿ), ಅಂತರಾ ಕೆ.ಜಿ ಮತ್ತು ಜಾಹ್ನವಿ ಡಿ. (ಮಂಡಿಯೂರಿದವರು) ಅನುಷ್ಕಾ, ಅನನ್ಯಾ ಗೌತಮ್, ನಕ್ಷತ್ರಾ ಕೆ. ಮತ್ತು ತಸ್ಮಿ ಶೆಟ್ಟಿ ಡಿ. ಪ್ರಜಾವಾಣಿ ಚಿತ್ರ

ರಾಜ್ಯ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್

ಚಿಕ್ಕಮಗಳೂರು, ಮೌಂಟ್ಸ್ ತಂಡಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಮಗಳೂರು ಜಿಲ್ಲೆ ಮತ್ತು ಮೌಂಟ್ಸ್ ಕ್ಲಬ್ ತಂಡಗಳು ಡಿ.ಎನ್.ರಾಜಣ್ಣ ಸ್ಮರಣಾರ್ಥ ಟ್ರೋಫಿಗಾಗಿ ನಡೆದ ರಾಜ್ಯ ಜೂನಿಯರ್ (18 ವರ್ಷದೊಳಗಿನವರ) ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ಪ್ರಶಸ್ತಿಯನ್ನು ಗೆದ್ದುಕೊಂಡವು.

ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಬಾಲಕರ ಫೈನಲ್ ಹಣಾಹಣಿಯಲ್ಲಿ ಚಿಕ್ಕಮಗಳೂರು ತಂಡವು 91-78ರಿಂದ ಡಿವೈಇಎಸ್ ಬೆಂಗಳೂರು ತಂಡವನ್ನು ಮಣಿಸಿತು. ಚಿಕ್ಕಮಗಳೂರು ಪರ ನಿಶಾಂತ್ 30, ನೆಟ್ಲ ಚಾಣಕ್ಯ 20, ರೆಹಾನ್ ಖಾನ್ 18 ಅಂಕ ಗಳಿಸಿದರು. ಡಿವೈಇಎಸ್ ಪರ ಬಾತೇಶ್ 29, ಲಿಖಿತ್ 12 ಅಂಕ ಕಲೆಹಾಕಿದರು.

ಬಾಲಕಿಯರ ಫೈನಲ್‌ನಲ್ಲಿ ಮೌಂಟ್ಸ್ ತಂಡವು 54-47ರಿಂದ ಮೈಸೂರು ಜಿಲ್ಲೆ 'ಎ' ತಂಡವನ್ನು ಮಣಿಸಿತು. ನಿಲಾಯ ರೆಡ್ಡಿ 20, ನಕ್ಷತ್ರ 16 ಅಂಕಗಳನ್ನು ಮೌಂಟ್ಸ್ ತಂಡಕ್ಕೆ ತಂದಿತ್ತರು. ಮೈಸೂರು ಪರ ಕುಸುಮಾ (21) ಮಿಂಚಿದರು.

ಬಾಲಕರಲ್ಲಿ ಹೂಪ್ಸ್ 7 ಬಿ.ಸಿ ಮತ್ತು ಎಚ್‌ಬಿಆರ್ ಬಿ.ಸಿ ತಂಡಗಳು ಕ್ರಮವಾಗಿ ಮೂರನೇ ಮತ್ತು ನಾಲ್ಕನೇ ಸ್ಥಾನ ಪಡೆದವು. ಬಾಲಕಿಯರಲ್ಲಿ ಮಂಡ್ಯ ಮೂರನೇ ಮತ್ತು ಬೆಂಗಳೂರು ವ್ಯಾನ್ಗಾರ್ಡ್ಸ್ ನಾಲ್ಕನೇ ಸ್ಥಾನ ಗಳಿಸಿತು.

ಪ್ರಶಸ್ತಿ ಗೆದ್ದ ತಂಡಕ್ಕೆ ₹30 ಸಾವಿರ, ರನ್ನರ್ಸ್ ಅಪ್ ತಂಡಕ್ಕೆ ₹20 ಸಾವಿರ ಮತ್ತು ಮೂರನೇ ಸ್ಥಾನ ಪಡೆದ ತಂಡಕ್ಕೆ ₹ 10 ಸಾವಿರ ಬಹುಮಾನ ನೀಡಲಾಯಿತು. ಫಿಬಾ ಏಷ್ಯಾ ಅಧ್ಯಕ್ಷ ಕೆ.ಗೋವಿಂದರಾಜ್, ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಉಪಾಧ್ಯಕ್ಷರಾದ ರಾಜನ್, ಗುಣಶೇಖರ ಬಹುಮಾನ ವಿತರಿಸಿದರು.

ಕಿಕ್‌ಸ್ಟಾರ್ಟ್‌ಗೆ ಕಿರೀಟ

ಪ್ರಜಾವಾಣಿ ಚಿತ್ರ: ಎಸ್.ಕೆ.ದಿನೇಶ್

ಕಿಕ್‌ಸ್ಟಾರ್ಟ್ ಎಫ್‌ಸಿ ಕರ್ನಾಟಕ ತಂಡವು ಭಾನುವಾರ ಬೆಂಗಳೂರಿನ ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಕೆಎಸ್‌ಎಫ್‌ಎ ಯೂತ್ (21 ವರ್ಷದೊಳಗಿನವರ) ಪ್ರೀಮಿಯರ್ ಲೀಗ್‌ನ ಪ್ರಶಸ್ತಿ ಗೆದ್ದುಕೊಂಡಿತು. (ನಿಂತವರು) ಎಡದಿಂದ: ಕಿರಣ್ ಕುಮಾರ್ ಎನ್., ಪ್ರೇಮಿಶ್ ಟಿ., ಲೈಶ್ರಾಮ್ ಧನಂಜಯ್, ಆಶಿಶ್ ಕುಮಾರ್ ಎಲ್., ಜಬೀರ್ ಅಬ್ದುಲ್ ಜಲೀಲ್ (ಫಿಸಿಯೊ), ಸರವಣ ಧರ್ಮನ್ ಡಿ. (ಟೀಂ ಮ್ಯಾನೇಜರ್), ರಘು ಕುಮಾರ್ ಮುನಿಸ್ವಾಮಿ (ಸಹಾಯಕ ಕೋಚ್), ಟಿ. ಅರುಮುಗಂ (ಮುಖ್ಯ ಕೋಚ್), ಆರ್. ಅನಿಲ್ ಕುಂಬ್ಳೆ, ಶಾಲೋಮ್ ಎಸ್., ಮೋಹಕ್ ಮುತ್ತಲ್ಮನಿ, ಇಶಾನ್ ರಾಬರ್ಟ್ಸ್, ಪಿ. ತುಬೋಯ್ ಮತ್ತು ಸೈಖೋಮ್ ಬೋರಿಶ್ ಸಿಂಗ್. (ಕುಳಿತವರು) ಎಸ್. ಧರ್ಮಜೋಯ್ ಸಿಂಗ್, ಕೆ. ರಿಷಿಕಾಂತ ಸಿಂಗ್, ಅವಿನಾಶ್ ಎಂ., ಡಿ.ಮದನ್ ಬಾಬು, ವಿಘ್ನೇಶ್ ವಿನೋದ್, ಆಕಾಂಶ್, ವಿಕ್ರಮ್ ಪಿ., ಅಲೆನ್ ಡಿ. (ನಾಯಕ), ಬಿಶ್ವಾಸ್ ಬುಧಾ ಚೆರ್ರಿ ಮತ್ತು ಅನೋಜ್ ಆಂಟೋನಿ

ಚೆಸ್: ನಾಕೌಟ್‌ಗೆ ಎಂಜಿಡಿ1 ತಂಡ

ಹರಿಕೃಷ್ಣ

ಲಂಡನ್ (ಪಿಟಿಐ): ವಿಶ್ವ ರ‍್ಯಾಪಿಡ್ ಚೆಸ್ ಟೀಮ್ ಚಾಂಪಿಯನ್‌ಷಿಪ್ ಗೆದ್ದುಕೊಂಡ ಭಾರತದ ಮೊದಲ ತಂಡ ಎನಿಸಿದ ಮರುದಿನವೇ, ಎಂಜಿಡಿ1 ತಂಡ ಮತ್ತೊಂದು ಅಧಿಕಾರಯುತ ಪ್ರದರ್ಶನದೊಡನೆ 'ಬ್ಲಿಟ್ಜ್' ಟೀಮ್ ಟೂರ್ನಿಯ ನಾಕೌಟ್ ಹಂತ ತಲುಪಿತು. ಈಗ ತಂಡದ ಮುಂದೆ 'ಚಿನ್ನದ ಡಬಲ್' ಸಾಧಿಸುವ ಅವಕಾಶ ಇದೆ.

ನಾಲ್ಕು ಗುಂಪುಗಳಿಂದ 16 ತಂಡಗಳು ಭಾನುವಾರ ನಾಕೌಟ್‌ಗೆ ತಲುಪಿವೆ. 'ಡಿ' ಗುಂಪಿನಲ್ಲಿದ್ದ ಎಂಜಿಡಿ1 ತಂಡ, ಹಂಗೆರಿ ಎದುರು ಡ್ರಾ ಮಾಡಿಕೊಂಡು, ಉಳಿದ ಎಲ್ಲಾ ಪಂದ್ಯಗಳನ್ನು ಗೆದ್ದುಕೊಂಡು 23 ಮ್ಯಾಚ್ ಪಾಯಿಂಟ್ಸ್ ಸಂಗ್ರಹಿಸಿತು. 53 ತಂಡಗಳು ರೌಂಡ್ ರಾಬಿನ್ ಮಾದರಿಯ ಗುಂಪು ಹಂತದಲ್ಲಿ ಭಾಗವಹಿಸಿದ್ದು ಪ್ರತಿ ಗುಂಪಿನಲ್ಲಿ ಮೊದಲ ನಾಲ್ಕು ತಂಡ ಪಡೆದ ತಂಡಗಳು ಪ್ರಿಕ್ವಾರ್ಟರ್‌ಫೈನಲ್ ತಲುಪಿವೆ.

ಗ್ರ್ಯಾಂಡ್ ಮಾಸ್ಟರ್‌ಗಳಾದ ಅರ್ಜುನ್ ಇರಿಗೇಶಿ, ಪಿ.ಹರಿಕೃಷ್ಣ, ವಿ.ಪ್ರಣವ್, ಲಿಯಾನ್ ಲೂಕ್ ಮೆಂಡೋನ್ಸಾ ಜೊತೆಗೆ ಸ್ವಾವ್ರೊಲಾ ಸೊಲಕಿಡೊ ಮತ್ತು ಅಥರ್ವ ತಾಯಡೆ ಅವರನ್ನು ಒಳಗೊಂಡ ಎಂಜಿಡಿ1 ತಂಡವು ಐದು ಪಂದ್ಯಗಳಲ್ಲಿ ಜಯ ಸಾಧಿಸಿತು. ಇದು ಅರ್ಹತೆ ಪಡೆದ 16 ತಂಡಗಳಲ್ಲಿ ಅತಿ ಹೆಚ್ಚು.

ತಂಡದ ಅಗ್ರ ಆಟಗಾರ ಇರಿಗೇಶಿ 13 ಪಂದ್ಯಗಳಲ್ಲಿ 11 ಗೆದ್ದುಕೊಂಡು ಅತ್ಯುತ್ತಮ ಸಾಧನೆ ದಾಖಲಿಸಿದರು. ಕಾಝುಖ್ ಚೆಸ್ ತಂಡ ಡಿ ಗುಂಪಿನಲ್ಲಿ ಎರಡನೇ ಸ್ಥಾನ ಪಡೆಯಿತು. ಈ ತಂಡದಲ್ಲಿ ಹವ್ಯಾಸಿ ಆಟಗಾರ ಇಸ್ಲಾಂ ಐತೆನ್ ಅತಿ ಹೆಚ್ಚಿನ ಕಾಣಿಕೆ (13 ಪಂದ್ಯಗಳಿಂದ 12 ಪಾಯಿಂಟ್) ನೀಡಿದರು.

ಐದು ಬಾರಿಯ ವಿಶ್ವ ಚಾಂಪಿಯನ್ ವಿಶ್ವನಾಥನ್ ಆನಂದ್ ಅವರನ್ನು ಒಳಗೊಂಡ ಫ್ರೀಡಂ ತಂಡ 22 ಪಾಯಿಂಟ್ಸ್ ಸಂಗ್ರಹಿಸಿ ಬಿ ಗುಂಪಿನಲ್ಲಿ ಹೆಕ್ಸಾಮಿಡ್ ಜೊತೆ ಜಂಟಿ ಅಗ್ರಸ್ಥಾನ ಪಡೆಯಿತು. ಬ್ಲಿಟ್ಜ್ ಟೂರ್ನಿಯು ಸುಮಾರು ₹1.90 ಕೋಟಿ ಬಹುಮಾನ ಮೊತ್ತ ಹೊಂದಿದೆ.

ಬಿಸಿಸಿಐ ಸಿಬ್ಬಂದಿಯ ಬಾಕಿ ಭತ್ಯೆ ಬಿಡುಗಡೆ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ವಿವಿಧ ವಿಭಾಗಗಳಲ್ಲಿರುವ ಸಿಬ್ಬಂದಿಗೆ ಬಾಕಿಯಿದ್ದ ದಿನಭತ್ಯೆಯನ್ನು ಬಿಡುಗಡೆ ಮಾಡಲಾಗಿದೆ. ಕಳೆದ ಜನವರಿಯಿಂದ ದಿನಭತ್ಯೆ ನೀಡಿರಲಿಲ್ಲ.

ದೇಶಿ ಟೂರ್ನಿಗಳ ಭತ್ಯೆ ನಿಯಮವನ್ನು ಪರಿಷ್ಕರಣೆಗೊಳಿಸುವ ಕಾರ್ಯಕ್ಕೆ ಬಿಸಿಸಿಐ ಮುಂದಾಗಿದೆ. ಈ ಪ್ರಕ್ರಿಯೆಯಲ್ಲಿ ಸಿಬ್ಬಂದಿಯ ಭತ್ಯೆಯನ್ನು ಮಂಜೂರು ಮಾಡಲಾಗಿದೆ.

ಪ್ರಸ್ತುತ ನಿಯಮದ ಪ್ರಕಾರ ಕಡಿಮೆ ಅವಧಿಯ (4 ದಿನಗಳವರೆಗೆ) ಪ್ರವಾಸಗಳಿಗೆ ದಿನವೊಂದಕ್ಕೆ ₹ 15 ಸಾವಿರ ಮತ್ತು ದೀರ್ಘ ಅವಧಿಯ ಪ್ರವಾಸಗಳಲ್ಲಿ ಅಂದರೆ, ಐಪಿಎಲ್, ಮಹಿಳಾ ಪ್ರೀಮಿಯರ್ ಲೀಗ್ ಮತ್ತು ಭಾರತದಲ್ಲಿ ನಡೆಯುವ ಐಸಿಸಿ ಟೂರ್ನಿಗಳಿಗೆ ₹ 10 ಸಾವಿರ ನೀಡಲಾಗುತ್ತದೆ. ಸಾಂದರ್ಭಿಕ ಭತ್ಯೆಯಾಗಿ ₹ 7500 ಕೂಡ ಒಂದು ಬಾರಿ ನೀಡಲಾಗುತ್ತದೆ.

ಭವಿಷ್ಯದಲ್ಲಿ ಸಾಲುಗಟ್ಟಲಿವೆ ಪ್ರಶಸ್ತಿಗಳು

ವಿಶ್ವ ಟೆಸ್ಟ್ ಚಾಂಪಿಯನ್ ದಕ್ಷಿಣ ಆಫ್ರಿಕಾ ತಂಡದ ನಾಯಕ ಬವುಮಾ ವಿಶ್ವಾಸ

ಲಂಡನ್ (ಎಎಫ್‌ಪಿ): ದಕ್ಷಿಣ ಆಫ್ರಿಕಾ ತಂಡವನ್ನು ವಿಶ್ವ ಟೆಸ್ಟ್ ಚಾಂಪಿಯನ್ ಪಟ್ಟಕ್ಕೇರಿಸಿದ ತೆಂಬಾ ಬವುಮಾ ಅವರಿಗೆ ಈಗ ವಿಶ್ವದ ಎಲ್ಲ ಕಡೆಯಿಂದಲೂ ಮೆಚ್ಚುಗೆಯ ಮಹಾಪೂರವೇ ಹರಿದುಬರುತ್ತಿದೆ.

27 ವರ್ಷಗಳ ನಂತರ ದಕ್ಷಿಣ ಆಫ್ರಿಕಾಕ್ಕೆ ಒಲಿದಿರುವ ಐಸಿಸಿ ಟ್ರೋಫಿ ಇದಾಗಿದೆ. ತಂಡದ 'ಚೋಕರ್ಸ್' ಹಣೆಪಟ್ಟಿಯೂ ಈಗ ಕಳಚಿಬಿದ್ದಿದೆ. 'ರೈನ್‌ಬೋ ನೇಷನ್' ದಕ್ಷಿಣ ಆಫ್ರಿಕಾ ತಂಡವು ಫೈನಲ್‌ನಲ್ಲಿ ಬಲಾಢ್ಯ ಆಸ್ಟ್ರೇಲಿಯಾ ವಿರುದ್ಧ ಗೆದ್ದಿತು. ಗುರಿ ಬೆನ್ನಟ್ಟಿದ್ದ ದಕ್ಷಿಣ ಆಫ್ರಿಕಾ ತಂಡದ ಒತ್ತಡ ಹೆಚ್ಚಿಸಲು ಆಸ್ಟ್ರೇಲಿಯಾದ ಆಟಗಾರರು ತಮ್ಮ ಹಳೆಯ ಚಾಳಿಯಾದ 'ನಿಂದನೆ' ತಂತ್ರಗಳನ್ನು ಬಳಸಿದ್ದರು. ಆದರೂ ಎದೆಗುಂದದ ಏಡನ್ ಮರ್ಕರಂ ಮತ್ತು ತೆಂಬಾ ಬವುಮಾ ಅವರು ದಿಟ್ಟ ಜೊತೆಯಾಟವಾಡಿ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು.

'ಇದು ಆರಂಭವಷ್ಟೇ. ಇದರೊಂದಿಗೆ ತಂಡಕ್ಕೆ ಪ್ರಶಸ್ತಿ ಗೆಲುವುಗಳು ಸಾಲುಗಟ್ಟಲಿವೆ ಎಂಬ ವಿಶ್ವಾಸವಿದೆ. ನಾವು ಹೆಚ್ಚು ಟೆಸ್ಟ್ ಪಂದ್ಯಗಳನ್ನು ಆಡುವ ಇಚ್ಛೆ ಹೊಂದಿದ್ದೇವೆ. ಹೆಚ್ಚೆಚ್ಚು ಗೆಲುವುಗಳ ಗುರಿಯೂ ಇದೆ. ಅದರಲ್ಲೂ ಬಲಿಷ್ಠ ಕ್ರಿಕೆಟ್ ತಂಡಗಳ ಎದುರು ಗೆಲ್ಲುವ ಛಲವಿದೆ' ಎಂದು ಪಂದ್ಯದ ನಂತರ ತೆಂಬಾ ಅವರು ಸುದ್ದಿಗಾರರಿಗೆ ಹೇಳಿದರು.

ಸದ್ಯದ ವೇಳಾಪಟ್ಟಿಯ ಪ್ರಕಾರ 2025ರಲ್ಲಿ ದಕ್ಷಿಣ ಆಫ್ರಿಕಾ ತಂಡವು ತನ್ನ ತವರಿನಲ್ಲಿ ಒಂದೂ ಟೆಸ್ಟ್ ಪಂದ್ಯ ಆಡುತ್ತಿಲ್ಲ.

'ಕಳೆದ ಮೂರೂವರೆ ದಿನಗಳಲ್ಲಿ ನಾವು ಅಂತಹ ಉತ್ಕೃಷ್ಟ ಗುಣಮಟ್ಟದ ಕ್ರಿಕೆಟ್ ಆಡಿರಲಿಲ್ಲ. ಆದರೆ, ಗೆಲುವಿನ ದಾರಿ ಹುಡುಕುವ ಛಲ ಮಾತ್ರ ಬಿಟ್ಟಿರಲಿಲ್ಲ. ಅದರಿಂದಾಗಿ ಗೆಲುವು ಸಾಧ್ಯವಾಯಿತು' ಎಂದು 35 ವರ್ಷದ ತೆಂಬಾ ಹೇಳಿದರು.

ತಂಡವು ಈ ಮಟ್ಟಕ್ಕೆ ಬೆಳೆಯಲು ಈ ಹಿಂದೆ ನಾಯಕತ್ವ ವಹಿಸಿದ್ದವರು ಮತ್ತು ಖ್ಯಾತನಾಮ ಆಟಗಾರರ ಶ್ರಮವೂ ಕಾರಣ ಎಂದು ತೆಂಬಾ ಸ್ಮರಿಸಿದರು. ವಿಶೇಷವಾಗಿ ಗ್ರೆಮ್ ಸ್ಮಿತ್ ಅವರ ಬಗ್ಗೆ ಗೌರವ ವ್ಯಕ್ತಪಡಿಸಿದರು.

'ಸ್ಮಿತ್ ಮತ್ತು ತಂಡವು 2013ರಿಂದ 2015ರ ಅವಧಿಯಲ್ಲಿ ತಂಡವು ಉನ್ನತ ಸಾಧನೆ ಮಾಡಿತ್ತು. ನಾವು ಕೂಡ ಅವರಂತೆಯೇ ಆಡಬೇಕು. ನಮ್ಮ ಗುರಿಯೂ ಗೆಲುವಾಗಬೇಕು ಎಂಬುದು ಈಗಿನ ತಂಡದ ಆಟಗಾರರಿಗೆ ಮನದಟ್ಟಾಗಿತ್ತು' ಎಂದರು.

ನಾಲ್ಕನೇ ಆವೃತ್ತಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ನಲ್ಲಿ ದಕ್ಷಿಣ ಆಫ್ರಿಕಾ ಇನ್ನಷ್ಟೇ ಅಭಿಯಾನ ಆರಂಭಿಸಬೇಕಿದೆ.

'ಪಾಕಿಸ್ತಾನ ಮತ್ತು ಭಾರತ ಪ್ರವಾಸ ಮಾಡಲಿದ್ದೇವೆ. ಅಲ್ಲಿ ನಡೆಯುವ ಸರಣಿಗಳನ್ನು ಜಯಿಸಬೇಕಿದೆ' ಎಂದರು.

ಮುಖ್ಯಾಂಶಗಳು

- 27 ವರ್ಷಗಳ ನಂತರ ದಕ್ಷಿಣ ಆಫ್ರಿಕಾಕ್ಕೆ ಐಸಿಸಿ ಟ್ರೋಫಿ
- 'ಚೋಕರ್ಸ್' ಹಣೆಪಟ್ಟಿ ಕಳಚಿಕೊಂಡ ಹರಿಣಗಳು
- ಫೈನಲ್‌ನಲ್ಲಿ ಬಲಾಢ್ಯ ಆಸ್ಟ್ರೇಲಿಯಾ ವಿರುದ್ಧ ಗೆಲುವು

ಡಬ್ಲ್ಯುಟಿಸಿ ಜಯಿಸಿದ ದಕ್ಷಿಣ ಆಫ್ರಿಕಾ ತಂಡದ ನಾಯಕ ತೆಂಬಾ ಬವುಮಾ ಅವರು 'ಐಸಿಸಿ ಗದೆ'ಯೊಂದಿಗೆ ಲಾರ್ಡ್ಸ್ ಕ್ರೀಡಾಂಗಣದ ಪೆವಿಲಿಯನ್ ಹೆಬ್ಬಾಗಿಲಿನಲ್ಲಿ ಕಂಡಿದ್ದು ಹೀಗೆ. ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಈ ಚಿತ್ರವನ್ನು ತನ್ನ ಫೇಸ್‌ಬುಕ್ ಖಾತೆಯಲ್ಲಿ ಹಂಚಿಕೊಂಡು, ವಿಜೇತ ತಂಡವನ್ನು ಅಭಿನಂದಿಸಿದೆ

'ನಿದ್ರೆ ಮಾತ್ರೆ ನುಂಗಿದರೂ ಮಲಗಲಿಲ್ಲ'

282 ರನ್‌ಗಳ ಗುರಿ ಬೆನ್ನಟ್ಟಿದ್ದ ದಕ್ಷಿಣ ಆಫ್ರಿಕಾ ತಂಡಕ್ಕೆ ಏಡನ್ ಮರ್ಕರಂ ಗೆಲುವಿನ ರೂವಾರಿಯಾಗಿದ್ದರು. ಅವರು ಶುಕ್ರವಾರ ದಿನದಾಟದ ಅಂತ್ಯಕ್ಕೆ ಅಜೇಯ 102 ರನ್ ಗಳಿಸಿದ್ದರು. ತಂಡದ ಜಯಕ್ಕೆ ಇನ್ನೂ 69 ರನ್‌ಗಳ ಅಗತ್ಯವಿತ್ತು. ಶನಿವಾರ ಅದನ್ನು ಸಾಧಿಸುವ ವಿಶ್ವಾಸವಿತ್ತು. ಆದರೂ ಶುಕ್ರವಾರ ರಾತ್ರಿಯಿಡೀ ಅವರಿಗೆ ನಿದ್ದೆಯೇ ಬಂದಿರಲಲ್ಲವಂತೆ.

'ಅವತ್ತು ರಾತ್ರಿ ಮಲಗಲು ಸಾಧ್ಯವೇ ಆಗಲಿಲ್ಲ. ನಿದ್ರೆ ಮಾತ್ರೆ ನುಂಗಿದರೂ ಮಲಗಲಾಗಲಿಲ್ಲ. ಹೋದ ವರ್ಷದ ಟಿ20 ವಿಶ್ವಕಪ್ ಫೈನಲ್ ಸೋಲಿನ ಕಹಿ ನೆನಪು ಪದೇಪದೇ ಮರುಕಳಿಸುತ್ತಿತ್ತು' ಎಂದು ಸುದ್ದಿಗೋಷ್ಠಿಯಲ್ಲಿ ಮರ್ಕರಂ ಹೇಳಿದರು. ಅಮೆರಿಕ–ವೆಸ್ಟ್ ಇಂಡೀಸ್ ಆತಿಥ್ಯದಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವು ಭಾರತದ ಎದುರು ಪರಾಭವಗೊಂಡಿತ್ತು. ಆ ಟೂರ್ನಿಯಲ್ಲಿ ದಕ್ಷಿಣ ಆಫ್ರಿಕಾದ ನಾಯಕತ್ವವನ್ನು ಮರ್ಕರಂ ವಹಿಸಿದ್ದರು.

'ಲಾರ್ಡ್ಸ್‌ನಲ್ಲಿ ಅವತ್ತು (ಶನಿವಾರ) ಅಪಾರ ಒತ್ತಡವಿತ್ತು. ನಾನು ಕ್ರೀಸ್‌ನಲ್ಲಿದ್ದ ಸೆಟ್ ಆಗಿದ್ದ ಕಾರಣ ತಂಡವನ್ನು ಗೆಲುವಿನ ದಡ ಮುಟ್ಟಿಸಿ ಹೋಗಬೇಕೆನ್ನುವ ಛಲ ಇತ್ತು. ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ತಂಡದ ಮತ್ತೊಬ್ಬ ಬ್ಯಾಟರ್ ಬಂದು ಒತ್ತಡಕ್ಕೆ ಸಿಲುಕಿಕೊಳ್ಳುವುದು ನನಗೆ ಇಷ್ಟವಿರಲಿಲ್ಲ' ಎಂದರು.

'ವರ್ಗಾವಣೆ ತಪ್ಪಿಸಲು ಅಂಗವೈಕಲ್ಯದ ಪ್ರಮಾಣ ಪತ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಪ್ರಾಧ್ಯಾಪಕರ ವರ್ಗಾವಣೆ ಪ್ರಕ್ರಿಯೆ ಆರಂಭವಾಗಿದ್ದು, ಕೆಲವರು ವರ್ಗಾವಣೆ ತಪ್ಪಿಸಿಕೊಳ್ಳಲು ತಾವು ಅಂಗವಿಕಲರು ಎಂದು ನಕಲಿ ಪ್ರಮಾಣಪತ್ರ ಸಲ್ಲಿಸುತ್ತಿದ್ದಾರೆ' ಎಂದು ಕೆಲ ಪ್ರಾಧ್ಯಾಪಕರು ಆರೋಪಿಸಿದ್ದಾರೆ.

ಈ ಸಂಬಂಧ ಕೆಲ ಅಂಗವಿಕಲ ಪ್ರಾಧ್ಯಾಪಕರು ಕಾಲೇಜು ಶಿಕ್ಷಣ ಇಲಾಖೆಗೆ ಪತ್ರ ಬರೆದಿದ್ದು, 'ಪ್ರಜಾವಾಣಿ'ಗೂ ಪತ್ರದ ಪ್ರತಿ ಕಳುಹಿಸಿದ್ದಾರೆ.

'ವರ್ಗಾವಣೆಯಿಂದ ತಪ್ಪಿಸಿಕೊಳ್ಳಲೆಂದೇ ಅಂಗವಿಕಲತೆ ಕುರಿತ ಸುಳ್ಳು ಪ್ರಮಾಣ ಪತ್ರ ಸಲ್ಲಿಸುತ್ತಿದ್ದಾರೆ. ವರ್ಗಾವಣೆ ಪ್ರಕ್ರಿಯೆಗೆ ಅಧಿಸೂಚನೆ ಬಂದ ನಂತರ ಇಂತಹ ಕಾರ್ಯಕ್ಕೆ ಇಳಿದಿದ್ದಾರೆ' ಎಂದು ಪತ್ರದಲ್ಲಿ ಆರೋಪಿಸಲಾಗಿದೆ.

'ತಮ್ಮ ಅವಲಂಬಿತರೂ ಅಂಗವಿಕಲರು ಎಂದು ವರ್ಗಾವಣೆಯಿಂದ ವಿನಾಯಿತಿ ಪಡೆಯಲು ಅವಕಾಶವಿದೆ. ಇದನ್ನೂ ಕೆಲವರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ನಿಜವಾಗಿಯೂ ಅಂಗವಿಕಲರಾಗಿರುವ ಪ್ರಾಧ್ಯಾಪಕರಿಗೆ ಇದರಿಂದ ಅನ್ಯಾಯವಾಗುತ್ತಿದೆ' ಎಂದಿದ್ದಾರೆ.

'ವಂಚನೆ ತಪ್ಪಿಸಲು ಇಲಾಖೆಯ ಆಯುಕ್ತರ ಎದುರಿನಲ್ಲಿಯೇ ತಜ್ಞ ವೈದ್ಯರಿಂದ ತಪಾಸಣೆ ನಡೆಸಬೇಕು. ನೈಜತೆಯಿದ್ದಲ್ಲಿ ಪ್ರಮಾಣಪತ್ರ ಮಾನ್ಯ ಮಾಡಬೇಕು' ಎಂದು ಕೋರಿದ್ದಾರೆ.

ಹೆಲಿಕಾಪ್ಟರ್ ಪತನ, 7 ಸಾವು

ಒಂದನೇ ಪುಟದಿಂದ...

ರುದ್ರಪ್ರಯಾಗ್ ಜಿಲ್ಲೆಯ ಪ್ರಕೃತಿ ವಿಕೋಪ ನಿರ್ವಹಣಾ ಅಧಿಕಾರಿ ನಂದನ್ ಸಿಂಗ್ ರಜ್ವಾರ್ ಅವರ ಪ್ರಕಾರ, 'ಪ್ರತಿಕೂಲ ಹವಾಮಾನದ ಕಾರಣ ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ. ಇದು, ಅಪಘಾತಕ್ಕೆ ಕಾರಣವಾಗಿರಬಹುದು.'

'ಮೃತರಲ್ಲಿ 2 ವರ್ಷದ ಮಗು ಸೇರಿ ಆರು ಪ್ರಯಾಣಿಕರು, ಒಬ್ಬ ಸಿಬ್ಬಂದಿ ಸೇರಿದ್ದಾರೆ. ಹೆಲಿಕಾಪ್ಟರ್ ಬೆಳಿಗ್ಗೆ 5.10ಕ್ಕೆ ನಿರ್ಗಮಿಸಿದ್ದು, ಕೇದಾರನಾಥ ಹೆಲಿಪ್ಯಾಡ್‌ನಲ್ಲಿ 5.18ಕ್ಕೆ ಇಳಿಸಲಾಗಿತ್ತು. ಮತ್ತೆ 5.19ಕ್ಕೆ ಅಲ್ಲಿಂದ ಟೇಕ್‌ಆಫ್ ಆಗಿತ್ತು' ಎಂದು ತಿಳಿಸಿದ್ದಾರೆ.

ಮೃತರು ಮಹಾರಾಷ್ಟ್ರ, ರಾಜಸ್ಥಾನ, ಉತ್ತರಾಖಂಡ, ಉತ್ತರ ಪ್ರದೇಶದವರು. ಪೈಲಟ್ ರಾಜವೀರ್ ಸಿಂಗ್ ಚೌಹಾಣ್ ಈ ಹಿಂದೆ ಭಾರತೀಯ ಸೇನೆಯಲ್ಲಿ 15 ವರ್ಷ ಕೆಲಸ ಮಾಡಿದ್ದು, ವಿಸ್ತೃತ ಸೇವಾ ಅನುಭವ ಹೊಂದಿದ್ದರು.

ಸದ್ಯ, ಜೈಪುರದ ನಿವಾಸಿಯಾಗಿರುವ ಚೌಹಾಣ್ ಅವರು ಆರ್ಯನ್ ಏವಿಯೇಷನ್ ಸಂಸ್ಥೆಯಲ್ಲಿ 2024ರ ಅಕ್ಟೋಬರ್‌ನಿಂದಲೂ ಪೈಲಟ್ ಆಗಿ ಕಾರ್ಯನಿರ್ವಹಿಸುತ್ತಿದ್ದರು.

ಪೈಲಟ್ ಹೊರತುಪಡಿಸಿ ಮಹಾರಾಷ್ಟ್ರದ ಉದ್ಯಮಿ ರಾಜಕುಮಾರ್ ಜೈಸ್ವಾಲ್, ಅವರ ಪತ್ನಿ ಶ್ರದ್ಧಾ, ಇವರ ಪುತ್ರಿ ಕಾಶಿ (2), ಬದರಿನಾಥ ದೇಗುಲ ಟ್ರಸ್ಟ್ ಸದಸ್ಯ ವಿಕ್ರಮ್ ಸಿಂಗ್ ರಾವುತ್, ಉತ್ತರ ಪ್ರದೇಶದ ವಿನೋದಾ ದೇವಿ (66), ತುಷ್ಟಿಸಿಂಗ್ (19) ಮೃತಪಟ್ಟಿದ್ದಾರೆ.

ತನಿಖೆ: 'ಹೆಲಿಕಾಪ್ಟರ್ ಅವಘಡದ ಕುರಿತು ವೈಮಾನಿಕ ಅಪಘಾತ ತನಿಖಾ ಮಂಡಳಿ (ಎಎಐಬಿ) ತನಿಖೆ ನಡೆಸಲಿದೆ' ಎಂದು ನಾಗರಿಕ ವಿಮಾನಯಾನ ಸಚಿವಾಲಯ ಪ್ರಕಟಿಸಿದೆ.

ಮುಂಜಾಗ್ರತಾ ಕ್ರಮವಾಗಿ ನಾಗರಿಕ ವಿಮಾನಯಾನ ನಿರ್ದೇಶನಾಲಯವು (ಡಿಜಿಸಿಎ) ಯಾತ್ರಾ ಸ್ಥಳಗಳಾದ ಕೇದಾರನಾಥ, ಬದರಿನಾಥ, ಯಮುನೋತ್ರಿ, ಗಂಗೋತ್ರಿಗೆ ಎರಡು ದಿನ ಹೆಲಿಕಾಪ್ಟರ್ ಪ್ರಯಾಣ ರದ್ದುಪಡಿಸಿದೆ.

ಈ ವರ್ಷದಲ್ಲಿನ ಐದನೇ ಅಪಘಾತ

ಮುಂಬೈ: ಉತ್ತರಾಖಂಡದಲ್ಲಿ ಇತ್ತೀಚೆಗೆ ನಡೆದ ಹೆಲಿಕಾಪ್ಟರ್ ದುರಂತದ ಐದನೇ ಪ್ರಕರಣ ಇದಾಗಿದೆ.

ಹಿಂದಿನ ಅವಗಢಗಳ ವಿವರ ಹೀಗಿದೆ:

- ಮೇ 8: ಗಂಗೋತ್ರಿ ಧಾಮ್‌ಗೆ ತೆರಳುತ್ತಿದ್ದ ಹೆಲಿಕಾಪ್ಟರ್ ಗಂಗಾನಾನಿ ನಾಗರಾಜ ದೇವಸ್ಥಾನದ ಬಳಿ ಬೆಟ್ಟಪ್ರದೇಶದಲ್ಲಿ ಅಪಘಾತಕ್ಕೀಡಾಗಿತ್ತು. 6 ಮಂದಿ ಮೃತಪಟ್ಟಿದ್ದರು.
- ಮೇ 12: ಪೈಲಟ್‌ನ ನಿಯಂತ್ರಣ ತಪ್ಪಿದ್ದ ಹೆಲಿಕಾಪ್ಟರ್, ಬದರೀನಾಥ ಹೆಲಿಪ್ಯಾಡ್‌ನಿಂದ ಟೇಕ್ ಆಫ್ ಆಗಿದ್ದ ಕೆಲ ಹೊತ್ತಿನಲ್ಲೇ ಅಪಘಾತಕ್ಕೀಡಾಗಿದ್ದು, ನಿಲುಗಡೆ ಮಾಡಿದ್ದ ವಾಹನಗಳಿಗೆ ಅಪ್ಪಳಿಸಿತ್ತು. ಜೀವಹಾನಿ ಆಗಿರಲಿಲ್ಲ.
- ಮೇ 17: ಹೃಷಿಕೇಶದ ಎಐಐಎಂಎಸ್ ನಿಯೋಜಿಸಿದ್ದ ಏರ್ ಆಂಬುಲೆನ್ಸ್, ಕೇದಾರನಾಥ ಹೆಲಿಪ್ಯಾಡ್ ಬಳಿ ಅಪಘಾತಕ್ಕೆ ಈಡಾಗಿತ್ತು. ಹೆಲಿಕಾಪ್ಟರ್ ಹಿಂಬದಿಯ ಭಾಗ ನೆಲಕ್ಕೆ ತಗುಲಿದ್ದು, ಅಪಘಾತಕ್ಕೆ ಕಾರಣವಾಗಿತ್ತು. ಆಗ ಹೆಲಿಕಾಪ್ಟರ್‌ನಲ್ಲಿ ಪೈಲಟ್, ವೈದ್ಯ ಮತ್ತು ಶುಶ್ರೂಷಕ ಇದ್ದು, ಅದೃಷ್ಟವಶಾತ್ ಪಾರಾಗಿದ್ದರು.
- ಜೂನ್ 7: ಕೇದಾರನಾಥಕ್ಕೆ ತೆರಳುತ್ತಿದ್ದ ಹೆಲಿಕಾಪ್ಟರ್ ಗುಪ್ತಕಾಶಿ–ಗೌರಿಕುಂಡ ಹೆದ್ದಾರಿಯಲ್ಲಿ ತಾಂತ್ರಿಕ ದೋಷದ ಕಾರಣ ತುರ್ತು ಭೂಸ್ಪರ್ಶ ಮಾಡಿತ್ತು. ಪೈಲಟ್ ಗಾಯಗೊಂಡಿದ್ದು, ಐವರು ಯಾತ್ರಿಕರು ಪಾರಾಗಿದ್ದರು.

ತಜ್ಞರ ಸಮಿತಿ ರಚನೆ

ಡೆಹ್ರಾಡೂನ್ (ಪಿಟಿಐ): ಚಾರ್‌ಧಾಮ್ ಯಾತ್ರೆಯ ಮಾರ್ಗದಲ್ಲಿ ಇತ್ತೀಚೆಗೆ ಆಗಾಗ್ಗೆ ಹೆಲಿಕಾಪ್ಟರ್ ಅಪಘಾತ ಸಂಭವಿಸುತ್ತಿರುವ ಹಿನ್ನೆಲೆಯಲ್ಲಿ, ಹೆಲಿಕಾಪ್ಟರ್ ನಿರ್ವಹಣೆ ಮತ್ತು ಸುರಕ್ಷತಾ ಕ್ರಮ ಕುರಿತು ಹೊಸ ಮಾರ್ಗಸೂಚಿ ಹೊರಡಿಸಲು ಉತ್ತರಾಖಂಡ ಸರ್ಕಾರ ನಿರ್ಧರಿಸಿದೆ.

ಈ ಕುರಿತು ಅಗತ್ಯ ಸಲಹೆ ನೀಡಲು ತಜ್ಞರ ಸಮಿತಿ ರಚಿಸುವಂತೆ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಮುಖ್ಯ ಕಾರ್ಯದರ್ಶಿಗೆ ಆದೇಶಿಸಿದ್ದಾರೆ.

ಎಲ್ಲ ಪ್ರಯಾಣಿಕರ ಸುರಕ್ಷತೆ ಕುರಿತು ಖಾತರಿಪಡಿಸಿಕೊಂಡ ನಂತರವೇ ಹೆಲಿಕಾಪ್ಟರ್ ಸೇವೆ ಆರಂಭವಾಗಲಿದೆ. ಯಾತ್ರಿಗಳ ಸುರಕ್ಷತೆಯನ್ನು ಕಡೆಗಣಿಸಲಾಗದು ಎಂದು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ತಿಳಿಸಿದ್ದಾರೆ.

ಪ್ರೊ ಲೀಗ್ ಹಾಕಿ: ಆಸ್ಟ್ರೇಲಿಯಾ ಪುರುಷರ ತಂಡಕ್ಕೆ ಗೆಲುವು

ಸೋಲಿನ ಸರಪಳಿಯಿಂದ ಹೊರಬರದ ಭಾರತ

ಆ್ಯಂಟ್‌ವರ್ಪ್ (ಪಿಟಿಐ): ಎಫ್‌ಐಎಚ್ ಪ್ರೊ ಲೀಗ್‌ನ ಯುರೋಪಿಯನ್ ಲೆಗ್‌ನಲ್ಲಿ ಭಾರತದ ಪುರುಷರ ಹಾಕಿ ತಂಡದ ಕಳಪೆ ಪ್ರದರ್ಶನ ಮುಂದುವರಿದಿದ್ದು, ಸತತ ಆರನೇ ಸೋಲು ಅನುಭವಿಸಿದೆ. ಭಾನುವಾರ ನಡೆದ ಪಂದ್ಯದಲ್ಲಿ 2–3 ಅಂತರದಿಂದ ಆಸ್ಟ್ರೇಲಿಯಾ ವಿರುದ್ಧ ಸೋತಿದೆ.

ಇದರೊಂದಿಗೆ ಭಾರತ ತಂಡವು ನೆದರ್ಲೆಂಡ್ಸ್, ಅರ್ಜೆಂಟೀನಾ ಮತ್ತು ಆಸ್ಟ್ರೇಲಿಯಾ ವಿರುದ್ಧ ಇಲ್ಲಿ ತಲಾ ಎರಡು ಪಂದ್ಯಗಳಲ್ಲೂ ಸೋತಂತಾಗಿದೆ. ಶನಿವಾರ ಇಷ್ಟೇ ಗೋಲುಗಳ (2–3) ಅಂತರದಲ್ಲಿ ಭಾರತ ತಂಡವು ಆಸ್ಟ್ರೇಲಿಯಾಕ್ಕೆ ಮಣಿದಿತ್ತು. ಇದೇ 21ರಂದು ಮುಂದಿನ ಪಂದ್ಯದಲ್ಲಿ ಬೆಲ್ಜಿಯಂ ವಿರುದ್ಧ ಆಡಲಿದೆ.

ಭಾರತದ ಪರ ಸಂಜಯ್ (3ನೇ ನಿಮಿಷ), ದಿಲ್‌ಪ್ರೀತ್ ಸಿಂಗ್ (36ನೇ ನಿ.) ಗೋಲು ಗಳಿಸಿದರು. ಆಸ್ಟ್ರೇಲಿಯಾ ಪರ ಟಿಮ್ ಬ್ರಾಂಡ್ (4ನೇ ನಿ.), ಬ್ಲೇಕ್ ಗೋವರ್ಸ್ (5ನೇ ನಿ.) ಮತ್ತು ಕೂಪರ್ ಬರ್ನ್ಸ್ (18ನೇ ನಿ.) ಚೆಂಡನ್ನು ಗುರಿ ಸೇರಿಸಿದರು.

ಭಾರತ ತಂಡದ ಮನ್‌ಪ್ರೀತ್ ಸಿಂಗ್ ಅವರಿಗೆ ಇದು 400ನೇ ಪಂದ್ಯವಾಗಿತ್ತು. ಅದನ್ನು ಸ್ಮರಣೀಯಗೊಳಿಸುವಲ್ಲಿ ತಂಡದ ಆಟಗಾರರು ಎಡವಿದರು.

ಭಾರತ ತಂಡವು ಉತ್ತಮ ಆರಂಭ ಪಡೆದಿತ್ತು. ಮೂರನೇ ನಿಮಿಷದಲ್ಲಿ ಸಂಜಯ್ ಅವರು ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಚೆಂಡನ್ನು ಗುರಿ ಸೇರಿಸಿ ತಂಡಕ್ಕೆ ಆರಂಭಿಕ ಮುನ್ನಡೆ ಒದಗಿಸಿದರು. ಆದರೆ, ನಂತರದ ಎರಡು ನಿಮಿಷಗಳ ಅಂತರದಲ್ಲಿ ಟಿಮ್ ಮತ್ತು ಬ್ಲೇಕ್ ಅವರು ತಲಾ ಒಂದು ಗೋಲು ಗಳಿಸುವ ಮೂಲಕ ಆಸ್ಟ್ರೇಲಿಯಾಕ್ಕೆ ಮೇಲುಗೈ ಒದಗಿಸಿಕೊಟ್ಟರು. ಬಳಿಕ ಸತತ ನಾಲ್ಕು ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಆಸ್ಟ್ರೇಲಿಯಾ ಪಡೆಯಿತು. ಕೊನೆಯ ಅವಕಾಶದಲ್ಲಿ ಕೂಪರ್, ಗೋಲು ಗಳಿಸಿ ಮುನ್ನಡೆ ಹೆಚ್ಚಿಸಿದರು.

27ನೇ ನಿಮಿಷದಲ್ಲಿ ಭಾರತಕ್ಕೆ ಎರಡು ಪೆನಾಲ್ಟಿ ಕಾರ್ನರ್ ಅವಕಾಶ ಲಭಿಸಿದರೂ ಅದರ ಲಾಭ ಪಡೆಯುವಲ್ಲಿ ತಂಡ ಎಡವಿತು. ಮೂರನೇ ಕ್ವಾರ್ಟರ್‌ನಲ್ಲಿ ದಿಲ್‌ಪ್ರೀತ್ ಅವರು ಫೀಲ್ಡ್ ಗೋಲು ಗಳಿಸಿ ಭಾರತದ ಹಿನ್ನಡೆಯನ್ನು ಕೊಂಚ ತಗ್ಗಿಸಿದರು.

ಕೊನೆಯ 10 ನಿಮಿಷಗಳಲ್ಲಿ ಎದುರಾಳಿ ತಂಡವು ಸತತ ಮೂರು ಪೆನಾಲ್ಟಿ ಕಾರ್ನರ್ ಅವಕಾಶ ಪಡೆಯಿತು. ಗೋಲ್‌ಕೀಪರ್ ಕೃಷ್ಣ ಬಹದ್ದೂರ್ ಪಾಠಕ್ ಅದನ್ನು ಯಶಸ್ವಿಯಾಗಿ ತಡೆದರು.

ಭಾರತ (ಎಡ) ಮತ್ತು ಆಸ್ಟ್ರೇಲಿಯಾ ಆಟಗಾರರ ಪೈಪೋಟಿ –ಎಕ್ಸ್ ಚಿತ್ರ

ಟೆಟೆ ಬಳಗಕ್ಕೂ ಸೋಲು

ಲಂಡನ್ (ಪಿಟಿಐ): ಕೊನೆಯ ನಿಮಿಷದಲ್ಲಿ ಗೋಲು ಬಿಟ್ಟುಕೊಟ್ಟ ಭಾರತದ ಮಹಿಳೆಯರು ಎಫ್‌ಐಎಚ್ ಪ್ರೊ ಹಾಕಿ ಲೀಗ್ ಪಂದ್ಯದಲ್ಲಿ ಭಾನುವಾರ 1–2 ಗೋಲುಗಳಿಂದ ಆಸ್ಟ್ರೇಲಿಯಾ ವಿರುದ್ಧ ಪರಾಭವಗೊಂಡರು.

ಶನಿವಾರ 2-3ರಿಂದ ಇದೇ ಎದುರಾಳಿ ತಂಡದ ವಿರುದ್ಧ ಸೋತಿದ್ದ ಭಾರತ, ರಿವರ್ಸ್ ಲೆಗ್‌ನ ಪಂದ್ಯದಲ್ಲಿ ಸಮಾನ ಹೋರಾಟ ನಡೆಸಿ ಕೊನೆಯ ಕ್ಷಣದಲ್ಲಿ ಎಡವಿತು. ಸಲೀಮಾ ಟೆಟೆ ಬಳಗವು ತನ್ನ ಮುಂದಿನ ಪಂದ್ಯದಲ್ಲಿ ಮಂಗಳವಾರ ಅರ್ಜೆಂಟೀನಾ ತಂಡವನ್ನು ಎದುರಿಸಲಿದೆ.

ವೈಷ್ಣವಿ ಫಾಲ್ಕೆ (3ನೇ ನಿಮಿಷ) ಭಾರತದ ಪರ ಏಕೈಕ ಗೋಲು ದಾಖಲಿಸಿದರು. ಆಸ್ಟ್ರೇಲಿಯಾ ಪರ ಆ್ಯಮಿ ಲಾಟನ್ (37ನೇ ನಿ) ಮತ್ತು ಲೆಕ್ಸಿ ಪಿಕರಿಂಗ್ (60ನೇ ನಿ) ಗೋಲು ತಂದಿತ್ತರು.

ALVA'S
Education Foundation®
ALVA'S
VIDYAGIRI, MOODUBIDIRE, D.K. – 574227
ACHIEVEMENTS IN NEET 2025
ABOVE 600 MARKS 01 STUDENT
ABOVE 550 MARKS 21 STUDENTS
ABOVE 500 MARKS 116 STUDENTS
ABOVE 450 MARKS 401 STUDENTS
ABOVE 400 MARKS 596 STUDENTS
450+ STUDENTS
ENSURED THEIR MBBS ADMISSION IN GOVT QUOTA FROM ALVA'S VIDYAGIRI SINGLE CAMPUS THROUGH CLASS ROOM TEACHING IN 2025
601 RAGHAVENDRA SHANKAR SUNNAL
597 AKSHAY M HEGDE
587 SHIVAPRASAD G.C
584 PANDURANGA G V
581 TUSHAR GHANASHYAM PATEL
580 PREKSHA M S
580 VAIBHAV M
579 ARUNGOUDA PATIL
568 ARUN JAMBIGI
567 SHASHANK UDUPA
567 MOHAN D
567 TUSHAR S AWATI
565 TUSHAR UDUPA
564 JESHWANTH C
561 SHRINIVASRADDI R T
559 VIKAS GOWDA B G
558 SRUJAN V A
557 GANESH
556 PRAJWAL S K
554 VARUN SHETTY
552 PAVAN MANJUNATH S
548 PRAMOD ARAKAL
548 SIDDARTH B KARALE
543 MANOHAR BASAPPA
542 MOHITH D GOWDA K
540 GANESH RAJU KARKI
540 ROHITH B M
540 VISHRUTHI
539 AKSHAY M
538 CHAITHANYA
538 PRANAAM N SHETTY
538 AVES HASAN ASIFALI MUJAWAR
537 NAGARAJ SHIVANAND MUGALI
537 HITHESH GOWDA
536 SUNIL S B
535 DHANUSH GOWDA C S
535 KISHORE V
533 AMINA IFFA
532 VIJET G GOWDA
532 SWALEHA SHAMIM SHAIKH
531 AKSHARA S
529 HARSH KHADE
529 NISARGA P
529 PRANJALI M BHAT
528 VINAYAK KHOT
528 VARSHA M
527 YASHAVANTH BANNAD
527 RAJA YADU VAMSHI YADAV
527 SHARAD S VADAGAVE
526 MADAGOND TUKARAM
525 KANDULA BANU PRASAD
525 PRAPURNA NAGAPPA BARIGIDAD
525 SAMARTH MAHABALESHWAR MASUTI
525 LAKHAN GOROBAL
524 HARSHA HANCHANALE
524 SAKSHI RAGHAVENDRA C
524 DHANYA
523 PREM KUMAR
523 TANISHA
522 MALLIKARJUN BHIMASHEN KANKANAWADI
522 SANJANA H C
522 SONALI BASAPPA CHANNAL
521 TARUN J
521 MEGHANA M Y
520 MANIKANTH
520 CHETAN S KUPPASHETTER
520 SHUBHA M
520 VEERU PATIL
520 ADARSH MOHAN SORI
519 SANGAMESH BG
519 PRADEEP SHAGANE
519 KEERTHAN KUMAR
518 GAGAN M B
518 UJWALA T N
517 SANJANA SHASHIKANT HALYAL
517 ATHARVA GOUNDADKAR
517 SANJANA MANJUNATH GOWDA
517 VISHAKHA
516 RAGHAVENDRA MK
515 NISHCHITH RAJ CE
515 SAMMED S SHETTY
515 JAYAVARDHANA H S
515 MAHAMMADSAMI TAPAL
515 NAMISH H N
514 AKASH V S
512 AKSHAY L
512 KIRAN KALLAPPA TAVATE
512 SANSKRUTHI G C
512 MURALI DEVARAJU A
511 SAGAR BALAPPA SHEGUNASI
511 SHIVAKUMAR C G
511 SWAMY PT
511 VINOD S NANDGAON
510 VIKAS SAJJAN
509 NETHRAPAL
509 MANOGNA N
509 H A ROHITH KUMAR YADAV
508 P SATYA SAI
508 MANJUNATHA T M
507 VIBHA
507 LIKHITH R
507 LIKHA TADAP
506 ARPITA SHANKAR BAGALI
506 MANASWIN SRI MURALI
505 PALLAV B S
505 SANDESH VR
504 SOUJANYA MALLAPPA GALABHI
504 SAMPADA J
504 REZEL VIOLA RODRIGUES
504 TANISHKA SHETTY
504 NISHCHITHA U H
501 ADITHI H N
501 GAGAN B V
501 AMRUTH KUMAR H
500 NIHAR D
500 CHETHAN BALAPPA H
& many more...
30 YEARS EXPERIENCE IN COACHING FOR COMPETITIVE EXAMS
NEET LONG TERM 2026 ADMISSIONS OPEN
NEET RANK ENHANCEMENT PROGRAM
SPECIAL FEE CONCESSION AVAILABLE FOR MERITORIOUS STUDENTS
8884477588, 8884499727
ADMISSIONS OPEN 2025
SCIENCE ▸ PCMB | PCMC | PCMS | PCME
NEET | CET | JEE | NATA | NDA
COMMERCE ▸ EBAC | EBAS | EBAH | BASBm | BAEBm
CA | CS | NDA | CIVIL SERVICE
ARTS ▸ HEPS
CLAT | NDA | CIVIL SERVICE
63663 77825 | 63663 77827
WE HAVE NO BRANCHES